
ಸಂಪುಟ 20 ಸಂಚಿಕೆ 50
ಡಿಸೆಂಬರ್ 12, 1999 ಬೆಲೆ ರೂ. 3.00
ದುಡಿವ ಜನರ ಪ್ರಾಣಮಿತ್ರ

ಐಕ್ಯರಂಗ



ವಿಮೆ-ಬ್ಯಾಂಕ್ ಖಾಸಗೀಕರಣ ದೇಶದ ಸ್ವಾತಂತ್ರ್ಯ ಹರಣ

ಜೋಷಿ ಪರಿವಾರದ ಸಂಸ್ಕೃತಿ ದರ್ಶನ

ಕೃಷ್ಣ ಜಲವಿವಾದ: ಭಾವೋದ್ರೇಕ ಬೇಡ

ಬಿ.ಎಚ್.ಇ.ಎಲ್ (ಭೇಲ್) ಕಂಪನಿಗೆ ವಂಚನೆ ಖಂಡನೆ

ಸಂಪಾದಕೀಯ


ಬೆಂಗಳೂರಿನ ಬಿಡದಿ ಬಳಿ ವಿದ್ಯುತ್ ಘಟಕದ ನಿರ್ಮಾಣ ಕಾರ್ಯವನ್ನು ಬಹುರಾಷ್ಟ್ರೀಯ ಕಂಪನಿಯಾದ ಎ.ಬಿ.ಬಿ.ಗೆ ಕೊಡಲು ಕರ್ನಾಟಕ ಸರ್ಕಾರ ಉತ್ಸುಕವಾಗಿರುವ ಸುದ್ದಿ ದಟ್ಟವಾಗಿ ಹಬ್ಬಿದೆ. ಕರ್ನಾಟಕ ರಾಜ್ಯವು ಎದುರಿಸುತ್ತಿರುವ ತೀವ್ರ ತರವಾದ ವಿದ್ಯುತ್ ಕೊರತೆ ನೀಗುವಲ್ಲಿ ಈ ಘಟಕದಿಂದ ಸಹಾಯಕವಾಗಲಿದೆ ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಇಂತಹ ಘಟಕಗಳ ನಿರ್ಮಾಣ ಅಥವಾ ಯಾವುದೇ ಒಂದು ನಿರ್ಮಾಣದ ಕೆಲಸವನ್ನು ನಿರೀಕ್ಷಿತ ಗುಣಮಟ್ಟ, ಕಾರ್ಯ ಸಾಮಾರ್ಥ್ಯ, ಬೆಲೆ ನಿಗದಿ, ರಾಷ್ಟ್ರೀಯ ಹಿತ ಇವುಗಳು ಮುಖ್ಯ ಅಂಶಗಳಲ್ಲಿ ಗಮನಿಸಿ ಕೆಲಸ ವಹಿಸಿಕೊಡಬೇಕು.

ಆದರೆ ಮುಖ್ಯಮಂತ್ರಿ ಕೃಷ್ಣರವರ ಸರ್ಕಾರ ಬಿಡದಿ ವಿದ್ಯುತ್ ಘಟಕದ ವಿಷಯದಲ್ಲಿ ಎ.ಬಿ.ಬಿ. ಕಂಪನಿಗೆ ನೀಡುವ ತರಾತುರಿಯಲ್ಲಿ ಈಗಿರುವ ನಿರ್ಧರಿತ ನಿಯಮಗಳನ್ನು ಗಾಳಿಗೆ ತೂರಿ, ಏಕಪಕ್ಷೀಯವಾದ ಆಯ್ಕೆಗೆ ಅವಕಾಶ ಕಲ್ಪಿಸಿದೆ. ಅಂದರೆ ಮುಖ್ಯಮಂತ್ರಿಗಳು ಎಲ್ಲೆಡೆ ಸಾರಿಕೊಂಡು ಬಂದಂತೆ ಅವರ 'ಪಾರದರ್ಶಕ' ನೀತಿಗೆ ಇದು ವಿರುದ್ಧವಾಗಿದೆ.

ಇಂತಹವುಗಳ ನಿರ್ಮಾಣದಲ್ಲಿ ಎ.ಬಿ.ಬಿ. ಕಂಪನಿಯೊಂದೇ ಸಮರ್ಥವೇ? ಇಲ್ಲ ಖಂಡಿತಕ್ಕೂ ಇಲ್ಲ. ನಮ್ಮ ದೇಶದ ಅತ್ಯಂತ ಬೃಹತ್, ಧೀಮಂತ ಕೈಗಾರಿಕೆಯಾಗಿ, ನಾಡನ್ನು ಬೆಳಸಿ, ಬೆಳಗಿಸುವುದರಲ್ಲಿ ಪ್ರಮುಖ ಪಾತ್ರವಹಿಸಿರುವ ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಲಿಮಿಟೆಡ್ (ಬಿ.ಹೆಚ್.ಇ.ಎಲ್) ಸಂಸ್ಥೆಯು ಬಿಡದಿ ಬಳಿಯಲ್ಲಿ ನಿರ್ಮಿಸಲಿರುವ ವಿದ್ಯುತ್ ಘಟಕವನ್ನು ಲೀಲಾಜಾಲವಾಗಿ, ಸಮರ್ಥ, ಸಮರ್ಪಕವಾಗಿ ಅತ್ಯಂತ ಒಳ್ಳೆ ಗುಣಮಟ್ಟದಲ್ಲಿ ನಿರ್ಮಿಸಬಲ್ಲದು. ಭಾರತ ದೇಶದ ಬಹುತೇಕ ವಿದ್ಯುತ್ ಹಾಗೂ ಎಲೆಕ್ಟ್ರಾನಿಕ್ಸ್ ವಲಯದಲ್ಲಿ ಅಪೂರ್ವ ಕೊಡುಗೆಗಳನ್ನು ಬಿ.ಹೆಚ್.ಇ.ಎಲ್. ನೀಡಿದೆ. ದೇಶೀಯವಾಗಿ, ಬೆಳೆದಿದೆ.

ಇಡೀ ನಮ್ಮ ಬಿ.ಹೆಚ್.ಇ.ಎಲ್. ಸಂಸ್ಥೆಯು ಮಧ್ಯ ಪ್ರಾಚ್ಯ, ಆಫ್ರಿಕಾ, ಮುಂತಾದ ದೇಶಗಳಲ್ಲಿ ಅಮೇರಿಕಾದ ಭಾರೀ ದೈತ್ಯ ಬಹುರಾಷ್ಟ್ರೀಯ ಕಂಪನಿಗಳನ್ನು (ಎ.ಬಿ.ಬಿ. ಒಳಗೊಂಡು) ಟೆಂಡರ್‌ಗಳಲ್ಲಿ ಸೋಲಿಸಿ, ಅವರಿಗಿಂತಲೂ ಕಡಿಮೆ ಬೆಲೆಯಲ್ಲಿ ಉತ್ತಮವಾಗಿ ನಿರ್ಮಿಸಿ ಜನ ಮೆಚ್ಚುಗೆಗೆ ಪಾತ್ರವಾಗಿದೆ. ಅಂತಹ ಬಹುರಾಷ್ಟ್ರೀಯ ಕಂಪನಿಗಳೇ ಭಾರತದ ಸ್ವಾವಲಂಬನೆಗೆ ಕಾರಣವಾದ ಬಿ.ಹೆಚ್.ಇ.ಎಲ್ ನಂತಹ ಸಾರ್ವಜನಿಕ ಉದ್ದಿಮೆಗಳನ್ನು ಶಾಶ್ವತವಾಗಿ ನಾಶಗೊಳಿಸಲು ನಿರಂತರ ಮಸಲತ್ತು ನಡೆಸುತ್ತಿಲೇ ಬಂದಿವೆ. ಉದಾರೀಕರಣ ಜಾಗತೀಕರಣ ಆರಂಭಗೊಂಡ ನಂತರ ಮಂತೂ ಮೊದಲ ಧಾಳಿಯ ಕೇಂದ್ರಗಳೇ ಈ ಸಾರ್ವಜನಿಕ ವಲಯದ ಕೈಗಾರಿಕೆಗಳು. ಇಂತಹ ಸಂಘರ್ಷದ ಸ್ಥಿತಿಯೆದುರು ನಮ್ಮ ನಾಡಿನ ಕೈಗಾರಿಕೆಗಳನ್ನು ರಕ್ಷಿಸುವುದು ಮೊದಲ ಕರ್ತವ್ಯವಾಗಬೇಕಿತ್ತು.

ಆದರೆ ರಾಜ್ಯದಲ್ಲಿ ಮತ್ತು ಕೇಂದ್ರದಲ್ಲಿ ಆಳುವವರಿಗೆ ವಿದೇಶಿ ಕಂಪನಿಗಳೇ ಎಲ್ಲಾ ಆಗಿರಬೇಕಿದೆ. ಬಹುರಾಷ್ಟ್ರೀಯ ಕಂಪನಿಗಳ ಬಗ್ಗೆ ಹುಸಿ ವ್ಯಾಮೋಹ ತಟ್ಟಿದೆ. ಕರ್ನಾಟಕ ಸರ್ಕಾರವು ಎ.ಬಿ.ಬಿ. ಯಂತಹ ಕಂಪನಿಯ ಟೆಂಡರ್ ಹೆಚ್ಚಾದರೂ ಅವರಿಗೇ ನೀಡಲು ಮುಂದಾಗಿರುವ ಹಲವಾರು ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಹಾಗಾದರೆ ಕೃಷ್ಣರವರ ಪಾರದರ್ಶಕ ನೀತಿಯೆಲ್ಲಿ? ಇತರರ ಟೆಂಡರ್ ಕಡೆಗಣಿಸಿ ಎ.ಬಿ.ಬಿ. ಒಪ್ಪಿಸಲು ಪಡೆದಿರಬಹುದಾದ ಹಣದ ವ್ಯವಹಾರ ಎಷ್ಟು? ಎಂಬುದು ಬಯಲಾಗಬೇಕಷ್ಟೇ ಬಹುರಾಷ್ಟ್ರೀಯ ಕಂಪನಿಗಳ ಎಂಜಲಿಗೆ ಆಸೆಪಡುವ, ಆ ಮೂಲಕ ದೇಶದ ಬೆನ್ನೆಲುಬಾಗಿರುವ ಕೈಗಾರಿಕೆಗಳನ್ನು ನಾಶಗೊಳಿಸುವುದನ್ನು ಪ್ರತಿಭಟಿಸಲೇ ಬೇಕು. ಈಗ ಎದ್ದಿರುವ ಪ್ರಶ್ನೆಗೆ ಮುಖ್ಯಮಂತ್ರಿ ಕೃಷ್ಣ ಸ್ಪಷ್ಟನೆ ನೀಡಬೇಕು. ಸತ್ಯ ಏನೆಂಬುದು ಹೊರಬರಲೇಬೇಕು. ವಸ್ತು ನಿಷ್ಠ ದೃಷ್ಟಿಯಿಂದ ಹಾಗೂ ರಾಷ್ಟ್ರದ ಹಿತದೃಷ್ಟಿಯಿಂದ ಕಡಿಮೆ ಟೆಂಡರ್ ನೀಡಿರುವ ಹಾಗೂ ಸಮರ್ಥ ಅತ್ಯಂತ ವಾದ ಬಿ.ಎಚ್.ಇ.ಎಲ್.ಗೆ ಬಿಡದಿ ಘಟಕದ ನಿರ್ಮಾಣದ ಹೊಣೆ ನೀಡಬೇಕು.



ಕೃಪೆ: ಇಂಡಿಯನ್ ಎಕ್ಸ್‌ಪ್ರೆಸ್

ಪೇಜಾವರರ ಗೌರವ ಸಮಾರಂಭ

ಮುರಳಿ ಮನೋಹರ ಜೋಷಿಯವರ ಪರಿವಾರ ಸಂಸ್ಕೃತಿ ದರ್ಶನಗಳು

ಜಿ.ವಿ.ಶ್ರೀರಾಮರೆಡ್ಡಿ
ಮಾಜಿ ಶಾಸಕರು,
ಮತ್ತು ಜಿ.ಎನ್.ನಾಗರಾಜ್

ಸಂಘ ಪರಿವಾರದ ಪರಧರ್ಮ ದ್ವೇಷ ಮತ್ತು ಅವರ ಫ್ಯಾಸಿಸ್ಟ್ ಮನೋಭಾವವನ್ನು ಅದರ ಅತ್ಯುನ್ನತ ನಾಯಕರಲ್ಲೊಬ್ಬರಾದ ಮತ್ತು ಕೇಂದ್ರದಲ್ಲಿನ ಮಾನವ ಸಂಪನ್ಮೂಲ ಸಚಿವರಾದ ಮುರುಳಿ ಮನೋಹರ ಜೋಶಿ ಅವರು ಮತ್ತೊಮ್ಮೆ ಪ್ರಕಟಪಡಿಸಿದ್ದಾರೆ. ಅವರು 26 ನವೆಂಬರ್ 99 ರಂದು ಬೆಂಗಳೂರಿನ ನ್ಯಾಷನಲ್ ಕಾಲೇಜಿನ ಮೈದಾನದಲ್ಲಿ ಏರ್ಪಡಿಸಿದ್ದ ಉಡುಪಿ ಪೇಜಾವರ ಮಠದ ವಿಶ್ವೇಶ್ವರ ತೀರ್ಥ ಸ್ವಾಮೀಜಿ ಪೀಠಾರೋಹಣ ವಜ್ರಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ಮೂರುದಿನಗಳ ಕಾರ್ಯಕ್ರಮವನ್ನು ಉದ್ಘಾಟಿಸುತ್ತಾ ತಮ್ಮ ಅಣಿಮುತ್ತುಗಳನ್ನು ಈ ರೀತಿ ಉದುರಿಸಿದ್ದಾರೆ "ಎಲ್ಲಾ ಮೌಲ್ಯಗಳಿಗೂ ತಿಲಾಂಜಲಿ ಇತ್ತಿರುವ ಕೌಟುಂಬಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ಗಾಳಿಗೆ ತೂರಿ ಅತಂತ್ರವಾಗಿರುವ ಪಾಶ್ಚಿಮಾತ್ಯ ಬಜಾರ್ ಸಂಸ್ಕೃತಿ" ಇವು ಮಾನವ ಸಂಪನ್ಮೂಲ ಸಚಿವರಾದ ಮತ್ತು ಬಿಜೆಪಿ ಮತ್ತು ಸಂಘ ಪರಿವಾರದ ಮುಖ್ಯಸ್ಥ ಮುರುಳಿ ಮನೋಹರ ಜೋಶಿಯವರ ಅಣಿಮುತ್ತುಗಳು. ಇವರು ಬಿ.ಜೆ.ಪಿ. ಮತ್ತು ಸಂಘ ಪರಿವಾರದ ಮುಖ್ಯಸ್ಥರಾಗಿ ಈ ಅಣಿಮುತ್ತುಗಳನ್ನು ಉದುರಿಸಿದ್ದರೆ ಯಾರು ಆಶ್ಚರ್ಯ ಪಡಬೇಕಾಗಿಲ್ಲ. ಯಾಕೆಂದರೆ ಇವರ ಮತ್ತು ಇವರ ಸಂಘ ಪರಿವಾರದ ತಾತ್ವಿಕ ಹಿನ್ನೆಲೆ ಎಲ್ಲರಿಗೂ ಸರ್ವವಿದಿತ. ಆದರೆ ಇವರು ಭಾರತದ ಗಣತಂತ್ರದ ಪ್ರಜಾಪ್ರಭುತ್ವ ಸರ್ಕಾರದ ಸಂವಿಧಾನ ಬದ್ಧ ಸರ್ಕಾರದ ಕೇಂದ್ರ ಮಂತ್ರಿಗಳಾಗಿ ಈ ಮಾತುಗಳನ್ನು ಉಚ್ಛರಿಸಿರುವುದು ಗಂಡಾಂತರಕಾರಿಯಾಗಿದೆ. ಜಾತ್ಯಾತೀತ ಪ್ರಜಾಪ್ರಭುತ್ವದಲ್ಲಿನ ಸಂವಿಧಾನದ ಹೆಸರಿನಲ್ಲಿ ಕೇಂದ್ರದಲ್ಲಿ ಮಾನವ ಸಂಪನ್ಮೂಲ ಸಚಿವರಾಗಿ ಈ ರೀತಿಯ ಮಾನವವಿರೋಧಿ ಉವಾಚಗಳನ್ನು ಹೇಳಿರುವುದು ನಾವೆಲ್ಲರೂ ಆತಂಕಪಡಬೇಕಾಗಿರುವ ವಿಷಯ.

ಮುಂದುವರಿದು ಅದೇ ವೇದಿಕೆಯಿಂದ ಇವರು ಉಚ್ಛರಿಸಿರುವ ಅಣಿಮುತ್ತಗಳೆಂದರೆ 'ಪಾಶ್ಚಿಮಾತ್ಯರ ಬಜಾರ್ ಸಂಸ್ಕೃತಿಗೆ ವಿರುದ್ಧವಾಗಿ ನಾವು 'ಪರಿವಾರ್ ಸಂಸ್ಕೃತಿ' (ವಿಶ್ವ ಕುಟುಂಬ ಸಂಸ್ಕೃತಿ) ಯನ್ನು ವಿಶ್ವಕ್ಕೆ ನೀಡೋಣ" ಭಾರತೀಯ ದರ್ಶನ ಸಿದ್ಧಾಂತಗಳನ್ನು ಎತ್ತಿ ಹಿಡಿಯೋಣ ಎಂದು ಹೇಳಿದ್ದಾರೆ. ಒಂದು ಕಡೆ ಬೇರೊಂದು ಧರ್ಮ ಮತ್ತು ಸಂಸ್ಕೃತಿಯನ್ನು ಅವಹೇಳನ ಮಾಡುವ ಅವುಗಳ ವಿರುದ್ಧ ವಿಷವನ್ನು ಕಾರುವ ಫ್ಯಾಸಿಸ್ಟ್ ರೀತಿಯಲ್ಲಿ ಮಾತನಾಡುತ್ತಾ ಇನ್ನೊಂದು ಕಡೆ 'ಪರಿವಾರ' ಸಂಸ್ಕೃತಿ ದರ್ಶನ ಪರಂಪರೆಯ ಬಗ್ಗೆ ಹೆಮ್ಮೆ ಪಡುವ ಜೀವವಿರೋಧಿಗಳು ತಮ್ಮ ಅನಾಗರೀಕ ಮೌಲ್ಯಗಳನ್ನು ವೈಭವೀಕರಿಸುವ ಪ್ರಯತ್ನ ಇಲ್ಲಿ ನಡೆದಿದೆ.

ಇಲ್ಲಿ 'ಪರಿವಾರ ಸಂಸ್ಕೃತಿ' ಅಂದರೆ ವೈದಿಕ ಸಂಸ್ಕೃತಿ ಎಂದೆ ಭಾವಿಸಬೇಕು. ಇಲ್ಲಿಯುವರೆಗೆ ಆರೆಸ್ಸೆಸ್ ಪರಿವಾರ ಅಮಾನವೀಯವಾಗಿ ಪ್ರತಿಪಾದಿಸುತ್ತಿರುವ 'ಸತಿ'(ಸತ್ತ ಗಂಡನ ದೇಹದ ಜೊತೆಯಲ್ಲಿಯೇ ಅವನ ಜೀವಂತ ಹೆಂಡತಿಯನ್ನು ಸುಡುವುದು) ಪರಿವಾರ ಸಂಸ್ಕೃತಿಯ ಅಂಗವೇ. ನಸ್ತ್ರೀ ಸ್ವಾತಂತ್ರ್ಯ ಮರ್ಹತಿ, ಸ್ತ್ರೀ ಸ್ವಭಾವತಃ ಕುಲಟೆ, ಅವಳನ್ನು ಹದ್ದುಬಸ್ತಿನಲ್ಲಿಡಬೇಕು, ಸ್ತ್ರೀಯರು ಹಾಗೂ ಮನೆಯ ದಾಸ ಸಂಪಾದಿಸಿದ ಹಣ ಮನೆಯ ಯಜಮಾನನಿಗೇ ಸಲ್ಲಬೇಕಾದದ್ದು, ಮಹಿಳೆಯರಿಗೆ ವೇದಗಳನ್ನು ಓದುವ ಹಕ್ಕಿಲ್ಲ. ಅವರಿಗೆ ಪತಿಯೇ ಪರದೈವ ಎನ್ನುವ ಜನಜನಿತವಾದ ಅಮಾನವೀಯ ಪಾಳೆಯಗಾರಿ ಮೌಲ್ಯಗಳೇ ಇವರ ಪರಿವಾರ ಸಂಸ್ಕೃತಿ-ಮನುಸ್ಮೃತಿಯೇ ಈ ಪರಿವಾರ ಸಂಸ್ಕೃತಿಯ ಗೀತೆ, ಬೈಬಲ್ - ಇಂತಹ ಪರಿವಾರ ಸಂಸ್ಕೃತಿಯ ಪ್ರತಿಪಾದಕ ರಾಗ ಬೇಕೆ?

ಈ ಸಂಘಪರಿವಾರದವರು ಇಂದು ಇಡೀ ದೇಶದ ಮೇಲೆ ಹೇರ ಹೊರಟಿರುವ 'ಭವ್ಯ ಪರಂಪರೆಯ ರಕ್ಷಣೆ', 'ಸಂಸ್ಕೃತಿಯ ಪುನರುಜ್ಜೀವನಕರಿಸುವುದು' ಎಂಬುದರ ಅರ್ಥ ವೈದಿಕ ಪರಂಪರೆಯನ್ನು. ವೈದಿಕ ಪರಂಪರೆ ಮತ್ತು ಸಂಸ್ಕೃತಿಯಲ್ಲಿನ ಜೀವವಿರೋಧಿ ಅಂಶಗಳನ್ನು ಮತ್ತೆ ಪುನಃರುತ್ಥಾನ ಮಾಡಲು ಹೊರಟಿರುವ ಸಂಘ ಪರಿವಾರದವರಿಗೆ ಇಂದು ಸಂವಿಧಾನ ಬದ್ಧ ಅಧಿಕಾರ ಸಿಕ್ಕಿರುವುದು ಅಪಾಯಕಾರಿಯಾಗಿದೆ. ಈ ಅಧಿಕಾರದಿಂದಾಗಿ ಸರ್ಕಾರಿ ಮಾಧ್ಯಮ ಗಳನ್ನು ಇತರೆ ಪ್ರಸಾರ ಮಾಧ್ಯಮಗಳನ್ನು ದುರುಪಯೋಗಪಡಿಸಿಕೊಂಡು ತಮ್ಮ ಫ್ಯಾಸಿಸ್ಟ್ ದಾಳಿಯನ್ನು ಪ್ರಾರಂಭ ಮಾಡಿದ್ದಾರೆ.

ಇನ್ನು ಭಾರತೀಯ ದರ್ಶನಗಳ ಸಿದ್ಧಾಂತಗಳನ್ನು ಎತ್ತಿ ಹಿಡಿಯೋಣ ಎಂದು ಶ್ರೀಮಾನ್ ಜ್ಯೋಷಿಯವರು ಹೇಳುತ್ತಾರೆ. ಯಾವ ದರ್ಶನಗಳನ್ನು ಎತ್ತಿ ಹಿಡಿಯಬೇಕು, ಭಾರತೀಯ ತತ್ವಶಾಸ್ತ್ರಗಳ ಪ್ರಕಾರ ಮತ್ತು ಸಂಸ್ಕೃತಿಯ ಇತಿಹಾಸದಲ್ಲಿ ಭಾರತದಲ್ಲಿ ಎಷ್ಟು ದರ್ಶನಗಳು ಇವೆ ಎಂಬುದಕ್ಕೆ ಖಚಿತವಾದ ಸಾಕ್ಷ್ಯಾಧಾರಗಳೇನೂ. ಇಲ್ಲ. ಕೌಟಿಲ್ಯ [illegible] ದರ್ಶನಗಳನ್ನಷ್ಟೇ ಗುರ್ತಿಸುತ್ತಾನೆ. ಜೈನ ಲೇಖಕರಾದ ಹರಿಭದ್ರ ಸೂರಿ, ಜೀವದತ್ತ ಸೂರಿ ಮತ್ತು ರಾಜಶೇಖರ ಸೂರಿ ಅವರುಗಳ 6 ತತ್ವಜ್ಞಾನ ದರ್ಶನಗಳೆಂದು ಪ್ರಸ್ತಾಪಿಸುತ್ತಾರೆ. ಭಾರತೀಯ ತತ್ವಜ್ಞಾನದ ಅತ್ಯಂತ ಜನಪ್ರಿಯ ಸಂಕಲನವಾದ ಸರ್ವದರ್ಶನ ಸಂಗ್ರಹದಲ್ಲಿ ಒಟ್ಟು 16 ತತ್ವಶಾಖೆಗಳನ್ನು ಕುರಿತು ಚರ್ಚಿಸಲಾಗಿದೆ. ಈ ಎಲ್ಲಾ ಶಾಖೆಗಳು ಒಂದೆ ತರದ ಪ್ರಾಮುಖ್ಯತೆಯುಳ್ಳದಲ್ಲ ಎಂಬ [illegible] ಕಾರಣಕ್ಕಾಗಿ 9 ಶಾಖೆಗಳ [illegible] ಮೂಲಭೂತ ಮುಖ್ಯತ [illegible] ಶಾಖೆಗಳೆಂದು ಪರಿಗಣಿಸುವುದು [illegible] ರೂಢಿಯಲ್ಲಿದೆ. 9 [illegible] ತತ್ವಜ್ಞಾನದರ್ಶನಗಳನ್ನು ಎರಡು [illegible] ಗುಂಪುಗಳಾಗಿ ವಿಂಗಡಿಸಲಾಗಿದೆ. ಒಂದು ಆಸ್ತಿಕ ಶಾಖೆಯ ಗುಂಪುಗಳು. ಇನ್ನೊಂದು ನಾಸ್ತಿಕವಾದಿ ಶಾಖೆಗಳ [illegible] ಆಸ್ತಿಕವಾದಿ ಗುಂಪುಗಳ [illegible] ದರ್ಶನಗಳಲ್ಲಿನ 6 ಗುಂಪುಗಳನ್ನು [illegible] ವೈದಿಕ ದರ್ಶನಗಳು 1. ಪೂರ್ವ ಮಿಮಾಂಸೆ, 2.ವೇದಾಂತ ಅಥವಾ ಉತ್ತರ ಮೀಮಾಂಸೆ 3. ಸಾಂಕ್ಯ 4. ಯೋಗ, 5. ನ್ಯಾಯ ಮಿಮಾಂಸೆ, 6. ವೈಶೇಷಕ. ನಾಸ್ತಿಕ ದರ್ಶನಗಳು - 1. ಲೋಕಾಯತ, ಚಾರ್ವಾಕ ಅಥವಾ ಬಾರ್ಹಸ್ಪತ್ಯ 2. ಬೌದ್ಧ ದರ್ಶನಗಳು 3. ಜೈನ ದರ್ಶನ ಶ್ರೀಮಾನ್ ಮುರುಳಿ ಮನೋಹರ ಜೋಶಿ ಅವರು. ಈ ದರ್ಶನಗಳ ಪೈಕಿ ಯಾವುದನ್ನು ಎತ್ತಿ ಹಿಡಿಯಬೇಕೆಂದು ಹೇಳುತ್ತಾರೆ? ಚಾರ್ವಕ ಲೋಕಯತ [illegible] ದರ್ಶನವನ್ನೇ? ಅಥವಾ ವೈದಿಕ ದರ್ಶನಗಳನ್ನೇ? ಖಂಡಿತವಾಗಿ ಮುರುಳಿ ಮನೋಹರ ಜೋಶಿಯವರ [illegible] ಚಾರ್ವಕಲೋಕಾಯತ ಬೌದ್ಧ, ಜೈನ ದರ್ಶನಗಳನ್ನು ಎತ್ತಿ ಹಿಡಿಯಲು ಹೇಳುತ್ತಾರೆಂದು [illegible] ವೈಜ್ಞಾರಿಕತೆಯುಳ್ಳವರ್‍ಯಾರೂ ನಿರೀಕ್ಷಿಸುವುದಿಲ್ಲ. ಇನ್ನು ಈ ಸಂಘ ಪರಿವಾರ ಎತ್ತಿಹಿಡಿಯಲು ಹೇಳುವುದು ವೈದಿಕ ದರ್ಶನಗಳನ್ನು [illegible] ವೈದಿಕ ದರ್ಶನಗಳೆಂದು ಹೇಳಲಾದವುಗಳಲ್ಲಿಯೂ ಪೂರ್ವ ಮೀಮಾಂಸೆ, ಸಾಂಖ್ಯ ದರ್ಶನ [illegible] ನ್ಯಾಯ ಹಾಗೂ ವೈಶೇಷಿಕ ದರ್ಶನಗಳು ಹೊರನೋಟ [illegible] ವೇದಗಳಿಗೆ ಔಪಚಾರಿಕ ಗೌರವವನ್ನು ತೋರಿದರೂ ಸಂಘ ಪರಿವಾರ [illegible] ಅಪ್ಪಿಕೊಂಡಿರುವ ಶಂಕರ ಮೊದಲಾದ ಅನೇಕ ಆಚಾರ್ಯರು ಮತ್ತು ಹಲವು [illegible] ಶಾಸ್ತ್ರ, ಪುರಾಣ ಗ್ರಂಥಗಳ [illegible] ಪ್ರತಿಪಾದಿಸುವ ವೇದಾಂತ [illegible] ವಿರುದ್ಧವಾದ, ಅಂದಿನ ಭಾರತ [illegible] ವೈಜ್ಞಾನಿಕ ಬೆಳವಣಿಗೆಗೆ ಕಾರಣವಾದ [illegible] ದರ್ಶನಗಳು ಈ ವೈದಿಕ ದರ್ಶನ [illegible] ನಿಜವಾದ ಅಂತಸ್ಸತ್ವವನ್ನು ಇಂದು [illegible] ಸಂಘಪರಿವಾರದಲ್ಲಿರುವ ವಿಜ್ಞಾ [illegible]

ಪುಟ 3 ನೋಡಿ

ಕೃಷ್ಣಾ ಜಲವಿವಾದ ಭಾವೋದ್ರೇಕಕ್ಕೆ ಎಡೆಕೊಡಬಾರದು

ಕೃಷ್ಣಾ ನದಿ ನೀರಿನ ವಿವಾದ ಸುಪ್ರೀಂ ಕೋರ್ಟಿನ ತೀರ್ಪಿಗಾಗಿ ಕಾದುಕುಳಿತಿದೆ. 1997ರಲ್ಲಿ ಆಲಮಟ್ಟಿ ಅಣೆಕಟ್ಟಿನ ಎತ್ತರದ ಬಗ್ಗೆ ವಿವಾದ ಎದ್ದಾಗ ಆಂಧ್ರ ಪ್ರದೇಶದ ವಿವಿಧಪಕ್ಷಗಳು ಭಾವೋದ್ರೇಕ ಕಾರಿಯಾದ ಮಾತುಗಳನ್ನಾಡತೊಡಗಿದರು. ಅದಕ್ಕೆ ಪ್ರತಿಯಾಗಿ ಕರ್ನಾಟಕ ಸರ್ಕಾರ ಮುಖ್ಯವಾಗಿ ಅಂದಿನ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಎಚ್.ಕೆ. ಪಾಟೀಲರು ದಿನ ಬೆಳಗಾದರೆ ಸಮಸ್ಯೆಯ ಬಗ್ಗೆ ಉದ್ರೇಕದ ಮಾತುಗಳನ್ನಾಡಿ ಹಾಗೂ ಅಂದಿನ ನೀರಾವರಿ ಸಚಿವ ನಾಗೇಗೌಡರು ನಾವು ಆಲಮಟ್ಟಿ ಅಣೆಕಟ್ಟಿನ ಎತ್ತರವನ್ನು ಏರಿಸಿಯೇ ತೀರುತ್ತೇವೆ, ನಾವು ಯಾರಿಗೂ ಮಣಿಯುವವರಲ್ಲ ಎಂಬಂತಹ ವೀರಾವೇಶದ ಮಾತುಗಳನ್ನಾಡಿ ಈ ಸಮಸ್ಯೆಯನ್ನು ಕಗ್ಗಂಟುಮಾಡಿದರು. ಆಂಧ್ರ ಪ್ರದೇಶದ ಸರ್ಕಾರದ ಜೊತೆಯಲ್ಲಿ ಮಾತನಾಡಿ, ಕೇಂದ್ರ ಸರ್ಕಾರದ ಮಧ್ಯಸ್ಥಿಕೆ ಕೋರಿ ಬಗೆಹರಿಸಿಕೊಳ್ಳುವ ಅವಕಾಶ ತಪ್ಪಿ ಹೋಯಿತು. ಕರ್ನಾಟಕ ಸರ್ಕಾರ ಆಂಧ್ರದ ವಿವಿಧ ಯೋಜನೆಗಳಿಗೆ ತಡೆ ಆಜ್ಞೆ ಕೋರಿ, ಆಂಧ್ರ ಪ್ರದೇಶ ಆಲಮಟ್ಟಿ ಅಣೆಕಟ್ಟನ್ನು ಎತ್ತರಿಸುವುದಕ್ಕೆ ತಡೆ ಆಜ್ಞೆ ಕೋರಿ ಕೋರ್ಟಿನ ಮೆಟ್ಟಲು ಹತ್ತಿದುವು.

ಸುಪ್ರಿಂ ಕೋರ್ಟಿನ ಮುಂದೆ ಮತ್ತೆ ಈ ಪ್ರಕರಣ ವಿಚಾರಣೆಗೆ ಬರುವ ಸಂದರ್ಭದಲ್ಲಿಯೇ ಈ ಕೇಂದ್ರ ಸರ್ಕಾರ ಸಲ್ಲಿಸಿದ ಪ್ರಮಾಣ ಪತ್ರ (ಅಫಿಡಾವಿಟ್) ಈಗ ವಿವಾದಕ್ಕೆ ಎಡೆ ಮಾಡಿದೆ. ಈ ಬಗ್ಗೆ ಈಗಾಗಲೇ ನೀವು ಐಕ್ಯರಂಗದ ಹಿಂದಿನ ಸಂಚಿಕೆಯಲ್ಲಿ ನೋಡಿದ್ದೀರಿ. ಈಗಾಗಲೇ ಕರ್ನಾಟಕ ರಾಜ್ಯದ ಹಾಗೂ ಆಂಧ್ರ ಪ್ರದೇಶದ ಸರ್ವಪಕ್ಷ ನಿಯೋಗಗಳು ಪ್ರಧಾನಿಯನ್ನು ಭೇಟಿಮಾಡಿ ಮನವಿ ಸಲ್ಲಿಸಿವೆ. ಎರಡೂ ಪಕ್ಷಗಳ ವಾದಗಳನ್ನು ಆಲಿಸಿದ ಪ್ರಧಾನಮಂತ್ರಿ ದೇಶದ ಹಿತದೃಷ್ಟಿಯಿಂದ ಎರಡು ರಾಜ್ಯ ಸರ್ಕಾರಗಳನ್ನು ಸೇರಿಸಿ ವಿವಾದದ ಪರಿಹಾರಕ್ಕಾಗಿ ಮಾತುಕತೆ ನಡೆಸಿ ಅದನ್ನು ಬಗೆಹರಿಸಬಹುದಿತ್ತು. ಆದರೆ ಅದಕ್ಕೆ ಬದಲಾಗಿ ನ್ಯಾಯಾಲಯದ ಮೇಲೆ ಹೊಣೆ ಹಾಕಿ ಜಾರಿಕೊಂಡಿದ್ದಾರೆ.

ಎರಡೂ ರಾಜ್ಯಗಳೂ ಸಮಸ್ಯೆಯ ಬಗ್ಗೆ ಸಂಧಾನ ಆರಂಭಿಸುವುದು, ಮಾತುಕತೆಗಳ ಮೂಲಕ ಸಮಸ್ಯೆ ಇತ್ಯರ್ಥ ಮಾಡಿಕೊಂಡು ಕೋರ್ಟಿನಲ್ಲಿರುವ ತಮ್ಮ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳುವುದು, ಅಣೇಕಟ್ಟಿನ ಎತ್ತರವನ್ನು ಏರಿಸಲು ಬೇಕಾದ ಗೇಟುಗಳನ್ನು ಅಳವಡಿಸಿ ಕೊಳ್ಳುವುದು, ಇದು ನೀರಾವರಿ ಹಾಗೂ ವಿದ್ಯುತ್ ಉತ್ಪಾದನೆಯ ದೃಷ್ಟಿಯಿಂದ ಅತ್ಯಂತ ಅಗತ್ಯವಾದದ್ದು. ಕರ್ನಾಟಕ ಸರ್ಕಾರ ಮಾತುಕತೆಯ ಮೂಲಕ ಪರಿಹಾರ ಹುಡುಕುವ ಇಚ್ಛೆಯನ್ನು ಹಲವು ಬಾರಿ ಪುನರುಚ್ಚರಿಸಿದೆ. ಆಂಧ್ರ ಮುಖ್ಯಮಂತ್ರಿಯೂ ಇದು ಆರೋಗ್ಯಕರ ಬೆಳವಣಿಗೆ ಎಂದು ಪರಿಗಣಿಸಿದ್ದಾರೆ. ಇದರಿಂದ ಮಾತುಕತೆಗಳಿಗೆ ಬೇಕಾದ ಸೂಕ್ತ ವಾತಾವರಣ ಏರ್ಪಡುತ್ತಿದೆ ಎನ್ನಬಹುದು. ಇಂತಹ ಸಂದರ್ಭದಲ್ಲಿ ಈ ವಾತಾವರಣವನ್ನು ಮತ್ತಷ್ಟು ತಿಳಿಗೊಳಿಸುವುದು ಅಗತ್ಯ.

ಈ ವಾತಾವರಣವನ್ನು ತಿಳಿಗೊಳಿಸುವುದೇ ಇಂದಿನ ಆದ್ಯತೆ. ಎರಡೂ ರಾಜ್ಯಗಳ ರೈತರ ಜನತೆಯ ಹಿತವನ್ನು, ಒಟ್ಟಿನಲ್ಲಿ ರಾಷ್ಟ್ರೀಯ ಹಿತವನ್ನು ಆಧರಿಸಿ ಎರಡೂ ರಾಜ್ಯಗಳ ಜನತೆ ಒಗ್ಗೂಡುವಂತೆ ಶ್ರಮಿಸಬೇಕಾದುದು ಅಗತ್ಯ. ಆದರೆ ಬಂಡವಾಳ ಶಾಹಿ ಪಕ್ಷಗಳ ರಾಜಕಾರಣಿಗಳು ಒಂದು ರಾಜ್ಯದ ಜನರ ವಿರುದ್ಧ ಮತ್ತೊಂದು ರಾಜ್ಯದ ಜನರನ್ನು ಎತ್ತಿಕಟ್ಟುವಂತೆ ವ್ಯವಹರಿಸುವುದು ಸರಿಯಲ್ಲ. ಹಿಂದೆ ತಾವು ಉತ್ತರ ಕರ್ನಾಟಕದ ವೀರರೆಂಬಂತೆ ಪೋಸು ನೀಡುತ್ತಾ ಸಮಸ್ಯೆಯ ಕಗ್ಗಂಟುಮಾಡುವುದರಲ್ಲಿ ಭಾಗಿಯಾಗಿದ್ದ ಎಚ್.ಕೆ. ಪಾಟೀಲರು ಇಂದು ನೀರಾವರಿ ಮಂತ್ರಿ. ಆದರೂ ರಾಜ್ಯ ಸರ್ಕಾರ ಅಂತಹ ವೀರಾವೇಶಗಳಿಗೆ ಎಡೆಕೊಡದಿರುವುದು, ನೀರಾವರಿ ಮಂತ್ರಿಯುವರೂ ಅಂತಹ ವರ್ತನೆಯನ್ನು ಇಲ್ಲಿಯುವರೆಗೆ ತೋರಿಸಿಲ್ಲದಿರುವುದು ಒಳ್ಳೆಯದು.

ಇವು ರಾಷ್ಟ್ರೀಯ ಪಕ್ಷಗಳೇ

ಬಂಡವಾಳಶಾಹಿ ರಾಷ್ಟ್ರೀಯ ಪಕ್ಷಗಳು ಈ ರಾಜ್ಯದಲ್ಲಿ ಒಂದು ನಿಲುವು ಆ ರಾಜ್ಯದಲ್ಲಿ ವಿರುದ್ಧ ನಿಲುವು ತೆಗೆದುಕೊಂಡು ದೇಶದ ಜನರಲ್ಲಿ ಭಾವನಾತ್ಮಕ ಉದ್ರೇಕಕ್ಕೆ ಎಡೆಮಾಡಿಕೊಡುತ್ತಿವೆ. ಆಂಧ್ರದ ಕಾಂಗ್ರೆಸ್ ಕರ್ನಾಟಕದಲ್ಲಿನ ಕಾಂಗ್ರೆಸ್, ಆಂಧ್ರದ ಬಿಜೆಪಿ, ಕರ್ನಾಟಕದ ಬಿಜೆಪಿ ಪರಸ್ಪರ ವಿರುದ್ಧ ಹೇಳಿಕೆಗಳನ್ನು ನೀಡುತ್ತಿವೆ, ನಿಲುವುಗಳನ್ನು ತೆಗೆದುಕೊಳ್ಳುತ್ತಿವೆ. ಆಂಧ್ರದ ಬಿಜೆಪಿ ನಾಯಕ ತಾನು ಎಲ್ಲರಿಗಿಂತ ಮುಂದೆ ಎಂದು ತೋರಿಸಿಕೊಳ್ಳಲು ಆಲಮಟ್ಟಿ ಅಣೆಕಟ್ಟಿನ ಎತ್ತರ 509 ಮೀಟರಿಗೆ ಸೀಮಿತವಾಗಬೇಕು ಎಂದು ಘೋಷಿಸುತ್ತಾನೆ. ಕರ್ನಾಟಕದ ಬಿಜೆಪಿ ನಾಯಕರು ನಮ್ಮದೇ ಕೇಂದ್ರ ಸರ್ಕಾರದಿಂದ ಈ ಅಪರಾಧ ಸಂಭವಿಸಿದ್ದರೂ ಅದನ್ನು ಕೇಂದ್ರಕ್ಕೆ ಮನವರಿಕೆ ಮಾಡಿಕೊಡುವುದಕ್ಕೆ ಬದಲಾಗಿ ತಮ್ಮದೇ ಸರ್ಕಾರದ ವಿರುದ್ಧ ಚಳುವಳಿ ಹೂಡುವ ಮಾತನಾಡುತ್ತಾರೆ. ಕಾಂಗ್ರೆಸ್‌ನ ಆಂಧ್ರ ಅಧ್ಯಕ್ಷ ರಾಜಶೇಕರ ರೆಡ್ಡಿಯವರಂತೂ ಯಾವುದೇ ಬಿಡೆ ಇಲ್ಲದೆ ಕರ್ನಾಟಕ ಹಿತವನ್ನು ಕರ್ನಾಟಕದ ಕಾಂಗ್ರೆಸ್ ಘಟಕ ಕಾಯ್ದುಕೊಳ್ಳುವುದು ಕರ್ತವ್ಯ. ಹಾಗೆಯೇ ಆಂಧ್ರದ ಅವರಿಗೆ ತಮ್ಮದೇ ಪಕ್ಷದ ರಾಜ್ಯ ಸರ್ಕಾರದ ವಿರುದ್ಧ ಆಂಧ್ರದ ಹಿತ ಮಾತ್ರ ಮುಖ್ಯ. ಹೀಗೆ ಅವರವರಿಗೆ ಅವರವರ ರಾಜ್ಯದ ಹಿತವೇ ಮುಖ್ಯವಾದರೆ ರಾಷ್ಟ್ರದ ಹಿತದ ಬಗ್ಗೆ ಚಿಂತನೆ ಮಾಡುವವರ್‍ಯಾರು? ರಾಜ್ಯದ ಒಳಗೇ ಬಗೆಹರಿಯಬಹುದಾದ ವಿಷಯಗಳನ್ನು ಪಕ್ಷದ ರಾಜ್ಯ ಘಟಕದ ಅಳವಿಗೆ ಬರುವ ವಿಷಯಗಳಲ್ಲಿ ಕೈತೂರಿಸುವ ಹೈಕಮ್ಯಾಂಡ್‌ಗಳು, ಮುಖ್ಯಮಂತ್ರಿ-ಪ್ರತಿ ಮಂತ್ರಿಯನ್ನೂ ನೇಮಿಸುವ ಹೈಕಮ್ಯಾಂಡ್‌ಗಳು ಈ ವಿಷಯದಲ್ಲಿ ಏಕೆ ಕಣ್ಣು ಮುಚ್ಚಿ ಕೂಡುತ್ತವೆ. ಅದೇರೀತಿ ತಮ್ಮ ಸಂಘ ಪರಿವಾರದ ಎಲ್ಲಾ ವಿಷಯಗಳನ್ನೂ ವೀಕ್ಷಿಸುತ್ತಾ, ನಿರ್ದೇಶಿಸುತ್ತಾ ಇರುವ ಆರೆಸ್ಸೆಸ್ ಇಂತಹ ಸಂದರ್ಭಗಳಲ್ಲಿ ಏಕೆ ಸುಮ್ಮನೆ ಕೂಡುತ್ತದೆ? ರಾಷ್ಟ್ರಹಿತದ ಬಗ್ಗೆ ತಮ್ಮ ಪಕ್ಷಗಳ ಒಳಗೆ ಎಲ್ಲರಲ್ಲಿಯೂ ಒಂದೇ ಅಭಿಪ್ರಾಯ ಬರುವಂತೆ ಮಾಡಲು ಈ ಪಕ್ಷಗಳ ರಾಷ್ಟ್ರೀಯ ನಾಯಕತ್ವಗಳು ಪ್ರಯತ್ನಿಸುವುದಿಲ್ಲವೆಂದಾದರೆ ಅಥವಾ ಸಾಧ್ಯವಿಲ್ಲವೆಂದಾದರೆ ಇವುಗಳನ್ನು ರಾಷ್ಟ್ರೀಯ ಪಕ್ಷಗಳೆಂದೇಕೆ ಕರೆಯಬೇಕು?

ಯಕ್ಷಗಾನದ ರಾಕ್ಷಸರಂತೆ ಒಬ್ಬರ ಮೇಲೊಬ್ಬರು ಪರಾಕ್ರಮದ ಮಾತುಗಳನ್ನಾಡಿ, ಕುಣಿದುಕುಪ್ಪಳಿಸುವ ಈ ಪಕ್ಷಗಳ ಎರಡೂ ರಾಜ್ಯಗಳ ನಾಯಕರನ್ನು ಒಂದೇ ಅಭಿಪ್ರಾಯಕ್ಕೆ ತರುವುದಾದರೆ ಪರಿಹಾರ ಎಷ್ಟು ಸರಳವಾದೀತು? ಕೇಂದ್ರ ಸರ್ಕಾರದ ಬದಲಾದ ನಿಲುವಿನ ಬಗ್ಗೆ ತಿಳಿಯುತ್ತಲೇ ಕರ್ನಾಟಕದ ಕಾಂಗ್ರೆಸ್ ಹಾಗೂ ಆಂಧ್ರದ ಕಾಂಗ್ರೆಸ್ ನಾಯಕರು ಪರಸ್ಪರ ಸಂಪರ್ಕಿಸಿ ಹಾಗೆಯೇ ಎರಡು ರಾಜ್ಯಗಳ ಬಿಜೆಪಿ ಘಟಕಗಳೂ ಸಂಪರ್ಕಿಸಿ ಒಂದೇ ನಿಲುವು ತೆಗೆದುಕೊಂಡರೆ ಒಂದು ಪಕ್ಷಕ್ಕಿಂತ ಮತ್ತೊಂದು ಎಂದು ಸ್ಪರ್ಧೆಮಾಡುತ್ತಾ ಆಡುವ ಈ ಯಕ್ಷಗಾನ ಬಯಲಾಟಗಳು ಕಡಿಮೆಯಾಗುತ್ತವೆ. ತಾಳ್ಮೆಯಿಂದ ಯೋಚಿಸಿ ತೀರ್ಮಾನ ಕೈಗೊಳ್ಳುವುದು ಎರಡೂ ರಾಜ್ಯಗಳ ಸರ್ಕಾರಗಳಿಗೆ ಹಾಗೂ ಜನತೆಗೆ ಸಾಧ್ಯವೂ ಸುಲಭವೂ ಆಗುತ್ತದೆ.

- ಜಿ.ಎನ್.ನಾಗರಾಜ್

.................ಜೋಷಿಯವರ ಪರಿವಾರ ಸಂಸ್ಕೃತಿ ದರ್ಶನಗಳು

ಪುಟ 2 ರಿಂದ

ಎಂದು ಹೆಸರಾದ ಮುರುಳಿ ಮನೋಹರ ಜೋಶಿಯವರು ಪ್ರತಿಪಾದಿಸುವವರೇ. ಈ ವೈದಿಕ ದರ್ಶನಗಳ ತತ್ವದ ಆಧಾರದಲ್ಲಿ ರಚಿತವಾದ ಭಾರತೀಯ ಸಮಾಜದ ಸಾವಿರಾರು ವರ್ಷಗಳಿಂದ ಅನುಭವಿಸುತ್ತಾ ಬಂದಿರುವ ಯಾತನಾಮಯ, ಪೈಶಾಚಿಕ ಬರ್ಬರತೆಯನ್ನು ನಾವು ಕಂಡಿದ್ದೇವೆ. ಮನುಷ್ಯನನ್ನು ಮನುಷ್ಯನನ್ನಾಗಿ ನೋಡಲು ಪ್ರಜ್ಞಾಪೂರ್ವಕವಾಗಿ ನಿರಾಕರಿಸುತ್ತಾ ಬರದಿರುವ ವೈದಿಕ ಸಂಪ್ರದಾಯದ ಕ್ರೂರತ್ವ ಇಂದು ಈ ದೇಶವನ್ನು ಸುಟ್ಟು ತಿನ್ನುತ್ತಿದೆ. ನಾಯಿಯನ್ನು ಮನೆಯೊಳಗೆ ಬಿಟ್ಟುಕೊಳ್ಳುವ ನಾವು ನಮ್ಮ ಹಾಗೆ ಇರುವ ಇನ್ನೊಬ್ಬ ಮನುಷ್ಯನನ್ನು ಮನೆಯೊಳಗೆ ಬಿಟ್ಟುಕೊಳ್ಳಲು ಒಪ್ಪದ ಪರಂಪರೆಯನ್ನು ಇಂದು ನಾವು ಮುಂದುವರಿಸುತ್ತಿದ್ದೇವೆ. ಇದು ನಮ್ಮ ಆದರ್ಶವಾಗಬೇಕೆ? ನಮ್ಮ ಭವ್ಯ ಪರಂಪರೆಯಾಗಬೇಕೆ? ಹೆಣ್ಣನ್ನು ಎರಡನೇ ದರ್ಜೆಯವಳೆಂದು ಅವಳಿಗೆ ಎಲ್ಲಾ ನಾಗರೀಕ ಹಕ್ಕುಗಳನ್ನು ನಿರಾಕರಿಸಿ ಇಂದಿಗೂ ಅವಳನ್ನು ಬೆಂಕಿಗೆ ಹಾಕಿ ಸುಡುವ (ಸತಿ) ಪದ್ಧತಿಯನ್ನು ಸಮರ್ಥಿಸುವ ಈ ಪರಂಪರೆ ಯಾವ ಸಾಮಾಜಿಕ ಮೌಲ್ಯವೆಂದು ಕರೆಯಬೇಕು? ಇಂತಹ ಬರ್ಬರ ಪೈಶಾಚಿಕ ಸಾಮಾಜಿಕ ಮೌಲ್ಯಗಳನ್ನು ಪ್ರತಿಪಾದಿಸುವ ದರ್ಶನಗಳನ್ನು ನಾವು ಎತ್ತಿ ಹಿಡಿಯಬೇಕೆ?

ಇನ್ನು 'ಪರಿವಾರ್' ಸಂಸ್ಕೃತಿಯನ್ನು ವಿಶ್ವಕ್ಕೆ ನೀಡೋಣ ಎಂದು ಹೇಳಿರುವ ಶ್ರೀಮಾನ್ ಮುರುಳಿ ಮನೋಹರ ಜೋಶಿ ಅವರು (ಅವರ ಅರ್ಥದಲ್ಲಿ ವಿಶ್ವ ಕುಟುಂಬ) ಪಾಶ್ಚಿಮಾತ್ಯ ಸಂಸ್ಕೃತಿಯನ್ನು 'ಬಜಾರ್ ಸಂಸ್ಕೃತಿ' ಎಂದು ಕರೆದು ಪರಧರ್ಮ ದ್ವೇಷದ ತಮ್ಮ ಫ್ಯಾಸಿಸ್ಟ್ ಮನೋಭಾವವನ್ನು ಪ್ರದರ್ಶಿಸಿ ವಿಶ್ವ ಕುಟುಂಬದ ಬಗ್ಗೆ ಮಾತನಾಡಿರುವುದು ವಿಪರ್ಯಾಸ. ಪಾಶ್ಚಿಮಾತ್ಯ ಸಂಸ್ಕೃತಿಯಲ್ಲಿ ಕೊಳ್ಳು ಬಾಕ-ಮಾರುಕಟ್ಟೆ ಸಂಸ್ಕೃತಿ ಮಾನವೀಯ ಮೌಲ್ಯಗಳನ್ನು ತುಳಿದು ನೈತಿಕ ಅಧಃಪತನದತ್ತ ಕೊಂಡೊಯ್ಯುತ್ತಿರುವುದರ ಬಗ್ಗೆ ಜನಸಾಮಾನ್ಯರಲ್ಲಿ ವಿರೋಧಭಾವನೆಯಿದೆ ಆದರೆ ದೇಶದಲ್ಲಿ ಮಾರುಕಟ್ಟೆಗೆ ಎಲ್ಲವನ್ನೂ ಅಧೀನಮಾಡುವ ಬಜಾರ್ ಸಂಸ್ಕೃತಿಗೆ ಮುಕ್ತ ಆಹ್ವಾನ ನೀಡುತ್ತಾ, ಬಹುರಾಷ್ಟ್ರೀಯ ಕಂಪನಿಗಳನ್ನು ತಲೆಯ ಮೇಲೆ ಹೊತ್ತು ಕುಣಿಯುತ್ತಾ, ಪಾಶ್ಚಿಮಾತ್ಯ ಸಂಸ್ಕೃತಿಯ ಅಧಃಪತನದ ಅವಶೇಷಗಳೆಲ್ಲಕ್ಕೂ ತಮ್ಮ ದೂರದರ್ಶನ, ಟಿ.ವಿ.ಚಾನಲ್‌ಗಳಲ್ಲಿ, ಸಿನಿಮಾಗಳ ಅನಿರ್ಬಂಧಿತ ಆಮದಿನಲ್ಲಿ ಅವಕಾಶ ಕಲ್ಪಿಸಿರುವ ಬಿಜೆಪಿ ಸರ್ಕಾರ 'ಬಜಾರ್ ಸಂಸ್ಕೃತಿ' ಯ ಬಗ್ಗೆ ಸೂರು ಹತ್ತಿ ಸಾರ ಹೊರಟಿರುವುದೇ ಇಲ್ಲಿರುವ ವಿಪರ್ಯಾಸ.

ಆದರೆ ಅದೇ ಪಾಶ್ಚಿಮಾತ್ಯ ಸಂಸ್ಕೃತಿಯ ಅಂಗವಾಗಿಯೇ ವೈಜ್ಞಾನಿಕ ಚಿಂತನೆ, ಸಂಶೋಧನೆ, ವೈಚಾರಿಕ ಮನೋಭಾವ, ಪ್ರಜಾಪ್ರಭುತ್ವ, ಮಾನವೀಯ ಮೌಲ್ಯಗಳು ಬಂದಿವೆಯೆಂಬುದನ್ನು ನೆನೆಯೋಣ. ಆದರೆ ಈ ಪ್ರಗತಿಪರ ಪಾಶ್ಚಿಮಾತ್ಯ ಮೌಲ್ಯಗಳ ಮೇಲೆ ಸಂಘ ಪರಿವಾರ ದಿನ ಕಿಡಿ ಕಾರುತ್ತಾ ಪಾಶ್ಚಿಮಾತ್ಯ ಸಂಸ್ಕೃತಿಯೆಂದರೆ ಬಜಾರ್ ಸಂಸ್ಕೃತಿಯೆನ್ನುವ ಭಾವನೆ ಹಬ್ಬಿಸಬಯಸುವ ಈ ಕಪಟ ಸಿದ್ಧಾಂತಿಗಳ ವಿಚಾರಗಳನ್ನು ಜನ ತಿರಸ್ಕರಿಸಬೇಕು.


ಬಹುಶಃ 'ವಸುಧೈವ ಕುಟುಂಬಂ' ಅವರ ವಿಕೃತ ಮನೋಭಾವವಿರಬಹುದು. ವೈದಿಕ ದರ್ಶನದಿಂದ ಪ್ರೇರಿತವಾದ ನಮ್ಮ ಶ್ರೇಣಿಕೃತ ಸಮಾಜದಲ್ಲಿನ ಒಂದು ಜನಾಂಗವನ್ನೇ ಊರಿನಿಂದ ಹೊರಗಿಟ್ಟು ಹೊಲಗೇರಿಗಳನ್ನು ಸೃಷ್ಟಿ ಮಾಡಿದ ಇವರು ವಿಶ್ವಕುಟುಂಬದ ಬಗ್ಗೆ ಮಾತನಾಡುವುದು ಮಾನವೀಯ ಅಣಕವಾಗಿದೆ. ಉಡುಪಿಯ ಪೇಜಾವರ ಮಠಾಧೀಶರು ಎಂದೋ ಒಂದು ಸಲ ಎಲ್ಲೋ ಒಂದು ಕಡೆ ಹೊಲಗೇರಿಗೆ ಹೋಗಿದ್ದನ್ನೇ ದೊಡ್ಡ ಪ್ರಚಾರ ಮಾಡುವ ಅವರನ್ನು ಪ್ರಗತಿಪರರು ಎಂದು ಡಂಗೂರ ಸಾರುವ ಈ ಸಮಾರಂಭದಲ್ಲಿ ಇದಕ್ಕಿಂತ ಒಳ್ಳೆಯದನ್ನು ನಿರೀಕ್ಷಿಸಲು ಸಾಧ್ಯವಿಲ್ಲ.

ಇನ್ನೊಂದು ಧರ್ಮವನ್ನು, ಇನ್ನೊಬ್ಬ ಮನುಷ್ಯನನ್ನು ಸಮಾನವಾಗಿ ಕಾಣಲು ನಿರಾಕರಿಸುವ ಈ ಸಂಘ ಪರಿವಾರದ ಫ್ಯಾಸಿಸ್ಟರು ಇನ್ನೊಂದು ಧರ್ಮದಲ್ಲಿರಬಹುದಾದ ಲೋಪಗಳ ಬಗ್ಗೆ ಮಾತನಾಡಲ್ಲು ಯಾವುದೇ ಅರ್ಹತೆ ಇಲ್ಲ. ಆದರೆ ನಾವು ಇಂದು ಗಂಭೀರವಾಗಿ ಪರಿಗಣಿಸಬೇಕಾದ ವಿಷಯವೆಂದರೆ ಪೇಜಾವಾರ ಮಠಾಧೀಶರ ಪಿಠಾರೋಹಣದಂತ ವಿಷಯಗಳು ಇಂದು ಯಾವ ಎಗ್ಗೂ ಇಲ್ಲದೆ ರಾಜಾರೋಷವಾಗಿ ಅದೊಂದು ಹೆಮ್ಮೆಯ ವಿಷಯವಾಗಿ ಗುರುತಿಸಲ್ಪಡುತ್ತಿರುವುದು ಆಕಸ್ಮಿಕ ಘಟನೆಗಳಲ್ಲ ಎಂಬುದು. ಈ ವೈದಿಕ ಪರಂಪರೆಯ ದರ್ಶನಗಳ, ಆ ದರ್ಶನಗಳನ್ನು ಎತ್ತಿ ಹಿಡಿಯಲು ಸಂಘ ಪರಿವಾರದವರಿಗೆ ಸಂವಿಧಾನಬದ್ಧ ಅಧಿಕಾರ ಸಿಕ್ಕಿರುವುದು, ಮಾನವನ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಲು ವಿಫಲವಾಗಿರುವ ಈ ಬಂಡವಾಳಶಾಹಿ ಶೋಷಿತ ವ್ಯವಸ್ಥೆ ಜನರಲ್ಲಿನ ವೈಚಾರಿಕ ಪ್ರಜ್ಞೆ ಮತ್ತು ಪ್ರತಿಭಟಿಸುವ ಮನೋಭಾವವನ್ನು ವಿಕೃತಿಗೊಳಿಸಲು ಮಾಡುತ್ತಿರುವ ಪಿತೂರಿ.

ಜಾತ್ಯಾತೀತ ತತ್ವಗಳನ್ನು ಎತ್ತಿ ಹಿಡಿಯುತ್ತೇವೆಂದು ಸಂವಿದಾನದ ಮೇಲೆ ಪ್ರಮಾಣ ವಚನ ಸ್ವೀಕರಿಸಿದ ಮಂತ್ರಿಗಳು, ಶಾಸಕರು ಈ ಸಮಾರಂಭಗಳಲ್ಲಿ ಭಾಗವಹಿಸಿರುವುದು ಸಂವಿಧಾನ ಬಾಹಿರ ಮತ್ತು ಪ್ರಜಾಪ್ರಭುತ್ವದ ಅಣಕ. ಇಂತಹ ದಿವಾಳಿಕೋರತನ ಮತ್ತು ಗೋಸುಂಬೆ ರಾಜಕೀಯ ಶಕ್ತಿಗಳನ್ನು ನಾವು ಸಹಿಸಿಕೊಂಡಿರಬೇಕೆ ಎಂಬುದು ಬಹಳ ಮುಖ್ಯವಾದ ಪ್ರಶ್ನೆ.

ಮನುಷ್ಯ ಜ್ಞಾನ ದಾಹವನ್ನು ಹೊಸಕಿ ಹಾಕುವ ವೈದಿಕ ಸಂಸ್ಕೃತಿಯನ್ನು ಪ್ರತಿಪಾದಿಸುವ ಇವರು ಮಠಗಳನ್ನು ಜ್ಞಾನ ದೇಗುಲಗಳೆಂದು, ಮಠಾಧೀಶರನ್ನು ದಾರ್ಶನಿಕರೆಂದು ಕರೆಯದೆ ಬೇರೆ ಏನನ್ನು ಹೇಳಲೂ ಸಾಧ್ಯವಿಲ್ಲ. ಪರಂಪರೆಯ ಹೆಸರಿನಲ್ಲಿ ಹೆಣ್ಣು ಮಕ್ಕಳನ್ನು ವೇಶ್ಯಾವಾಟಿಕೆಗೆ ತಳ್ಳಿ ಇವರು ಇನ್ನೊಂದು ಸಂಸ್ಕೃತಿಯನ್ನು 'ಬಜಾರ್' ಸಂಸ್ಕೃತಿಯೆಂದು ಕರೆಯಲು ಇವರಿಗೆ ಯಾವುದೇ ರೀತಿಯಾದ ಹಕ್ಕಿಲ್ಲ. ವರದಕ್ಷಿಣೆ ಹೆಸರಲ್ಲಿ ಲಕ್ಷಾಂತರ ಹೆಣ್ಣು ಮಕ್ಕಳನ್ನು ಬೆಂಕಿಗೆ ಹಾಕಿ ಸುಡುತ್ತಿರುವ ವೈದಿಕ ಸಮಾಜದ ಸಮರ್ಥಕರಿಗೆ ಕೌಟಂಬಿಕ ಮೌಲ್ಯದ ಬಗ್ಗೆ ಮಾತನಾಡುವ ಹಕ್ಕಿದೆ?

1948 ರ ಅಂತ್ಯದಲ್ಲಿ ಜ್ಯೋತಿಬಸುರವರು ಭೂಗತರಾದ ಮೇಲೆ ನಡೆಸಿದ ಚಟುವಟಿಕೆಗಳು, ಹೋರಾಟಗಳ ಬಗ್ಗೆ ಕಳೆದ ಸಂಚಿಕೆಯಲ್ಲಿ ಓದಿದ್ದೀರಿ. ಈ ಅನುಭವದ ನೆರಳಲ್ಲಿ ಪಕ್ಷದಲ್ಲಿ ನಡೆದ ಆಂತರಿಕ ಚರ್ಚೆಯ ಸನ್ನಿವೇಶವನ್ನು ಇಲ್ಲಿ ಜ್ಯೋತಿಬಸುರವರು ನೆನಪಿಸಿಕೊಂಡಿದ್ದಾರೆ.



ಬಂಧನ ಪರ್ವ

ಅದೇ ವರ್ಷ ನಮ್ಮ ಕೆಲ ಸಂಗಾತಿಗಳು ಸೆರೆಮನೆಯಲ್ಲಿ ಉಪವಾಸ ಸತ್ಯಾಗ್ರಹ ಆರಂಭಿಸಿದರು. ಪೋಲಿಸರು ಬಂದರು, ಘರ್ಷಣೆ ನಡೆಯಿತು. ಅನೇಕ ಕೈದಿಗಳು ಮೃತಪಟ್ಟರು. ಗಾಯಗೊಂಡರು. ಮುಜಾಫರ್ ಅಹಮದ್ ಆಗ ಜೈಲಿನಲ್ಲಿದ್ದರು. ಮುಖ್ಯಮಂತ್ರಿ ಬಿ.ಸಿ.ರಾಯ್ ಮತ್ತು ಕೈದಿಗಳ ಪ್ರತಿನಿಧಿಯಾಗಿ ಕಾಕಾಬಾಬು ನಡುವೆ ಒಂದು ಒಪ್ಪಂದವಾಯಿತು. ನಮ್ಮ ಅನೇಕ ಬೇಡಿಕೆಗಳನ್ನು ಮುಖ್ಯಮಂತ್ರಿ ಒಪ್ಪಿಕೊಂಡರು. ನಾವು ನಿರಶನವನ್ನು ನಿಲ್ಲಿಸಿದೆವು.

ನಾವು ತಪ್ಪು ಹಾದಿಯಲ್ಲಿದ್ದೇವೆ ಎನ್ನುವುದು ನಮ್ಮಲ್ಲೇ ಹಲವರ ಅಭಿಪ್ರಾಯವಾಗಿತ್ತು. ಭೂಪೇಶ್ ಮತ್ತು ನಾನು ಇದನ್ನು ಅರಿತೆವು. ಸಕಾರಾತ್ಮಕ (ಅನುಕೂಲಕರ) ವಾದುದು ಏನನ್ನಾದರೂ ಮಾಡಲಾದೀತೆ ಎಂಬ ಬಗ್ಗೆ ನಾವು ಚರ್ಚಿಸಿದೆವು. ಬ್ರಿಟನ್ ಕಮ್ಯುನಿಸ್ಟ್ ಪಕ್ಷಕ್ಕೆ ಸಂದೇಶ ಕಳಿಸುವ ಬಗ್ಗೆಯೂ ಯೋಚಿಸಿದೆವು. ಆದರೆ ಸಂಪರ್ಕದ ಕೊರತೆಯಿಂದಾಗಿ ಹಾಗೂ ಮಾಡಲು ಆಗಲಿಲ್ಲ. ಪಕ್ಷದ ಕಾರ್ಯನಿರ್ವಹಣೆ ಎಂದಿನಂತೆ ಮುಂದುವರಿಯಿತು.

1949 ರಲ್ಲಿ ಅಂಥಾ ಭಾರಿ ಎನ್ನುವಂತ ಘಟನೆಯೇನೂ ನಡೆಯಲಿಲ್ಲ. ಎರಡನೇ ಮಹಾಯುದ್ಧದ ನಂತರ ಕಾಮಿನ್‌ಫಾರ್ಮ್ ಸ್ಥಾಪಿತವಾಯಿತು. ಕಮ್ಯುನಿಸ್ಟರು ಹಾಗೂ ಇತರ ಕಾರ್ಮಿಕ ಪಕ್ಷಗಳ ನಡುವೆ ಹೆಚ್ಚಿನ ಸಂಬಂಧ ಕಲ್ಪಿಸುವುದು ಇದರ ಉದ್ದೇಶ. ಕಾಮಿನ್‌ಫಾರ್ಮ್‌ನ ಮುಖವಾಣಿಗೆ For a lasting Peace, For People's Democrecy ಎಂದು ಹೆಸರಿಡಲಾಯಿತು. ನಾವಿನ್ನೂ ಅದೇ ಸಂಕುಚಿತ ಮನೋಭಾವದ ಎಡಪಂಥೀಯ ನೀತಿಗಳನ್ನು ಅನುಸರಿಸುತ್ತಿದ್ದೆವು. 1950 ರ ಜನವರಿ ಸಂಚಿಕೆಯಲ್ಲಿ ಕಾಮಿನ್‌ಫಾರ್ಮ್‌ನ ಪತ್ರಿಕೆ ಅನೇಕ ವಿಮೋಚನಾ ಹೋರಾಟಗಳ ಬಗ್ಗೆ ಮಹತ್ವದ ಸಂಪಾದಕೀಯವನ್ನು ಪ್ರಕಟಿಸಿತು, ಅದರಲ್ಲಿ ಏಶ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಗಳ ಉದಾಹರಣೆಗಳನ್ನು ನೀಡಲಾಗಿತ್ತು.

ಭಾರತೀಯ ಕಮ್ಯುನಿಸ್ಟರು ಕೂಡ ತಮ್ಮ ಯೋಚನಾ ಲಹರಿಯನ್ನು ಬದಲಾಯಿಸಿ ಕೊಳ್ಳಬೇಕು ಎಂಬ ಸಲಹೆಯನ್ನು ಸಂಪಾದಕೀಯ ಮುಂದಿಟ್ಟಿತು. ಸರಿಪಡಿಸಿಕೊಳ್ಳಲುಬೇಕಾದಷ್ಟಿತ್ತು.

ಇದಾದ ಕೆಲವೇ ದಿನಗಳಲ್ಲಿ ಪಾಲಿಟ್‌ಬ್ಯೂರೋ ಒಂದು ಸುತ್ತೋಲೆಯನ್ನು ಹೊರಡಿಸಿತು. ಪಕ್ಷದ ಧೋರಣೆಯನ್ನು ಮತ್ತು ಕಾರ್ಯತಂತ್ರವನ್ನು ಮರು ಅಂದಾಜು ಮಾಡಲು ಚರ್ಚೆ ಆರಂಭಿಸಬೇಕೆಂದು ಸುತ್ತೋಲೆ ಸೂಚಿಸಿತ್ತು. ಕಾಮಿನ್‌ಫಾರ್ಮ್ ಪತ್ರಿಕೆಯ ಸಂಪಾದಕೀಯ ಅದಕ್ಕೆ ಆಧಾರವಾಗಿತ್ತು.

ಚೈತನ್ಯ ತುಂಬಿದ ಸಂಪಾದಕೀಯ

ನಮ್ಮಲ್ಲಿ ಪುನಃ ಉತ್ಸಾಹ ತುಂಬಿತು. ಈ ಸಂಪಾದಕೀಯ ನಮ್ಮಲ್ಲಿ ಶಕ್ತಿ ತುಂಬಿತು. ಪಕ್ಷದ ಒಳಗಡೆ ಚರ್ಚೆಗೆ ಅವಕಾಶ ಸಿಕ್ಕಿತು. ಹೊಸದಾಗಿ ರಚಿತವಾದ ಪಾಲಿಟ್‌ಬ್ಯೂರೋಗೆ ಸಿ.ರಾಜೇಶ್ವರ ರಾವ್ ಪ್ರಧಾನ ಕಾರ್ಯದರ್ಶಿ ಆದರು. ನವ ಆಂದೋಲನವೊಂದು ಆರಂಭವಾಯಿತು.

ಪಶ್ಚಿಮ ಬಂಗಾಳದಲ್ಲಿ ರಣೇನ್‌ಸೇನ್ ಕಾರ್ಯದರ್ಶಿಯಾಗಿರುವ ಹೊಸ ಪ್ರಾಂತೀಯ ಸಂಘಟನಾ ಸಮಿತಿಯನ್ನು (ಪಿಓಸಿ) ರಚಿಸಲಾಯಿತು. ಬಂಗಾಳದ ಘಟಕದಲ್ಲಿದ್ದ ನಮಗೆ ಕೇಂದ್ರ ನಾಯಕತ್ವದ ಮರು ಸಂಘಟನೆ ವಿಚಾರವಾಗಿ ರಾಜೇಶ್ವರರಾವ್ ರ ಜತೆ ಭಿನ್ನಾಭಿಪ್ರಾಯಗಳಿದ್ದವು. ಅದು ಆಗಾಗ ಬಹಳ ಕಹಿ ವಾತಾವರಣವನ್ನು ಸೃಷ್ಟಿಸಿತು. ಸುದೀರ್ಘ ಚರ್ಚೆಗಳು ನಡೆದವು. ಮೊದಲು ಪಕ್ಷದ ಪುನರ್ ಸಂಘಟನೆ ಮತ್ತು ಆನಂತರ ರಾಜಕೀಯ ಸಿದ್ಧಾಂತದ ಅಳವಡಿಕೆಗೆ ನಾವು ಒತ್ತು ನೀಡಿದವು.

ಸತತವಾಗಿ ಆಯಾಸವಿಲ್ಲದೆ ನಡೆದ ಪಕ್ಷದ ಆಂತರಿಕ ಸಂಘರ್ಷದಲ್ಲಿ ಭಾಗವಹಿಸಿದವರಲ್ಲಿ ನಾನಲ್ಲದೆ ಅಬ್ದುಲ್ ಹಲೀಂ, ಅಬ್ದುಲ್ಲಾ ರಸೂಲ್, ಸರೋಜ್ ಮುಖರ್ಜಿ, ಬಂದಿವತ್ ಮುಖರ್ಜಿ, ನಿರಂಜನ ಸೇನ್‌ಗುಪ್ತಾ, ಪ್ರಮೋದ್ ದಾಸ್ ಗುಪ್ತಾ, ಭೂಪೇಶ್ ಗುಪ್ತಾ ಮತ್ತು ರಣೇನ್ ಸೇನ್ ಮೊದಲಾದವರು ಪ್ರಮುಖ.


ದೈನಂದಿನ ಚರ್ಚೆ

ಪಕ್ಷದ ರಾಜ್ಯಮಟ್ಟದಲ್ಲಿ ನಾವು ಬಹುತೇಕ ಪ್ರತಿದಿನವೂ ಗುಂಪು ಚರ್ಚೆ ನಡೆಸುತ್ತಿದ್ದೆವು. ಕಾಮಿನ್‌ಫಾರ್ಮ್ ಸಂಪಾದಕೀಯ ಚರ್ಚೆಯ ಮುಖ್ಯವಸ್ತು ಆದಮೇಲೆ ನಿರ್ಲಕ್ಷ್ಯದ ಪ್ರವೃ ಕಡಿಮೆಯಾಯಿತು.

ನಮ್ಮ ಭೂಗತ ಮುಖಂಡರು ಒಬ್ಬರಾದ ಮೇ ಒಬ್ಬರಂತೆ ಬಂಧಿತರಾದರು. 1950 ಸೆಪ್ಟೆಂಬರ್‌ನ ನಾನು ಮತ್ತು ನಿರಂಜನ್ ಸೇನ್ ಗುಪ್ತಾ ರಹ ಸಭೆಯೊಂದರಲ್ಲಿ ಪಾಲ್ಗೊಂಡು ವಾಪಸಾಗುತ್ತಿದ್ದಾ ಮಾರ್ಗಮಧ್ಯದಲ್ಲಿ ಪೋಲೀಸರು ನಮ್ಮನ್ನ ಬಂಧಿಸಿದರು. ನಮ್ಮನ್ನು ಮೊದಲು ಸ್ಪೆಷಲ್ ಬ್ರಾಂಚ ಕಚೇರಿಗೆ, ನಂತರ ಪ್ರೆಸಿಡೆನ್ಸಿ ಸೆರೆಮನೆ ಕಳಿಸಲಾಯಿತು. ಅಲ್ಲಿಂದ ನಮ್ಮನ್ನು ಡಂ ಡಂ ಸೆಂಟ್ರ ಜೈಲಿಗೆ ಕಳಿಸಿದರು. ಅಲ್ಲಿ ನಾವು ನಮ್ಮ ಸಂಗಾತಿಗಳ ಭೇಟಿಯಾದೆವು.

ಪ್ರಮೋದ್ ದಾಸ್ ಗುಪ್ತಾ, ಅಬ್ದುಲ್ ಹಲೀ ಅಬ್ದುಲ್ಲಾ ರಸೂಲ್, ಭೂಪೇಶ್ ಗುಪ್ತಾ ಮ ಸರೋಜ್ ಮುಖರ್ಜಿ ನಮ್ಮನಂತರ ಬಂಧಿತರಾದ ಅವರನ್ನು ಕೂಡ ಡಂಡಂ ಸೆಂಟ್ರಲ್ ಜೈಲ ಹಾಕಲಾಯಿತು. ನನ್ನ ಎರಡನೇ ಸೆರೆವಾಸ ಸುಮಾ ಒಂದು ವರ್ಷದವರೆಗೆ ಮುಂದುವರಿಯಿತು. 19 ರಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ ಮ ನಾನು ಮತ್ತೊಮ್ಮೆ ಸ್ವತಂತ್ರ ಜೀವಿಯಾದೆ....

(ಮುಂದವರಿಯುವುದು



ಬುದ್ಧದೇವ್ ಭಟ್ಟಾಚಾರ್ಯ ಪಶ್ಚಿಮ ಬಂಗಾಳದ ಉಪಮುಖ್ಯಮಂತ್ರಿ

ಪಶ್ಚಿಮ ಬಂಗಾಳದ ಎಡರಂಗ ರಾಜ್ಯದ ಪೋಲೀಸ್ ಮತ್ತು ಪ್ರಸಾರ ಮಂತ್ರಿ ಬುದ್ಧದೇವ್ ಭಟ್ಟಾಚಾರ್ಯರನ್ನು ಮುಖ್ಯಮಂತ್ರಿ ಜ್ಯೋತಿಬಸು ರವರಿಗೆ ದೈನಂದಿನ ಕೆಲಸಗಳಲ್ಲಿ ನೆರವಾಗಲು ಉಪಮುಖ್ಯಮಂತ್ರಿಯಾಗಿ ನೇಮಿಸಲು ನಿರ್ಧರಿಸಿದೆ. ಜ್ಯೋತಿಬಸುರವರೇ ಅವರ ಹೆಸರು ಸೂಚಿಸಿದರು. ತನ್ನ ಆರೋಗ್ಯ ಚೆನ್ನಾಗಿಲ್ಲ, ನೆರವಿಗೆ ಒಬ್ಬರು ಇರಬೇಕಾಗಿದ್ದು ಅಗತ್ಯ ಎಂದು ಅವರು ಹೇಳಿದರು. ಎಡರಂಗದ ಪಕ್ಷಗಳು ಜ್ಯೋತಿ ಬಸುರವರ ಆಯ್ಕೆಯನ್ನು ಒಪ್ಪಿಕೊಂಡರು. ಎಡರಂಗ ಸರಕಾರದ 23 ವರ್ಷಗಳ ಆಳ್ವಿಕೆಯಲ್ಲಿ ಭಟ್ಟಾ ಚಾರ್ಯರವರು ಮೊದಲ ಉಪಮುಖ್ಯಮಂತ್ರಿಗಳು.

ಎಡರಂಗ ಮಂತ್ರಿಗಳ ಕೆಲಸಕಾರ್ಯಗಳ ಪರಿಶೀಲನೆಗೆ ಕೇಂದ್ರ ಸಮಿತಿಯನ್ನು ರಚಿಸಲು ಕೂಡಾ ನಿರ್ಧರಿಸಿತು. 1977 ರಲ್ಲಿ ಇಂತಹ ಸಮಿತಿ ರಚನೆಯಾಗಿದ್ದು 1980 ರ ದಶಕದಲ್ಲಿ ಅದು ನಿಷ್ಕ್ರಿಯವಾಗಿತ್ತು.

ಎಡರಂಗದ ಮೊದಲ ಉಪಮುಖ್ಯ ಮಂತ್ರಿಯಾದ ಬುದ್ಧದೇವ್ ಭಟ್ಟಾಚಾರ್ಯ ಮಾರ್ಚ್ 1, 1944 ರಲ್ಲಿ ಕಲ್ಕತ್ತೆಯಲ್ಲಿ ಜನಿಸಿದರು. ಪ್ರಖ್ಯಾತ ಬಂಗಾಳಿ ಕವಿ ಸುಖಾಂತ ಭಟ್ಟಾಚಾರ್ಯರವರ ಸೋದರ ನೇಪಾಲ್ ಚಂದ್ರ ಭಟ್ಟಾಚಾರ್ಯ ಇವರ ತಂದೆಯವರು. ಕಲ್ಕತ್ತೆಯ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ಅವರು ರಾಜಕೀಯದತ್ತ ಆಕರ್ಷಿತರಾದರು. ಕಲ್ಕತ್ತ ವಿಶ್ವವಿದ್ಯಾಲಯ ಆವರಣದಲ್ಲಿನ ಪ್ರಮುಖ ವಿದ್ಯಾರ್ಥಿ ಆಂದೋಲನಗಳಲ್ಲಿ ಅವರು ಪಾತ್ರವಹಿಸಿದ್ದು, ಅವರು 1966 ರಲ್ಲಿ ಸಿಪಿಐ(ಎಂ)ನ ಸಂಪರ್ಕಕ್ಕೆ ಬಂದರು. 1966, 67 ರಲ್ಲಿ 1972 ರಲ್ಲಿ ಅವರು ಜೈಲುವಾಸ ಅನುಭವಿಸಬೇಕಾಯಿತು. 1968 ರಲ್ಲಿ ಅವರು ಡಿ.ವೈ.ಎಫ್.ಐ ನ ಮೊದಲ ಪ್ರಧಾನ ಕಾರ್ಯದರ್ಶಿಯಾದರು. ಈಗ ಇವರು ಸಿಪಿಐ(ಎಂ) ಪಶ್ಚಿಮ ಬಂಗಾಳ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು ಹಾಗೂ ಕೇಂದ್ರ ಸಮಿತಿ ಸದಸ್ಯರು.

1977 ರಿಂದಲೂ ಮಂತ್ರಿಯಾಗಿರುವ ಭಟ್ಟಾಚಾರ್ಯ ಒಬ್ಬ ಕವಿ ಹಾಗೂ ನಾಟಕಕಾರ ಕೂಡಾ. ಅವರ ಹಲವು ನಾಟಕಗಳನ್ನು ಕಲ್ಕತ್ತೆಯಲ್ಲಿ ಯಶಸ್ವಿಯಾಗಿ ರಂಗಕ್ಕೆ ತರಲಾಗಿದೆ.

(ಕೃಪೆ: ಗಣಶಕ್ತಿ)

ಕುರುಗೋಡುನಲ್ಲಿ ಸಿಪಿಐ(ಎಂ) ಕಾರ್ಯಕರ್ತರ ಬಂಧನ

ಕುರುಗೋಡು ಪಟ್ಟಣದಲ್ಲಿ ಸಿಪಿಐ(ಎಂ)ನ ನೂರಾರು ಕಾರ್ಯಕರ್ತರು ಪ್ರತಿಭಟನಾ ಮೆರವಣಿಗೆ ಜೊತೆ ಮುಖ್ಯ ರಸ್ತೆಯಲ್ಲಿ ರಸ್ತೆ ತಡೆ ನಡೆಸಲಾಗಿದೆ.ಪ್ರತಿಭಟನೆಯಲ್ಲಿ ಭಾಗವಹಿಸಿದ್ದ 40 ಮಂದಿಯನ್ನು ಪೋಲೀಸರು ಬಂಧಿಸಿದ್ದಾರೆ. ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಸಿಪಿಐ(ಎಂ) ಜಿಲ್ಲಾಸಮಿತಿ ಸದಸ್ಯರಾದ ಪಿ.ಆರ್. ವೆಂಕಟೇಶ್, ಪ್ರಾಂತರೈತ ಸಂಘದ ಜಿಲ್ಲಾ ಅಧ್ಯಕ್ಷರಾದ ವಿ.ಎಸ್. ಶಿವಶಂಕರ್, ಸಿಪಿಐ(ಎಂ) ಮುಖಂಡರಾದ ಗಾದಿ ಲಿಂಗಪ್ಪ, ಕೃಷಿಕೂಲಿಕಾರರ ಸಂಘದ ಮುಖಂಡರಾದ ವಿಶ್ವನಾಥಸ್ವಾಮಿ, ಡಿ.ವೈ.ಎಫ್.ಐ ಮುಖಂಡರಾದ ಎಸ್. ಅಹಮದ್, ಎನ್.ಟಿ. ರಾಮಣ್ಣ ಇಮಾಂ ಸಾಬ್, ರಾಜಸಾಬ್ ಹಾಗೂ ಮಹಿಳಾ ಮುಂಖಂಡರಾದ ಈರಮ್ಮ ಮತ್ತು ಗಂಗಮ್ಮ ಇವರುಗಳು ಭಾಗವಹಿಸಿದ್ದರು.

ಕುಡತಿನಿಯಲ್ಲಿ ಪ್ರತಿಭಟನೆ

ಕುಡತಿನಿಯ ಮುಖ್ಯ ರಸ್ತೆಯಲ್ಲಿ ರಸ್ತೆ ತಡೆ ಮೂಲಕ ಪ್ರತಿಭಟನೆ ಮಾಡಲಾಗಿದೆ. ನೂರಾರು ಸಿಪಿಐ(ಎಂ) ಕಾರ್ಯಕರ್ತರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದಾರೆ. ಬಸ್ ಪ್ರಯಾಣ ದರ ಏರಿಕೆಯನ್ನು ಕೂಡಲೇ ಹಿಂತೆಗೆದುಕೊಳ್ಳಲು ಒತ್ತಾಯಿಸಲಾಗಿದೆ. ಪ್ರತಿಭಟನೆಯ ನೇತೃತ್ವವನ್ನು ಸಿಪಿಐ(ಎಂ) ಜಿಲ್ಲಾ ಸಮಿತಿ ವಹಿಸಿತ್ತು.

ಕೇರಳ: ಮಾಜಿ ಕಾಂಗ್ರೆಸ್ ಮುಖ್ಯಮಂತ್ರಿಯ ಮೇ ಭ್ರಷ್ಟಾಚಾರ ಆರೋಪ ಪತ್ರ ದಾಖಲು

ಕೇರಳದ ಮಾಜಿ ಮುಖ್ಯಮಂತ್ರಿ ಹಾಗೂ ಈಗ ಕಾಂಗ್ರೆಸ್ (ಐ) ಸಂಸತ್ ಸದಸ್ಯರಾಗಿರುವ ಕೆ.ಕರುಣಾಕರನ್‌ರವರ ಮೇಲೆ ಕುಖ್ಯಾತ ಪಾಮೋಲಿನ್ ಭ್ರಷ್ಟಾಚಾರದ ಹಗರಣದಲ್ಲಿ ಭ್ರಷ್ಟಾಚಾರವಿರೋಧಿ ಕಚೇರಿ ವಿಧ್ಯುಕ್ತವಾಗಿ ಆರೋಪಪತ್ರ ದಾಖಲು ಮಾಡಿದೆ. 1991 ರಲ್ಲಿ ವಿಧಿ-ವಿಧಾನಗಳನ್ನು ಉಲ್ಲಂಘಿಸಿ ಆತುರಾತು ರದಿಂದ ಸಿಂಗಾಪೂರದ ಒಂದು ಕಂಪನಿಯಿಂದ 15000 ಟನ್ ಪಾಮೊಲಿನ್ ಆಮದಿಗೆ ಸಂಬಂಧಪಟ್ಟ ಹಗರಣ ಇದು. ಇದರಲ್ಲಿ ರಾಜ್ಯ ಸರಕಾರಕ್ಕೆ 6 ಕೋಟಿ ರೂ.ಗಳ ನಷ್ಟವಾಗಿದೆ. ಆ ಕಂಪನಿಗೆ 3 ಕೋಟಿ. ರೂ.ಗಳ ಲಾಭವಾಗಿದೆ. ಹಿರಿಯ ಐ.ಎ.ಎಸ್.ಅಧಿಕಾರಿಗಳಾದ ಮುಖ್ಯ ಕಾರ್ಯದರ್ಶಿ, ಅಡಿಶನಲ್ ಮುಖ್ಯ ಕಾರ್ಯ ದರ್ಶಿ, ನಾಗರಿಕ ಪೂರೈಕೆ ನಿಗಮದ ಮ್ಯಾನೆಜಿಂಗ್ ಡೈರಕ್ಟರ್ ಹಾಗೂ ಸಿಂಗಾಪೂರದ ಕಂಪನಿಯ ಅಧಿಕಾರಿಗಳ ವಿರುದ್ಧ ಆಪಾದನೆಗಳಿವೆ. ಇದರ ಮೇಲೆ ಕಾನೂನು ಕ್ರಮ ಜರುಗಿಸಲು ರಾಜ್ಯಪಾಲರು, ಲೋಕಸಭಾ ಅಧ್ಯಕ್ಷರು ಹಾಗೂ ಕೇಂದ್ರ ಸರಕಾರದ ಅನುಮತಿ ಕೇಳಲು ಅವಕಾಶ ನೀಡಿ ನ್ಯಾಯಾಲ ಜನವರಿ 21 ಕ್ಕೆ ವಿಚಾರಣೆಯನ್ನು ಮುಂದೂಡಿದೆ.

1992 ರಲ್ಲಿ ವಿಧಾನಸಭೆಯಲ್ಲಿ ಇದನ್ನು ಎ ಮೇಲೆ ಹಾಗೂ ಅಕೌಂಟೆಂಟ್ ಜನರಲ್ ಮ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಪ್ರತಿಕೂ ಟಿಪ್ಪಣಿಯ ನಂತರ ಸುಮಾರು ಆರು ತಿಂಗಳು ಪಾಮೋಲಿನ ಭ್ರಷ್ಟಾಚಾರ ಪತ್ರಿಕೆಗಳ ಮಾಧ್ಯಮಗಳಲ್ಲಿ ಜ್ವಲಂತ ಪ್ರಶ್ನೆಯಾಗಿತ್ತು. ಕರುಣಾಕರ ಹೈಕೋರ್ಟ್ ಮತ್ತು ಸುಪ್ರಿಂ ಕೋರ್ಟ್‌ನಲ್ಲಿ ವಿಷಯವನ್ನು ಎತ್ತಿದರು. ಈ ರೀತಿ ಸುಪ್ರೀಂ ಕೋರ್ಟ್ ಅನುಮತಿಯಿಂದ ಈ ತನಿಖೆ ನಡೆದಿತ್ತು.

ಇದಕ್ಕೆ ಕೆಲವು ದಿನಗಳ ಹಿಂದೆ ಕರುಣಾಕರ ಮಂತ್ರಿಮಂಡಲದ ಒಬ್ಬ ಮಂತ್ರಿ ಬಾಲಕೃಷ್ಣ ಪಿಳ್ಳೆ ವರು ಎರಡು ಹಗರಣಗಳಲ್ಲಿ ಶಿಕ್ಷೆಗೊಳಪಟ್ಟಿದ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈ ತೀ ಗಳ ವಿರುದ್ಧ ಅವರು ಈಗ ಸುಪ್ರೀಂ ಕೋರ್ಟಿಗೆ ಮ ಮಾಡಿದ್ದಾರೆ.

ವಾಜಪೇಯಿ ಸರಕಾರ ಹೆಚ್ಚಿಸಿದ ಡಿಸೆಲ್ ಬೆ

ರಾಜ್ಯದ ಎಸ್.ಎಂ. ಕೃಷ್ಣ ಅವರ ನೇತೃತ್ವದ ಕಾಂಗ್ರೆ ಸರಕಾರವು ಬಸ್ ದರವನ್ನು ವಿಪರೀತವಾಗಿ ಏರಿಕೆ ಮಾಡಿರುವುದನ್ನು ವಿರೋಧಿಸಿ ಪ್ರತಿಭಟನೆಯನ್ನು ಮಾಡಲು ಸಿಪಿಐ(ಎಂ) ಬಳ್ಳಾರಿ ಜಿಲ್ಲಾ ಸಮಿತಿ ನೀಡಿದ ಕರೆಯನ್ನು ಜಿಲ್ಲೆಯಾದ್ಯಂತ ನವೆಂಬರ್ 12 ರಂದು ಯಶಸ್ವಿಯಾಗಿ ನಡೆಸಲಾಗಿದೆ.

ಬಿಜೆಪಿ ನೇತೃತ್ವದ ಕೇಂದ್ರಸರಕಾರವು ಇತಿಮಿತಿ ಇಲ್ಲದಂತೆ ಡೀಸೆಲ್ ಬೆಲೆಯನ್ನು ಏರಿಸಿ ತನ್ನ ತೀವ್ರ ಜನವಿರೋಧಿ ಮುಖವನ್ನು ಬಯಲು ಮಾಡಿದೆ. ಬಿಜೆಪಿ ಸರಕಾರದ ಜನವಿರೋಧಿ ನೀತಿಗಳ ಪರಿಣಾಮವಾಗಿ ಎಲ್ಲ ಅಗತ್ಯ ವಸ್ತುಗಳ ಬೆಲೆಗಳು ಗಗನಕ್ಕೇರಿವೆ. ಡೀಸೆಲ್ ಬೆಲೆ ಏರಿಕೆಯ ಪರಿಣಾಮವಾಗಿ ಸರಕು ಸಾಗಣೆಕೆ ಖರ್ಚು ವಿಪರೀತವಾಗಿ ಹೆಚ್ಚಾಗಿ ಅಕ್ಕಿ, ಜೋಳ, ಬೇಳೆ, ತರಕಾರಿ, ಬೆಲೆಗಳು ಹೆಚ್ಚಿದ್ದೂ ಜನರ ಜೀವನ ಕಷ್ಟಕ್ಕೆ ಗುರಿಯಾಗಿದೆ. ಆಯಿಲ್ ಪೂಲ್ ಖಾತೆಯಲ್ಲಿ ಕೊರತೆಯ ಕಾರಣ ಡೀಸೆಲ್ ಬೆಲೆ ಏರಿಕೆ ಕ್ರಮ ಅನಿವಾರ್ಯವಾಗಿದೆ ಎಂಬ ನೆಪವನ್ನು ಭಾಜಪ ಸರಕಾರ ಮುಂದುಮಾಡಿದೆ. ಚುನಾವಣೆಗಳ ಫಲಿತಾಂಶಗಳು ಇನ್ನೂ ಹೊರಬೀಳುವ ಮೊದಲೇ ನಾಚಿಗೆಗೆಟ್ಟ ಬಿಜೆಪಿ ಸರಕಾರವು ಐಎಂಎಫ್ ಮತ್ತು ಜಾಗತಿಕಬ್ಯಾಂಕಿನ ಒತ್ತಡದಲ್ಲಿ ಅವರ ಸೇವೆಗಾಗಿ ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಲಾಭವನ್ನು ಹೆಚ್ಚಿ ಈ ಕುತಂತ್ರವನ್ನು ಮಾಡಲಾಗಿದೆ.

ಕಾಂಗ್ರೆ ಸರಕಾರವು ಡೀಸೆಲ್ ಬೆಲೆ ಏರಿಕ ಕಾರಣವಾಗಿ ಹೇಳಿ ಯಥೇಚ್ಛವಾಗಿ ಬಸ್ ಧರಗ ಹೆಚ್ಚಿಸಿರುವುದು ಸಮಂಜಸವಾಗಿಲ್ಲ. ಕೆ.ಎಸ್.ಆರ್.ಟಿ ಮೂಲಕ ಹಲವು ರಿಯಾಯಿತಿಗಳನ್ನು ನೀಡಲಾಗು ಅಲ್ಲದೇ ಅತ್ಯಂತ ಹೆಚ್ಚಿನ ತೆರಿಗೆಗಳನ್ನು ಖಾ ಬಸ್‌ಗಳಿಗಿಂತಲೂ ಮೇಲಾಗಿ ಸಂಗ್ರಹಿಸಲಾಗು ಮತ್ತೊಂದು ಕಡೆ ಕೆ.ಎಸ್.ಆರ್.ಟಿ.ಸಿ.ಯಲ್ಲಿ ಅತು ಹಂತದಿಂದ ಆಗುತ್ತಿರುವ ಭ್ರಷ್ಟಾಚಾರ ಹಾ ಸೋರಿಕೆಗಳನ್ನು ನಿಯಂತ್ರಿಸಲು ಅಗತ್ಯ ಕ್ರಮ ಕೈಗೊ ಮೂಲಕ ಬೆಲೆ ಏರಿಕೆಯನ್ನು ಮಾಡದೇ ಸಂಸ್ಥೆ ನಿರ್ವಹಿಸಬಹುದಾಗಿತ್ತು.

ಕೇಂದ್ರ ಸರಕಾರದ ಜನ ವಿರೋಧಿ ಡೀಸೆಲ್ ಏರಿಕೆ ಹಾಗೂ ರಾಜ್ಯ ಸರಕಾರದ ತೀವ್ರ ಬಸ್ ಏರಿಕೆಗಳನ್ನು ಹಿಂತೆಗೆದುಕೊಳ್ಳಲು ಒತ್ತಾ ಬಳ್ಳಾರಿನಗರದಲ್ಲಿ ಗಾಂಧಿ ಭವನ ಮುಂದೆಯಿಂದ ರಾ ವೃತ್ತದವರೆಗೆ ನೂರಾರು ಸಿಪಿಐ(ಎಂ) ಕಾರ್ಯಕ ಮೆರವಣಿಗೆ ನಡೆಸಿ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾ ಎದುರು ಪ್ರತಿಭಟನೆ ನಡೆಸಿದರು.

ಕಾಂಗ್ರೆಸ್ ಪಕ್ಷ ಏನೂ ಪಾಠ ಕಲಿತಿಲ್ಲ

ಹರ್ಕಿಶನ್ ಸಿಂಗ್ ಸುರ್ಜಿತ್

ಇತ್ತೀಚಿನ ಲೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ಭಾರೀ ಪರಾಭವಕ್ಕೆ ಕಾರಣಗಳ ವಿಮರ್ಶೆ ನಡೆಸಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಒಂದು ಆಯೋಗ ನೇಮಿಸಿತು - ಎ.ಕೆ.ಆಂಟನಿಯವರ ನೇತೃತ್ವದ ಆಯೋಗ. ಈ ಆಯೋಗ ತನ್ನ ವರದಿ ನೀಡಿದೆ. ಕಾಂಗ್ರೆಸ್‌ನ ಸೋಲಿಗೆ ಈ ಆಯೋಗ ಕಾರಣಗಳನ್ನು ಗುರುತಿಸಿದೆಯೇ, ಈ ಸೋಲಿನಿಂದ ಕಾಂಗ್ರೆಸ್ ಪಾಠ ಕಲಿತಿದೆಯೇ? ಕಳೆದ ವಾರದ ಘಟನೆಗಳನ್ನು ನೋಡಿದರೆ ಅದು ಯಾವ ಪಾಠವನ್ನೂ ಕಲಿತಂತೆ ಕಾಣುತ್ತಿಲ್ಲ ಎನ್ನುತ್ತಾರೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು. ಅವರ ವಿಶ್ಲೇಷಣೆ ಇಲ್ಲಿದೆ.

ಇತ್ತೀಚಿನ ಲೋಕಸಭಾ ಚುನಾವಣೆಗಳಲ್ಲಿ ಅತ್ಯಂತ ಕೆಟ್ಟ ಪ್ರದರ್ಶನ ನೀಡಿದ ಕಾಂಗ್ರೆಸ್ಸಿನ ಮುಖಂಡತ್ವದಲ್ಲಿ ಪುನರಾಲೋಚನೆ ನಡೆಯುತ್ತದೆ ಎಂದು ನಿರೀಕ್ಷಿಸಿದವರಿಗೆ ಇತ್ತೀಚಿನ ಕೆಲವು ಬೆಳವಣಿಗೆಗಳು ದಿಗಿಲು ಹುಟ್ಟಿಸಿವೆ.

ಸಂಸತ್ತಿನ ಚಳಿಗಾಲದ ಅಧಿವೇಶನ ಆರಂಭವಾಗುವ ಮೊದಲೇ ಸರಕಾರ ಸಂಸತ್ತಿನ ಅನುಮೋದನೆ ಪಡೆಯಬಯಸುವ ಮಸೂದೆಗಳಿಗೆ ಅಂದರೆ ವಿಮೆಯನ್ನು ಖಾಸಗಿಯವರಿಗೆ ತೆರೆಯುವ ಮಸೂದೆ, ಸಾರ್ವಜನಿಕ ವಲಯದ ಬ್ಯಾಂಕುಗಳ ಖಾಸಗೀಕರಣಕ್ಕೆ ಅವಕಾಶ ಮಾಡಿಕೊಡುವ ಕ್ರಮಗಳು ಇತ್ಯಾದಿಗಳಿಗೆ ಬೆಂಬಲ ಕೊಡುತ್ತೇವೆ, ಇದಕ್ಕೆ ಪ್ರತಿಯಾಗಿ ಬೋಫೋರ್ಸ್ ಆಪಾದನೆ ಪಟ್ಟಿಯಿಂದ ರಾಜೀವ್‌ಗಾಂಧಿಯವರ ಹೆಸರು ತೆಗೆಯಬೇಕು ಎಂದು ಕಾಂಗ್ರೆಸ್ ಮುಖಂಡರು ಆಗ್ರಹಿಸಿದರು. ಕಾಂಗ್ರೆಸ್ ಸದಸ್ಯರಲ್ಲೂ ಹುರುಪು ತುಂಬದ ಈ ಬೇಡಿಕೆಯ ಮೇಲೆ ಗಮನ ಕೇಂದ್ರೀಕರಿಸಲು ಸಂಸತ್ತಿನ ಹೊರಗೆ ಪ್ರದರ್ಶನ ಏರ್ಪಾಡು ಮಾಡಿದರು. ಆದರೆ ಇಂತಹ ತಂತ್ರಗಳ ಮೂಲಕ ಈ ಪಕ್ಷ ತನ್ನ ಸಂಕುಚಿತ ಹಿತಾಸಕ್ತಿಗಳಿಗಾಗಿ ದೇಶದ ಹಿತಾಸಕ್ತಿಗಳ ಬಗ್ಗೆ ಚೌಕಾಶಿ ನಡೆಸಲೂ ಹಿಂಜರಿಯುವುದಿಲ್ಲ ಎಂಬ ಸಂಕೇತವನ್ನು ಕಳಿಸಿದೆ.

ಅಂದರೆ ಕಾಂಗ್ರೆಸ್ ಪಕ್ಷ ಹಿಂದಿನ ತನ್ನ ತಪ್ಪುಗಳಿಂದ ಪಾಠ ಕಲಿಯುವಲ್ಲಿಯೂ ಸೋತಿದೆ. ಈಗಿನ ಕಾಂಗ್ರೆಸ್ ಪಕ್ಷ 52 ವರ್ಷಗಳ ಹಿಂದಿನ ಕಾಂಗ್ರೆಸ್ ಪಕ್ಷದ ಒಂದು ಕಳಾಹೀನ ನೆರಳಿನಂತಾಗಿ ಬಿಟ್ಟಿದೆ. ಸಂಘಟನಾತ್ಮಕವಾಗಿಯೂ, ಚುನಾವಣಾ ವಿಜಯಗಳ ದೃಷ್ಟಿಯಿಂದಲೂ ನಿರಂತರವಾಗಿ ಅವನತಿ ಕಾಣುತ್ತಿರುವ ಪಕ್ಷ ಇದು. ಮೂರನೇ ಎರಡು ಬಹುಮತ ಪಡೆದಿದ್ದ ಈ ಪಕ್ಷ ಈಗ ಸದನದ ಕಾಲಂಶ ಸದಸ್ಯರ ವಿಶ್ವಾಸವನ್ನೂ ಹೊಂದಿಲ್ಲ. ಸ್ವಾತಂತ್ರ್ಯ ಹೋರಾಟದ ಪರಂಪರೆಯ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದ ಈ ಪಕ್ಷ ಈಗ ಶೋಚನೀಯ ಸ್ಥಿತಿ ತಲುಪಿದೆ. ತಮ್ಮ ಹಿಂದಿನ ಮುಖಂಡರು ಸ್ವಾತಂತ್ರ್ಯ ಆಂದೋಲನದ ಕನಸುಗಳನ್ನು, ಆಕಾಂಕ್ಷೆಗಳನ್ನು ಜನರ ಮುಂದಿಟ್ಟು ಅವರ ಪ್ರಯೋಜನವನ್ನು ಪಡೆದರು ಎಂಬುದನ್ನು ಕೂಡಾ ಈಗಿನ ಕಾಂಗ್ರೆಸ್ ಮುಖಂಡತ್ವ ಮರೆತಂತಿದೆ. ಈ ಕನಸುಗಳನ್ನು ನನಸಾಗಿಸಲು ಬಹಳ ಏನೂ ಮಾಡಿಲ್ಲ ಎಂಬುದು ಬೇರೆ ಮಾತು. ಈಗ ಬಡಜನರ, ಹಿಂದುಳಿದವರ, ಅಲ್ಪಸಂಖ್ಯಾತರ ಬಗ್ಗೆ ಮಾತನಾಡುವುದನ್ನೂ ಬಿಟ್ಟಿರುವಾಗ ಇನ್ನೇನು ತಾನೇ ನಿರೀಕ್ಷಿಸಲು ಸಾಧ್ಯ?

ಕಾಂಗ್ರೆಸ್ ದಾರಿಯ ದುಷ್ಫಲ

ಸ್ವತಂತ್ರ ಭಾರತದ 52 ವರ್ಷಗಳಲ್ಲಿ ಸುಮಾರು 45 ವರ್ಷ ಕಾಂಗ್ರೆಸ್ ಆಳ್ವಿಕೆಯಿತ್ತು. ಆದರೆ ಈಗಲೂ 40% ಜನ ಬಡತನದ ರೇಖೆಯ ಕೆಳಗಿದ್ದಾರೆ, 50% ಜನ ನಿರಕ್ಷರಿಗಳಾಗಿದ್ದಾರೆ, ಹತ್ತು ಕೋಟಿಗೂ ಹೆಚ್ಚು ನಿರುದ್ಯೋಗಿಗಳಾಗಿದ್ದಾರೆ. ಇದು ಕಾಂಗ್ರೆಸ್ ಅನುಸರಿಸಿದ ಅಭಿವೃದ್ಧಿ ದಾರಿಯ ಫಲ. ಜವಾಹರಲಾಲ್ ನೆಹರೂರವರೇ ಹೇಳಿದಂತೆ 'ಶ್ರೀಮಂತರು ಶ್ರೀಮಂತರಾಗುತ್ತಲೇ ಹೋಗುತ್ತಿದ್ದಾರೆ, ಬಡವರು ಬಡವರಾಗುತ್ತಲೇ ಹೋಗುತ್ತಿದ್ದಾರೆ' ಬಡವ-ಶ್ರೀಮಂತರ ನಡುವೆ ಪ್ರದೇಶ-ಪ್ರದೇಶಗಳ ನಡುವೆ ಅಸಮಾನತೆ ಹೆಚ್ಚುತ್ತಲೇ ಇದೆ.

ಇದರಿಂದಾಗಿ ಕಾಂಗ್ರೆಸ್ ಜನಗಳಿಂದ ದೂರಸರಿದಂತೆ ಆ ಸ್ಥಾನವನ್ನು ಬಿಜೆಪಿ ಪ್ರತಿನಿಧಿಸುವ ಬಲಪಂಥೀಯ ಶಕ್ತಿಗಳು ತುಂಬಿದವು. ಜನಪರವಾದ ಯಾವುದೇ ಪರ್ಯಾಯವನ್ನು ಮುಂದಿಡದಿದ್ದರೂ ಜನಗಳಲ್ಲಿ ಕೋಮುವಾದಿ, ಸಂಕುಚಿತ ಭಾವನೆಗಳನ್ನು ಬಡಿದೆಬ್ಬಿಸಿ ಜನಗಳ ಗಮನವನ್ನು ಬೇರೆಡೆಗೆ ಸೆಳೆಯಲು ಅವರಿಗೆ ಸಾಧ್ಯವಾಯಿತು. ಕಾಂಗ್ರೆಸ್ ತೆರವು ಮಾಡಿದ ಸ್ಥಾನವನ್ನು ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ತುಂಬಲಾರದೇ ಹೋದವು ಎಂಬುದು ಕೂಡಾ ನಿಜ.

1996 ರ ಚುನಾವಣೆಗಳಲ್ಲಿ ಕಾಂಗ್ರೆಸ್‌ನ ಪರಾಭವ ಎಚ್ಚರಿಕೆಯ ಗಂಟೆಯಾಗಬೇಕಿತ್ತು. ಭಾರತದ ಗುತ್ತೇದಾರಿ ಬಂಡವಾಳಿಗರು ತಮ್ಮ ಸಾಮರ್ಥ್ಯ ಬೆಳೆಸಿಕೊಂಡ, ವಿಭಿನ್ನ ದೇಶಗಳಲ್ಲಿ ಸಮಾಜವಾದಕ್ಕೆ ಆದ ಹಿನ್ನಡೆಯ ಹಿನ್ನೆಲೆಯಲ್ಲಿ ನರಸಿಂಹರಾವ್ ಸರಕಾರ (1991-96) ಉದಾರೀಕರಣ-ಖಾಸಗೀಕರಣದ ನೀತಿಗಳನ್ನು ತಂದು ಜನಗಳಲ್ಲಿ ಅಸಂತೃಪ್ತಿ ಹೆಚ್ಚುವಂತಾಯಿತು. ಇದರ ಪ್ರಯೋಜನ ಬಿಜೆಪಿಗೆ ದಕ್ಕಿತು.

ಮುಖಂಡರ ಬದಲಾವಣೆಯಿಂದಲೂ ಭಾಗ್ಯ ಅರಳಲಿಲ್ಲ

1998 ಮತ್ತು 1999 ರ ಚುನಾವಣೆಗಳಲ್ಲೂ ಕಾಂಗ್ರೆಸ್‌ನ ಪುನರಜ್ಜೀವನದ ಲಕ್ಷಣಗಳು ಕಾಣಲಿಲ್ಲ. ಬಹುಶಃ ಮುಖಂಡರನ್ನು ಬದಲಿಸಿದರೆ ತಮ್ಮ ಭಾಗ್ಯ ಮತ್ತೆ ಅರಳಬಹುದು ಎಂದು ಕಾಂಗ್ರೆಸ್ ಮುಖಂಡರು ಬಗೆದರು. ಜನ-ಪರ ಧೋರಣೆಗಳನ್ನು, ಕಾರ್ಯಕ್ರಮವನ್ನು ಮುಂದಿಟ್ಟು ಬಿಜೆಪಿಯಿಂದ ತಾನು ಭಿನ್ನ ಎಂದು ತೋರಿಸಿಕೊಳ್ಳಬೇಕು ಎಂದು ಅವರಿಗೆ ಅನ್ನಿಸಲೇ ಇಲ್ಲ. ಕೇವಲ ಕಾಂಗ್ರೆಸ್ ಮಾತ್ರವೇ ಸ್ಥಿರತೆ ನೀಡಬಹುದೆಂಬ ತರ್ಕದಿಂದಾಗಿ ಬಿಜೆಪಿ ನೇತೃತ್ವದ ಕೂಟವನ್ನು ಎದುರಿಸಲಾರದೆ ಆ ಚುನಾವಣೆಗಳನ್ನು ವಾಜಪೇಯಿ ಮತ್ತು ಸೋನಿಯಾ ಗಾಂಧಿ ನಡುವಿನ ಸ್ಪರ್ಧೆಯಾಗಿಸುವ ಬಿಜೆಪಿಯ ಬಲೆಯಲ್ಲಿ ಸಿಲುಕಿಕೊಂಡರು. ಸೋನಿಯಾಗಾಂಧಿಯವರಿಂದಾಗಿ ಕಾಂಗ್ರೆಸ್‌ನಿಂದ ಬಿಜೆಪಿಗೆ ಸಾಮೂಹಿಕ ವಲಸೆಯೇನೋ ನಿಂತಿತು, ಆದರೆ ಒಂದು ಸಕಾರಾತ್ಮಕ ಪರ್ಯಾಯದ ಅಭಾವದಿಂದಾಗಿ ಅದು ಓಟುಗಳಾಗಿ ಮಾರ್ಪಡಲಿಲ್ಲ. ಕಾಂಗ್ರೆಸ್ ತನ್ನ ಅತೀ ಕೆಟ್ಟ ಪ್ರದರ್ಶನವನ್ನು ಕಂಡಿತು.

ಪ್ರಾಮಾಣಿಕ ಆತ್ಮವಿಮರ್ಶೆಯಿಲ್ಲ

ಈ ಹಿನ್ನೆಲೆಯಲ್ಲಿ 1999 ರ ಚುನಾವಣೆಗಳಲ್ಲಿ ಪಕ್ಷದ ಪರಾಭವದ ಕಾರಣಗಳನ್ನು ಗುರುತಿಸಲು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಎ.ಕೆ.ಆಂಟನಿಯವರ ನೇತೃತ್ವದಲ್ಲಿ ಒಂದು ಆಯೋಗ ನೇಮಿಸಿತು. ಆದರೆ ಈ ಆಯೋಗ ಕಾಂಗ್ರೆಸ್‌ನ ಸೋಲಿನ ಮೂಲಭೂತ ಕಾರಣಗಳನ್ನು ಗುರುತಿಸಿದೆ ಎಂಬ ಸಂಕೇತಗಳೇನೂ ಇಲ್ಲ. ಬಿಜೆಪಿಯ ಆರ್ಥಿಕ ಕಾರ್ಯಕ್ರಮವೇ ಕಾಂಗ್ರೆಸ್ಸಿನ ಕಾರ್ಯಕ್ರಮ ಎಂದು ಜನ ಗುರುತಿಸಿದರು ಎಂದು ಈ ಆಂಟನಿ ಆಯೋಗ ಹೇಳಿದೆಯೇ? ಆಯೋಗ ಗುರುತಿಸಿದ ಕಾರಣಗಳು - ಕಾರ್ಗಿಲ್ ಯುದ್ಧ, ಅಶಿಸ್ತು, ಗುಂಪುಗಾರಿಕೆ, ತಪ್ಪು ಅಭ್ಯರ್ಥಿಗಳ ಆಯ್ಕೆ ಇತ್ಯಾದಿ ಪ್ರಮುಖ ಕಾರಣಗಳಲ್ಲ, ಒಂದು ಸಕಾರಾತ್ಮಕ ಕಾರ್ಯಕ್ರಮದ ಅಭಾವವೇ ಕಾಂಗ್ರೆಸ್‌ನ ದುರಂತಕ್ಕೆ ಮುಖ್ಯ ಕಾರಣ. ಆದರೆ ಕಾಂಗ್ರೆಸ್ ಪಕ್ಷ ಇದರ ವಿಮರ್ಶೆ ನಡೆಸುವ ಬದಲು ಬಿಜೆಪಿ ಈಗ ಅನುಸರಿಸುತ್ತಿರುವ ಉದಾರೀಕರಣ ನೀತಿಗಳು ತನ್ನದೇ ಎಂದು ಹೇಳುತ್ತಿದೆ. ಮಹಾ ಚಂಡಮಾರುತಕ್ಕೆ ಸಿಲುಕಿದ ಒರಿಸ್ಸಾದಲ್ಲಿ, ಇತ್ತೀಚಿನ ಚುನಾವಣೆಗಳಲ್ಲಿ ಭಾರೀ ನಷ್ಟ ಅನುಭವಿಸಿದ ಪಕ್ಷದ ಸರಕಾರ ಪರಿಹಾರ, ಮರುವಸತಿಗಳಿಗೆ ತನ್ನೆಲ್ಲಾ ಶಕ್ತಿಯನ್ನು ಕ್ರೋಢೀಕರಿಸಬೇಕಾದ ಸಂದರ್ಭದಲ್ಲಿ ಕೂಡಾ ವಿವಿಧ ಗುಂಪುಗಳು ಮುಖ್ಯಮಂತ್ರಿ ಗಿರಿಧರ್ ಗೋಮಾಂಗ್‌ರನ್ನು ಪದಚ್ಯುತಗೊಳಿಸುವ ಕಿತ್ತಾಟದಲ್ಲಿ ಇರುವುದು ನಿಜಕ್ಕೂ ಶೋಚನೀಯ.

ನವೆಂಬರ್ 29:
ಬಿಜೆಪಿಗೂ ಎಚ್ಚರಿಕೆ-ಕಾಂಗ್ರೆಸ್‌ಗೂ ಎಚ್ಚರಿಕೆ

ಕಾಂಗ್ರೆಸ್ ಇನ್ನೂ ಪಾಠ ಕಲಿತಿಲ್ಲ ಎಂಬುದು ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಎದ್ದು ಕಾಣುತ್ತಿದೆ. ನವೆಂಬರ್ 29 ರಂದು ಐ.ಆರ್.ಡಿ.ಎ. ಮಸೂದೆ ಮತ್ತು ಬ್ಯಾಂಕ್ ಖಾಸಗೀಕರಣದ ವಿರುದ್ಧ ವಿಮಾ, ಬ್ಯಾಂಕ್ ಮತ್ತು ಇತರ ನೌಕರರು ನಡೆಸಿದ 'ಸಂಸತ್ ಚಲೋ', ಡಿಸೆಂಬರ್ 1 ರ ವಿಮಾ ನೌಕರರ ಸಂಪೂರ್ಣ ಮುಷ್ಕರ ಬಿಜೆಪಿ ಸರಕಾರಕ್ಕೆ ಮಾತ್ರವಲ್ಲ, ಕಾಂಗ್ರೆಸ್‌ಗೆ ಕೂಡಾ ಒಂದು ಎಚ್ಚರಿಕೆ. ಆರ್ಥಿಕ ನೀತಿಗಳಲ್ಲಿ ಜನ-ಪರ ಬದಲಾವಣೆ ಮಾಡಿಕೊಳ್ಳಿ, ಇಲ್ಲವಾದರೆ ಜನಬೆಂಬಲ ಇನ್ನಷ್ಟು ಕಳಕೊಳ್ಳಲು ಸಿದ್ಧರಾಗಿ ಎಂಬ ಎಚ್ಚರಿಕೆ ಅದು. ನಿಜ, ಕಾಂಗ್ರೆಸ್‌ನೊಳಗೂ ಇಂತಹ ನೀತಿಗಳ ಬಗ್ಗೆ ಭಿನ್ನಾಭಿಪ್ರಾಯ ಕೇಳಬರುತ್ತಿದೆ. ಆದರೆ ಅದು ಪಕ್ಷದ ನಿರ್ಣಯಗಳ ಮೇಲೆ ಪ್ರಭಾವ ಬೀರುವಷ್ಟು ಶಕ್ತಿ ಪಡೆದಿಲ್ಲ.

ಈ ಸಂಸತ್ ಅಧಿವೇಶನದಲ್ಲಿ ಬಿಜೆಪಿ ಐ.ಆರ್.ಡಿ.ಎ. ಮಸೂದೆ ಮತ್ತಿತರ ಕ್ರಮಗಳನ್ನು ತರುತ್ತಿದ್ದಾಗ ಅದರ ಪರಿವಾರಕ್ಕೆ ಸೇರಿದ ಬಿ.ಎಂ.ಎಸ್. ಯೂನಿಯನ್‌ಗಳು ವಿಮಾ ವಲಯದಲ್ಲೂ, ಬ್ಯಾಂಕ್ ವಲಯದಲ್ಲೂ ವ್ಯಕ್ತಗೊಂಡ ಪ್ರತಿಭಟನೆಗಳಲ್ಲಿ ಪಾಲುಗೊಂಡಿವೆ. ಸಂಸತ್ತಿನಲ್ಲಿ ಕಾಂಗ್ರೆಸ್ ಸರಕಾರ ಆ ಕ್ರಮಗಳನ್ನು ಬೆಂಬಲಿಸುತ್ತಿದ್ದಾಗ ಅದಕ್ಕೆ ಸೇರಿದ ಇಂಟಕ್ ಯೂನಿಯನ್‌ಗಳು ಅವೇ ಕ್ರಮಗಳ ವಿರುದ್ಧ ನಡೆಯುತ್ತಿರುವ ಪ್ರತಿಭಟನೆಗಳಲ್ಲಿ ಸೇರಿಕೊಳ್ಳುತ್ತಿವೆ. ಐ.ಎಂ.ಎಫ್-ವಿಶ್ವಬ್ಯಾಂಕ್ ಹೇರಿದ ಉದಾರೀಕರಣ-ಖಾಸಗೀಕರಣ ನೀತಿಗಳಿಗೆ ಪ್ರತಿಭಟನೆಯ ಮಹಾಪೂರ ಮೂಡಿಬರುತ್ತಿದೆ ಎಂಬ ಅರಿವು ಈಗಲೂ ಕಾಂಗ್ರೆಸ್ ಮುಖಂಡರಿಗೆ ಇದ್ದಂತಿಲ್ಲ.

ದೊಡ್ಡ ಬಂಡವಾಳಿಗರ ಒತ್ತಡಕ್ಕೆ ಮಣಿದು

ಕೋಮುವಾದಿ ಬಿಜೆಪಿ ಸ್ಪಷ್ಟವಾಗಿ ಜನ-ವಿರೋಧಿ, ಅತ್ಯಂತ ಬಲಪಂಥೀಯ ಧೋರಣೆಗಳನ್ನು ಆರಿಸಿಕೊಂಡಿರುವ ಸಮಯದಲ್ಲಿ ಕಾಂಗ್ರೆಸ್ ದೊಡ್ಡ ಬಂಡವಾಳಿಗರ ಒತ್ತಡಕ್ಕೆ ಬಲಿಯಾಗಿ ಕೋಮುವಾದಿ-ವಿರೋಧಿ, ಸಾಮ್ರಾಜ್ಯ-ವಿರೋಧಿ ಹೋರಾಟಗಳನ್ನು ದುರ್ಬಲಗೊಳಿಸುತ್ತಿದೆ, ಈ ಮೂಲಕ ರಾಷ್ಟ್ರೀಯ ಐಕ್ಯತೆ, ಆರ್ಥಿಕ ಸಾರ್ವಭೌಮತೆ, ಸಮಯದ ಒರೆಗಲ್ಲಿನಲ್ಲಿ ಸಾಬೀತಾಗಿರುವ ವಿದೇಶಾಂಗ ನೀತಿಗೆ ಹಾಗೂ ಭಾರತದ ಸ್ಥಾನ-ಮಾನಕ್ಕೆ ಒಂದು ನಿಜವಾದ ಬೆದರಿಕೆ ಬಂದಿದೆ.

ಇಂತಹ ಕಠಿಣ ಪರಿಸ್ಥಿತಿಯನ್ನು ಎಡ, ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಈಗ ಎದುರಿಸುತ್ತಿವೆ. ಕಾಂಗ್ರೆಸ್ ಪ್ರಧಾನ ವಿರೋಧ ಪಕ್ಷದ ತನ್ನ ಪಾತ್ರವನ್ನು ಕೈಬಿಟ್ಟು ಸರಕಾರದ ನೀತಿಗಳನ್ನು ಪ್ರತಿಧ್ವನಿಸುವುದರಲ್ಲೇ ಮಗ್ನವಾಗಿರುವಾಗ ಈ ಕ್ರಮಗಳ ವಿರುದ್ಧ ವಿಶಾಲ ತಳಹದಿಯ ಹೋರಾಟಗಳನ್ನು ಬಲಪಡಿಸುವ ಅಗತ್ಯವಿದೆ. **ಐ.ಆರ್.ಡಿ.ಎ. ಮಸೂದೆಗೆ ವ್ಯಕ್ತಗೊಂಡ ಬಲವಾದ ವಿರೋಧ ಆರ್ಥಿಕ ನೀತಿಗಳನ್ನು ಕುರಿತಂತೆ ಮುಂದಿನ ಹೋರಾಟಗಳಿಗೆ, ಚಳುವಳಿಗೆ ತಳಹದಿ ಹಾಕಿದೆ. ಯಾರು ತಮ್ಮ ಪರವಾಗಿದ್ದಾರೆ, ಯಾರು ವಿರೋಧವಾಗಿದ್ದಾರೆ ಎಂದು ಜನ ಕಣ್ಣಾರೆ ಕಾಣಲಿದ್ದಾರೆ. ಇದೇ ಸದ್ಯ ಭವಿಷ್ಯದಲ್ಲಿ ಒಂದು ಮೂರನೇ ಪರ್ಯಾಯ ಮತ್ತೆ ಮೂಡಿಬರಲು ಹಾದಿ ಮಾಡಿಕೊಡಲಿದೆ.**

ಮಹಿಳಾ ಮೀಸಲಾತಿ ಮಸೂದೆ

ಮತ್ತೊಮ್ಮೆ ವಾಜಪೇಯಿ ಸರಕಾರದ ಸೋಗಲಾಡಿತನದ ಪ್ರದರ್ಶನ

ಮಹಿಳಾ ಮೀಸಲಾತಿ ಮಸೂದೆಯನ್ನು ಈ ಸಂಸತ್ ಅಧಿವೇಶನದಲ್ಲೂ ಚರ್ಚೆಗೆ ತಗೊಳ್ಳುವ ಸಂಭವ ಕಾಣಿಸುತ್ತಿಲ್ಲ. ಲೋಕಸಭೆಯ ಕಲಾಪಗಳ ಪಟ್ಟಿಯಲ್ಲಿ ಈ ಮಸೂದೆಯ ಪ್ರಸ್ತಾಪವಿಲ್ಲ. ಇದನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಬಲವಾಗಿ ಪ್ರತಿಭಟಿಸಿದೆ. ತನ್ನ ಸರಕಾರ ಈ ವಿಷಯದಲ್ಲಿ 'ಒಮ್ಮತ' ಕ್ಕೆ ಪ್ರಯತ್ನಿಸುತ್ತಿದೆ ಎಂದು ಪ್ರಧಾನಮಂತ್ರಿಗಳು ಹೇಳಿದ್ದಾರೆ. ಇದು ಬರೇ ಸೋಗಲಾಡಿತನ ಎಂದು ಎ.ಐ.ಡಿ.ಡಬ್ಲ್ಯು.ಎ. [illegible] ಖಂಡಿಸಿದೆ. ನಿಜವಾಗಿಯೂ ಈ ಸರಕಾರಕ್ಕೆ 'ಒಮ್ಮತ'ದ ಬಗ್ಗೆ ಅಷ್ಟೊಂದು ಗೌರವವಿದ್ದರೆ ಒಂದೂವರೆ ಕೋಟಿ ಜನ ವಿಮಾ ಖಾಸಗೀಕರಣದ ವಿರುದ್ಧ ಸಹಿ ಮಾಡಿದ ಅರ್ಜಿ ಲೋಕಸಭೆಯ ಮುಂದಿರುವಾಗ ವಿಮಾ ಮಸೂದೆಯನ್ನೇಕೆ ಮಂಡಿಸಿತು? ಏಕೆ ಈ ಇಬ್ಬಂದಿತನ ಎಂದು ಎ.ಐ.ಡಿ.ಡಬ್ಲ್ಯು.ಎ ಖಾರವಾಗಿ ಪ್ರಶ್ನಿಸಿದೆ. ಇಂತಹ ನಿಲುವು ಪ್ರಜಾಪ್ರಭುತ್ವ ಪ್ರಕ್ರಿಯೆಯನ್ನು ಕೂಡಾ ದುರ್ಬಲಗೊಳಿಸುತ್ತದೆ, ಏಕೆಂದರೆ ಇದರಿಂದ ಸಂಸತ್ತಿನಲ್ಲಿ ಮುಕ್ತ [illegible] ಚರ್ಚೆಯ ಬದಲು ಪರದೆಯ ಹಿಂದಿನ ಕಸರತ್ತುಗಳಿಗೆ ಹೆಚ್ಚಿನ ಪ್ರಾಮುಖ್ಯತೆ ದೊರೆಯುತ್ತದೆ ಎಂದು ಅದು ಟೀಕಿಸಿದೆ.

ಪ್ರಧಾನ ಮಂತ್ರಿಗಳಿಗೆ ತಾನು ಮಹಿಳೆಯರಿಗೆ ನೀಡಿದ ಭರವಸೆಯನ್ನು ಈಡೇರಿಸುವುದು ಮುಖ್ಯವಾಗಿಲ್ಲ, ತನ್ನ ಸರಕಾರವನ್ನು ಉಳಿಸುವುದೇ ಮುಖ್ಯವಾಗಿದೆ ಎಂಬುದು ಇದರಿಂದ ಸ್ಪಷ್ಟ. ಏಕೆಂದರೆ ಈ ಮಸೂದೆಯನ್ನು ವಿರೋಧಿಸಿದ ಕನಿಷ್ಟ ಇಬ್ಬರು ಅವರ ಸಂಪುಟದಲ್ಲಿದ್ದಾರೆ. [illegible]

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ವಿಮಾ ಮಸೂದೆಯನ್ನು ವಿರೋಧಿಸಿದ ಅರ್ಜಿಗೆ ಇಬ್ಬರು ಮಂತ್ರಿಗಳು, ಐವತ್ತಕ್ಕೂ ಹೆಚ್ಚು ಎನ್.ಡಿ.ಎ. ಸಂಸತ್ ಸದಸ್ಯರು ಸಹಿ ಹಾಕಿದ್ದರೂ ಅದನ್ನು ಗಮನಕ್ಕೆ ತಗೊಳ್ಳದೆ ವ್ಹಿಪ್ ಹೊರಡಿಸಿ, ಪಾಸು ಮಾಡಿಕೊಂಡ ಸರಕಾರಕ್ಕೆ ಮಹಿಳಾ ಮೀಸಲಾತಿ ಮಸೂದೆಯ ವಿಷಯದಲ್ಲಿ ಮಾತ್ರ ಚರ್ಚೆಯ 'ಒಮ್ಮತ'ದ ಅವಶ್ಯಕತೆ ಕಂಡಿದೆ. ಈ ಸೋಗಲಾಡಿತನವನ್ನು ಮಹಿಳಾ ಸಂಘಟನೆಗಳು ಬಲವಾಗಿ ಖಂಡಿಸಿವೆ.

ಸಂಸತ್ತಿನಲ್ಲಿ ಮಹಿಳಾ ಮೀಸಲಾತಿ ಮಸೂದೆಯ ಬೆಂಬಲಿಗರು ದೇಶದ ಬಹುಪಾಲು ಮಹಿಳೆಯರ ಆತಂಕವನ್ನು ಬಿಂಬಿಸಬೇಕು, ಈ ಅಧಿವೇಶನದಲ್ಲಿ ಅದನ್ನು ಚರ್ಚೆಗೆ ಇಡುವ ಕೆಲಸವಾದರೂ ನಡೆಯುವಂತಾಗಬೇಕು ಎಂದು ಎಐಡಿಡಬ್ಲ್ಯುಎ ಮನವಿ ಮಾಡಿದೆ.

[illegible]



ಕಳೆದವಾರ ಸಂಸತ್ತಿನಲ್ಲಿ ಮತ್ತು ಹೊರಗೆ ಇಡೀ ದೇಶದ ಗಮನ ಸೆಳೆದ ವಿಷಯವೆಂದರೆ 'ವಿಮಾ ನಿಯಂತ್ರ... ಐ.ಆರ್.ಡಿ.ಎ ಬಿಲ್. ಈ ವಿಷಯದ ಬಗ್ಗೆ ಒಂದೂವರೆ ಕೋಟಿ ಭಾರತೀಯರ ಸಹಿಗಳಿದ್ದ ಒಂದು ಅರ್ಜಿ ... ಮಸೂದೆಯನ್ನು ಮಂಡಿಸಲು ಸರಕಾರದ ಆತುರ, ಎಡಪಕ್ಷಗಳೂ ಸೇರಿದಂತೆ ಏಳು ರಾಜಕೀಯ ಪಕ್ಷಗಳ ... ಸಂಸತ್ತಿನ ಒಳಗಿನ ದೃಶ್ಯವಾಗಿದ್ದರೆ ನವೆಂಬರ್ ೨೯ ರಂದು ಸಂಸತ್ತಿನ ಹೊರಗೆ ಹದಿನೈದು ಸಾವಿರಕ್ಕೂ ಹೆಚ್ಚು ಸ... ಸಭೆಗಳು, ಜನಗಳ ಗಮನ ಸೆಳೆದವು. ಡಿಸೆಂಬರ್ ೧ ರಂದು ದೇಶಾದ್ಯಂತ ೨ ಲಕ್ಷ ವಿಮಾ ನೌಕರರ, ಅವರ ... ದೇಶದ ಇಡೀ ಕಾರ್ಮಿಕ ವರ್ಗ ಬೆಂಬಲ. ಈ ಪ್ರತಿಭಟನೆಗಳಲ್ಲಿ ವಿಮಾ ನೌಕರರ ಹಾಗೂ ದೇಶದ ಪ್ರಮುಖ ... ಕಾರಣ, ಉದ್ದೇಶ ಹಾಗೂ ಈಗಿನ ಸಂದರ್ಭದಲ್ಲಿ ಇದರ ರಾಷ್ಟ್ರೀಯ ಮಹತ್ವವನ್ನು ಮತ್ತೆ ಜನರ ಮುಂದಿಟ್ಟಿದ್ದಾ... ನೌಕರರ ಸಂಘಟನೆಗಳ ಮುಖಂಡರಾದ ಕೆ.ವಿ. ಶ್ರೀನಿವಾಸ್, ಅಮಾನುಲ್ಲಾ ಖಾನ್, ಹೆಚ್.ವಿ.ಅನಂತಸುಬ್ಬ... ಮಾಧ್ಯಮದ ಪ್ರಚಾರಗಳಿಗೆ ಕೊಟ್ಟ ಉತ್ತರಗಳನ್ನು ನಮ್ಮ ಓದುಗರಿಗಾಗಿ ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

ಯಾರಿಗಾಗಿ ಈ ವಿಮಾ ಪ್ರಾಧಿಕಾರ ಮಸ...

● ಈ ಮಸೂದೆ ಬಗ್ಗೆ ದೇಶಿ-ವಿದೇಶಿ ಉದ್ಯಮಿಗಳ ಒತ್ತಾಯ ಸರಕಾರದ ತರಾತುರಿ ಮತ್ತು ಕಾರ್ಮಿಕ ವರ್ಗದ ಪ್ರಬಲ ವಿರೋಧ ಏಕೆ? ಅಂತಹದ್ದೇನಿದೆ ಈ ಮಸೂದೆಯಲ್ಲಿ?

■ ಈ ಮಸೂದೆಯ ಹೆಸರಿನಲ್ಲಿ 'ನಿಯಂತ್ರಣ' ಮತ್ತು 'ಅಭಿವೃದ್ಧಿ' ಎಂಬ ಪದಗಳಿವೆ. ಆದರೆ 1991ರಿಂದೀಚೆಗೆ ಉದಾರೀಕರಣ ಖಾಸಗೀಕರಣ- ಜಾಗತೀಕರಣ ಮುಖ್ಯ ಹೂರಣವಾಗಿರುವ 'ಆರ್ಥಿಕ ಸುಧಾರಣೆ'ಗಳು ಶುರುವಾದಾಗಿನಿಂದ ರಚಿಸುತ್ತಿರುವ ವಿವಿಧ 'ನಿಯಂತ್ರಣ' ಪ್ರಾಧಿಕಾರಗಳ ಉದ್ದೇಶ ನಿಯಂತ್ರಣವಲ್ಲ, ಸಂಬಂಧಪಟ್ಟ ಉದ್ದಿಮೆಗಳಲ್ಲಿ ಸರಕಾರದ ಹೊಣೆಗಾರಿಕೆಯನ್ನು ಕಳಚಿಕೊಂಡು ಅವುಗಳನ್ನು ಖಾಸಗಿಯವರಿಗೆ ತೆಗೆದುಕೊಡಲು ಅನುಕೂಲ ಮಾಡಿಕೊಡುವುದು. ಅದೇ ಜಾಡಿನಲ್ಲಿರುವ ಮಸೂದೆಯಿದು. ಇನ್ನು 'ಅಭಿವೃದ್ಧಿ' ಯಂತೂ ಇಲ್ಲಿ ಇಲ್ಲವೇ ಇಲ್ಲ. ದೇಶದ ಆರ್ಥಿಕರಂಗದ ನಾಡಿಯಂತಿರುವ ಹಣಕಾಸು ರಂಗದ ಈ ಸೂಕ್ಷ್ಮ ವಲಯದಲ್ಲಿ ಸಾರ್ವಜನಿಕ ಉದ್ದಿಮೆಗಳಾದ ಎಲ್.ಐ.ಸಿ. ಮತ್ತು ಜಿ.ಐ.ಸಿ. ಸಾಧಿಸಿ ತೋರಿದ ಅಭೂತಪೂರ್ವ ಅಭಿವೃದ್ಧಿಯನ್ನು ನಾಶಮಾಡಲು ಹೊರಟ ಮಸೂದೆಯಿದು. ವಿದೇಶೀ ಬಂಡವಾಳದಾರರು ಮತ್ತು ಅವರ ದೇಶಿ ಹಸ್ತಕರು, ಅವರ ಸಹಯೋಗಿಗಳು, ಸಿ.ಐ.ಐ., ಫಿಕಿ ಇತ್ಯಾದಿ ಬಂಡವಾಳಿಗರ ಸಂಸ್ಥೆಗಳ ಅತೀವ ಆಸಕ್ತಿಯ ಹಿಂದಿರುವ ಕಾರಣ ಇದೇ. ಕೇವಲ ಐ.ಎಂ.ಎಫ್. ವಿಶ್ವಬ್ಯಾಂಕ್ ಧಣಿಗಳನ್ನು ತೃಪ್ತಿಪಡಿಸುವ 'ಆರ್ಥಿಕ ಸುಧಾರಣೆಗಳ ಎರಡನೇ 'ತಲೆಮಾರಿ'ನ ಮೊದಲ ಹಾಗೂ ಪ್ರಮುಖ ಕ್ರಮ ಇದು. ಉದಾರೀಕರಣ-ಖಾಸಗೀಕರಣ-ಜಾಗತೀಕರಣ ದೇಶದ, ಬಹುಪಾಲು ಜನರ ಹಿತಾಸಕ್ತಿಗಳಿಗೆ ವಿರೋಧವಾದ ಕ್ರಮಗಳು ಎಂದು ಕಾರ್ಮಿಕ ಆಂದೋಲನ ನಿರಂತರವಾಗಿ ವಿರೋಧಿಸಿಕೊಂಡು ಬಂದಿದೆ. ಕಾರ್ಮಿಕ ಆಂದೋಲನದ ಈ ಅಭಿಪ್ರಾಯ ಸರಿಯಾದ ಅಭಿಪ್ರಾಯ ಎಂದು ಈ ಎಂಟು ವರ್ಷಗಳಲ್ಲಿ ದೇಶದಲ್ಲೂ, ವಿಶ್ವಾದ್ಯಂತವೂ ಸಾಬೀತಾಗಿದೆ. ಆದ್ದರಿಂದಲೇ ವಿಮಾ ನೌಕರರು ಮಾತ್ರವಲ್ಲ ಈಗ ಇಡೀ ಕಾರ್ಮಿಕ ವರ್ಗ ಇದನ್ನು ವಿರೋಧಿಸುತ್ತಿದೆ. ಅತ್ತ ಅಮೆರಿಕದ ಸಿಯಾಟಲ್‌ನಲ್ಲಿ ವಿಶ್ವ ವ್ಯಾಪಾರ ಸಂಘಟನೆಯ ಸಭೆಗೆ ವ್ಯಕ್ತಪಡಿಸುತ್ತಿರುವ ತೀವ್ರ ವಿರೋಧ, ಅದನ್ನು ದಮನಿಸುವ ಪ್ರಯತ್ನ, ಇತ್ತ ಭಾರತದಲ್ಲಿ ಅದೇ ದಿನ ಎರಡು ಲಕ್ಷಕ್ಕೂ ಹೆಚ್ಚು ವಿಮಾ, ಬ್ಯಾಂಕ್ ನೌಕರರ ಮುಷ್ಕರ, ಅದಕ್ಕೆ ಇಡೀ ಕಾರ್ಮಿಕ ವರ್ಗದ ಬೆಂಬಲ - ಇವು ಅರ್ಥಪೂರ್ಣವಾದ ಬೆಳವಣಿಗೆಗಳು. ಸರಕಾರದ, ಅದರ ಬೆಂಬಲಿಗರ ಅಪಪ್ರಚಾರವನ್ನು ಬಯಲಿಗೆಳೆಯುವ ಬೆಳವಣಿಗೆಗಳು.

● ಖಾಸಗೀಕರಣವೆಂದರೆ ಸ್ಪರ್ಧೆಯನ್ನು ಎದುರಿಸಲು ದಕ್ಷತೆಯನ್ನು ಹೆಚ್ಚಿಸಿಕೊಳ್ಳುವುದು, ಅದಕ್ಕಾಗಿ ಶಿಸ್ತು ನಿಯಮಗಳ ಪಾಲನೆ ಮಾಡಬೇಕು, ನೌಕರರಿಗೆ ಇದು ಅಪಥ್ಯ, ಆದ್ದರಿಂದಲೇ ಈ ಪ್ರತಿಭಟನೆ ಎಂದು ಈ ಮಸೂದೆಯ ಪರವಾಗಿರುವವರು, ಪತ್ರಿಕಾ ಸಂಪಾದಕೀಯಗಳು ಹೇಳುತ್ತಿವೆ. ಇದು ಎಷ್ಟು ನಿಜ ಅಥವಾ ಸುಳ್ಳು?

■ 'ಆರ್ಥಿಕ ಸುಧಾರಣೆ' ದೇಶಕ್ಕೆ ಒಳ್ಳೆಯದು ಎಂದು ವಾದಿಸುವವರು ಹೀಗೆ ಹೇಳುತ್ತಾರೆ. ಆದರೆ ಈ 'ಸುಧಾರಣೆ'ಗಳು ದೇಶದ ಬಹುಪಾಲು ಜನಗಳಿಗೆ ಕೊಟ್ಟಿದ್ದೇನು? ಕಾರ್ಮಿಕರಿಗೆ ರಿಟ್ರೆಂಚ್‌ಮೆಂಟ್ ವಿ.ಆರ್.ಎಸ್, ರೈತರಿಗೆ ಆತ್ಮಹತ್ಯೆ, ಎಲ್ಲಾ ಜನಸಾಮಾನ್ಯರಿಗೆ ನಿರಂತರ ಬೆಲೆಯೇರಿಕೆ ಮತ್ತು ಇತರ 'ಕಠಿಣ' ಕ್ರಮಗಳು. ಇವೇ ತಾನೇ? ಮಾನವ ಅಭಿವೃದ್ಧಿ ವರದಿ'ಗಳು ಮಾತ್ರವಲ್ಲ, ನಮ್ಮ ದೇಶದಲ್ಲಿ ಈ 'ಸುಧಾರಣೆಯ ಹರಿಕಾರನೆನಿಸಿದ, ಈಗ ಮೂಲೆಗುಂಪಾಗಿರುವ ನರಸಿಂಹರಾಯರಿಗೂ ಈ 'ಸುಧಾರಣೆ'ಗಳ ಬಗ್ಗೆ ಸಂದೇಹ ಮೂಡಿರುವಾಗ, ಸಿಯೆಟಲ್‌ನಲ್ಲಿ ಎಮರ್ಜೆನ್ಸಿ ಪರಿಸ್ಥಿತಿ ಇಡೀ ವಿಶ್ವದ ಗಮನ ಸೆಳೆಯುತ್ತಿರುವಾಗ ಇಂತಹ ಸಂಪಾದಕೀಯಗಳನ್ನು ಬರೆಯುವವರು ಯಾರ ಹಸ್ತಕರು ಎಂದು ಸ್ಪಷ್ಟವಾಗುವುದಿಲ್ಲವೇ? ಪ್ರಜಾವಾಣಿಯ ಸಂಪಾದಕೀಯ ಇನ್ನೂ ಮುಂದುವರಿದು ವಿಮಾ ಕ್ಷೇತ್ರದಲ್ಲಿ ರಾಷ್ಟ್ರೀಕರಣಕ್ಕೆ ಮುನ್ನ ಇದ್ದ ದಕ್ಷತೆ, ಸೇವಾಮನೋಭಾವ ಈಗಿಲ್ಲ ಎಂಬುದು ಸಾರ್ವಜನಿಕಾಭಿಪ್ರಾಯ" ಎಂದಿದೆ. ಇದು ಸಾರ್ವಜನಿಕಾಭಿಪ್ರಾಯ ಅಲ್ಲ, ಬಂಡವಾಳಶಾಹಿ ಧಣಿಗಳ ಅಭಿಪ್ರಾಯ ಎಂಬುದನ್ನು ಐದು ವರ್ಷಗಳ ಕೆಳಗೆ ಸರಕಾರಕ್ಕೆ ತನ್ನ ವರದಿ ಸಲ್ಲಿಸಿದ ಮಲ್ಹೋತ್ರ ಸಮಿತಿಯೇ ಹೇಳಿದೆ. ವಿಮಾ ಉದ್ದಿಮೆಯನ್ನು ಖಾಸಗೀಕರಿಸಬೇಕು ಎಂದು ಹೇಳುವ ಈ ವರದಿ ಕೂಡಾ 64% ಪಾಲಿಸಿದಾರರು ಎಲ್.ಐ.ಸಿ./ ಜಿ.ಐ.ಸಿ. ನೀಡುವ ಸೇವೆ ಬಹಳ ಚೆನ್ನಾಗಿದೆಯೆಂದು ಹೇಳಿರುವುದಾಗಿ ಉಲ್ಲೇಖಿಸಿದೆ. ಇನ್ನು ರಾಷ್ಟ್ರೀಕರಣದ ಮೊದಲು ಇದ್ದ 'ದಕ್ಷತೆ' ಏನು ಎಂಬುದಕ್ಕೆ 1956 ರಲ್ಲಿ ವಿಮೆಯ ರಾಷ್ಟ್ರೀಕರಣದ ಸಂದರ್ಭದಲ್ಲಿ ಆಗಿನ ಹಣಕಾಸು ಮಂತ್ರಿ ಡಾ. ಸಿ.ಡಿ. ದೇಶಮುಖ್ ಏನು ಹೇಳಿದ್ದರು ಎಂಬುದನ್ನು ನೆನಪಿಸಿಕೊಳ್ಳೋಣ - "..... *ಕಳೆದ ಒಂದು ದಶಕದಲ್ಲೇ (ಅಂದರೆ 1945-55 ರ ದಶಕದಲ್ಲಿ) ಸುಮಾರು 25 ವಿಮಾ ಕಂಪನಿಗಳು ದಿವಾಳಿಯಾದವು. ಇನ್ನೂ 25 ಕಂಪನಿಗಳು ತಮ್ಮ ಸಂಪನ್ಮೂಲಗಳ ದುಂದುವೆಚ್ಚ ಮಾಡಿ ಬೇರೆ ಕಂಪನಿಗಳೊಂದಿಗೆ ಅವನ್ನು ವಿಲೀನ ಗೊಳಿಸಬೇಕಾಯಿತು. ನಷ್ಟವಾದದ್ದು ಪಾಲಿಸಿದಾರರಿಗೆ ಮಾತ್ರ*"

ಆಗ ಲೋಕಸಭೆಯಲ್ಲಿ ನಡೆದ ಚರ್ಚೆಯಲ್ಲಿ ರಾಷ್ಟ್ರೀಕರಣವನ್ನು ಬೆಂಬಲಿಸಿ ಮಾತನಾಡುತ್ತಾ ರಾಯ್‌ಬರೇಲಿಯಿಂದ ಆರಿಸಿ ಬಂದ ಕಾಂಗ್ರೆಸ್ ಎಂ.ಪಿ. ಫಿರೋಜ್ ಗಾಂಧಿಯವರು (ನೆಹರೂರವರ ಅಳಿಯ, ಇಂದಿರಾಗಾಂಧಿಯವರ ಪತಿ) 'ಕೌಟಿಲ್ಯ ತನ್ನ ಅರ್ಥಶಾಸ್ತ್ರದಲ್ಲಿ ಹಣ ನುಂಗಿಹಾಕುವ 42 ವಿಧಾನಗಳನ್ನು ವರ್ಣಿಸಿದ್ದಾನೆ" ಎಂದಾಗ ಆಗಿನ ಹಣಕಾಸು ಮಂತ್ರಿಗಳು 'ಅದೀಗ ಕೋಟಿಗಟ್ಟಲೆ ಆಗಿದೆ' ಎಂದು ಸೇರಿಸಿದರಂತೆ.

ಇತ್ತೀಚೆಗೆ ಮ್ಯಾಗಜಿನ್ ಒಂದರಲ್ಲಿ ಆಸ್ತಿ ನಿರ್ವಹಣ ತಜ್ಞರೆಂದನಿಸಿಕೊಂಡವರು ಒಬ್ಬರು ಬರೆದ ಲೇಖನ ಇವರ ಕಣ್ಣು ತೆರೆಸುತ್ತದೋ ಗೊತ್ತಿಲ್ಲ. ಅಮೆರಿಕಾದಲ್ಲಿ ಒಬ್ಬ ನೌಕರ ತನ್ನ ಪಿ.ಎಫ್. ಹಣವನ್ನು ತನಗೆ ಸರಿ ಕಂಡಲ್ಲಿ ಹೂಡಬಹುದಂತೆ. ಈತ ಅಮೆರಿಕಾದಲ್ಲಿದ್ದಾಗ ತನ್ನ ಪಿ.ಎಫ್. ಹಣವನ್ನು ಭಾರಿ ಪ್ರತಿಫಲ ನೀಡುವ ಮ್ಯೂಚುವಲ್ ಫಂಡ್ ಇತ್ಯಾದಿಗಳಲ್ಲಿ ತೊಡಗಿಸದೆ ಸುರಕ್ಷಿತ ಹೂಡಿಕೆ ಎಂದೆನಿಸಿದ ವಿಮಾ ಕಂಪನಿಯೊಂದರಲ್ಲಿ ತೊಡಗಿಸಿದರಂತೆ. ಆ ಕಂಪನಿ ಮುಳುಗಿತು. ಆತನ ಉಳಿತಾಯವೂ ಮುಳುಗಿತು. ಭಾರತದಲ್ಲಿ ಎಲ್.ಐ.ಸಿ./ಜಿ.ಐ.ಸಿ. ಒದಗಿಸಿರುವ ಭದ್ರತೆಯಲ್ಲಿ ಬೆಳೆದ ತನಗೆ ಇದು ಆಘಾತಕಾರಿ ಅನುಭವವಾಗಿತ್ತು ಎಂದಿದ್ದಾರೆ ಈತ. ಆದ್ದರಿಂದ 'ಪ್ರಜಾವಾಣಿ'ಯ...



ಒಂದೂವರೆ ಕೋಟಿ ಸಹಿಗಳನ್ನು ಹೊತ್ತ ವ್ಯಾನಿನ ಹಿಂದೆ ಅಖಿಲ ಭಾರತ ವಿಮಾ ನೌಕರರ ಸಂಘದ ಸದಸ್ಯರ ಮೆರವಣಿಗೆ - ಸಂಸತ್ತಿನತ್ತ.

ವಿಮಾ ನೌಕರರು ಮತ್ತು ಖಾಸಗೀಕರಣ - ವಿರೋಧಿ ಹೋರಾಟ

ಹಣಕಾಸುಮಂತ್ರಿ ಯಶವಂತ ಸಿನ್ಹಾ ಇತ್ತೀಚೆಗೆ ಅಮೆರಿಕಾಕ್ಕೆ ಹೋದಾಗ 'ವಿಮಾ ನೌಕರರ ಸಂಘಗಳನ್ನು ನೋಡಿಕೊಂಡಿದ್ದೇನೆ. ಆದ್ದರಿಂದ 13ನೇ ಲೋಕಸಭೆ ಆರಂಭವಾದ ಮೂರೇ ದಿನಗಳಲ್ಲಿ ಐ.ಆರ್.ಎ. ಮಸೂದೆ ತರುತ್ತೇನೆ" ಎಂದು ಭರವಸೆ ನೀಡಿದ್ದರಂತೆ. ಆ ಭರವಸೆಯನ್ನು ಮೂರು ದಿನಗಳಲ್ಲದಿದ್ದರೂ ಈಡೇರಿಸಿದ್ದೇನೆ ಎಂದು ಹೆಮ್ಮೆಪಟ್ಟುಕೊಳ್ಳುವ ಸ್ಥಿತಿಯಲ್ಲಿ ಅವರೀಗ ಇಲ್ಲ. ಏಕೆಂದರೆ ತಾನು 'ನೋಡಿಕೊಂಡಿದ್ದೇನೆ' ಎಂದ ವಿಮಾ ನೌಕರರ ಸಂಘಗಳು ಅವರು ಮಸೂದೆ ಮಂಡಿಸುವ ದಿನ ಅದೇ ಸಂಸತ್ತಿನ ಹೊರಗೆ ಭಾರಿ ಪ್ರತಿಭಟನೆ ಸಂಘಟಿಸಿದ್ದವು, ದೇಶಾದ್ಯಂತ ಪ್ರತಿಭಟನೆ ಸಂಘಟಿಸಿದ್ದವು. ಮಸೂದೆಯನ್ನು ಚರ್ಚೆಗೆತ್ತಿಕೊಂಡ ದಿನ. ಎರಡು ಲಕ್ಷ ವಿಮಾ ನೌಕರರೊಂದಿಗೆ, ಒಂದೂವರೆ ಲಕ್ಷ ಬ್ಯಾಂಕ್ ನೌಕರರೂ ಸೇರಿಕೊಂಡರು. ಈಗ ಇಡೀ ದೇಶದ ಕಾರ್ಮಿಕ ವರ್ಗದ, ದುಡಿಯುವ ಜನಸಮೂಹಗಳ ಹೋರಾಟವಾಗಿ ಇದನ್ನು ವಿಸ್ತಾರಗೊಳಿಸುವ ಭಯ ಯಶವಂತ ಸಿನ್ಹಾರನ್ನು ಆವರಿಸಿಕೊಂಡಿದೆ. ಲೋಕಸಭೆಯಲ್ಲಿ ಚರ್ಚೆಗೆ ಉತ್ತರಿಸುತ್ತಾ ಅವರು ಮಾತನಾಡಿದ ರೀತಿ, 'ನಾನೇನು ಕ್ರಿಮಿನಲ್ ಕೃತ್ಯ ಮಾಡಿದ್ದೇನೆಯೇ?' ಎಂಬ ಅವರ ಆತಂಕದಲ್ಲಿ ಇವು ವ್ಯಕ್ತಗೊಂಡಿವೆ.

ವಿಮಾ ನೌಕರರ ಈ ಹೋರಾಟ ನಿಜಕ್ಕೂ ಐತಿಹಾಸಿಕ. ಹತ್ತು ವರ್ಷಗಳಿಂದ ನಿರಂತರವಾಗಿ ನಡೆಸಿಕೊಂಡು ಬಂದ ಹೋರಾಟವಿದು. 1989 ರಲ್ಲಿ ಭಾರತದ ವಿಮಾ ಉದ್ದಿಮೆಯನ್ನು ತೆರೆಯದಿದ್ದರೆ ತನ್ನ ಸೂಪರ್ 301 ಕಾನೂನನ್ನು ಭಾರತದ ವಿರುದ್ಧ ಬಳಸುವುದಾಗಿ ಬೆದರಿಸಿದಾಗ ಈ ನವವಸಾಹತುಶಾಹೀ ಬೆದರಿಕೆಯ ವಿರುದ್ಧ ಪ್ರತಿಭಟನೆಯೊಂದಿಗೆ ಈ ಹೋರಾಟ ಆರಂಭವಾಯಿತು. ಆಗಸ್ಟ್ 23, 1990 ರಂದು ವಿಮಾ ನೌಕರರ ಸಂಘಟನೆ ಎಐಐಇಎ ಇತರ ಕಾರ್ಮಿಕ ಸಂಘಗಳ ಜೊತೆಗೂಡಿ ನಡೆಸಿದ ರಾಷ್ಟ್ರೀಯ ಸಮಾವೇಶ ಈ ವಿಷಯದ ಮೇಲೆ ರಾಷ್ಟ್ರೀಯ ಚರ್ಚೆಗೆ ಚಾಲನೆ ಕೊಟ್ಟಿತು. ಈ ಸಮಾವೇಶದಲ್ಲಿ ಭಾಗವಹಿಸಿದ್ದ ವಿಮಾ ಉದ್ದಿಮೆಯನ್ನು ತೆರೆಯಲೇ ಬಾರದು ಎಂದು ಹೇಳಿದ್ದ ಆಗ ಬಿಜೆಪಿಯಲ್ಲಿರದ ಯಶವಂತ ಸಿನ್ಹಾರನ್ನು ಅಮೆರಿಕನ್ ಸಾಮ್ರಾಜ್ಯಶಾಹಿಗಳು ಬಹುಶಃ ನಂತರ 'ನೋಡಿಕೊಂಡರು'. ಆದರೆ ವಿಮಾ ನೌಕರರ ಹೋರಾಟ ಹಂತ-ಹಂತದಲ್ಲೂ ಶಕ್ತಿಗೂಡಿಸಿ ಕೊಂಡು ಬೆಳೆಯಿತು.

ಐಎಂಎಫ್ ಪ್ರೇರಿತ ಉದಾರೀಕರಣದ ನರಸಿಂಹರಾವ್ ಸರಕಾರ ಅದರ ಬಯಕೆಯಂತೆ ವಿಮಾ ಉದ್ದಿಮೆಯಲ್ಲಿ 'ಸುಧಾರಣೆ' ತರಲು ಜನವರಿ 1994 ರಲ್ಲಿ ಮಲ್ಹೋತ್ರ ಸಮಿತಿಯನ್ನು ನೇಮಿಸಿತು. ಅದರೊಂದಿಗೆ ಖಾಸಗೀಕರಣದ ವಿರುದ್ಧ ವಿಮಾ ನೌಕರರ ಪ್ರಚಾರವೂ ತೀವ್ರಗೊಂಡಿತು. ನಿರೀಕ್ಷಿಸಿದಂತೆ ಮಲ್ಹೋತ್ರ ಸಮಿತಿ ವಿಮಾ ಖಾಸಗೀಕರಣದ ಶಿಫಾರಸುಗಳನ್ನೇ ಮುಂದಿಟ್ಟಿತು. ಇದರ ವಿರುದ್ಧ ದೇಶಾದ್ಯಂತ 65 ಲಕ್ಷ ಸಹಿ ಸಂಗ್ರಹ ಚಳುವಳಿ ನಡೆಯಿತು. ಒಂದು ಸಾವಿರ ಸಮಾವೇಶಗಳು, ವಿಚಾರಸಂಕಿರಣಗಳು, ಸಭೆಗಳು, ಬೀದಿ ನಾಟಕಗಳು, 10 ಸಾವಿರ ಪಾಲಿಸಿದಾರರಿಂದ ಪತ್ರ, ಧರಣಿ, ಮುಷ್ಕರದ ಇತ್ಯಾದಿ ಕಾರ್ಯಕ್ರಮಗಳಿಂದಾಗಿ ನರಸಿಂಹರಾವ್ ಸರಕಾರ ಅಷ್ಟೇ ಆತುರದಿಂದ ಈ ಶಿಫಾರಸುಗಳನ್ನು ಜಾರಿ ಮಾಡುವುದು ಸಾಧ್ಯವಾಗಲಿಲ್ಲ. ಒಂದು ತಾತ್ಕಾಲಿಕ ವಿಮಾ ನಿಯಂತ್ರಣ ಪ್ರಾಧಿಕಾರ ರಚಿಸಿ, ಚುನಾವಣೆಗಳ ನಂತರ ನೋಡೋಣ ಎಂದು ಮುಂದೂಡಬೇಕಾಯಿತು.

ಭಾರತದ ಜನತೆ ಇಂತಹ ನೀತಿಗಳಿಂದಾಗಿ ನರಸಿಂಹರಾವ್ ಸರಕಾರಕ್ಕೆ ಸರಿಯಾದ ಪಾಠ ಕಲಿಸಿದರು. ನಂತರ 13 ದಿನಗಳ ಅಧಿಕಾರ ನಡೆಸಿದ ವಾಜಪೇಯಿ ಸರಕಾರ ವಿಶ್ವಾಸಮತ ಪಡೆಯುವ ಮೊದಲೇ ವಿಮಾ ವಲಯವನ್ನು ಮೊದಲು ದೇಶಿ ಖಾಸಗೀಯವರಿಗೆ ತೆರೆಯುತ್ತೇವೆ ಎಂದಿತು. ಆದರೆ

ಪುಟ 10 ಕ್ಕೆ

ಅಭಿವೃದ್ಧಿ ಪ್ರಾಧಿಕಾರ ಮಸೂದೆ' ಅಥವಾ ...ಎದುರಿದ್ದರೂ ಅದನ್ನು ನಿರ್ಲಕ್ಷಿಸಿ ಈ ...ಧ. ಕಾಂಗ್ರೆಸ್ ಪಕ್ಷದ ಗೊಂದಲ-ಇದು ...ಭಟನೆ, ದೇಶಾದ್ಯಂತ ಧರಣಿ, ಸಾರ್ವಜನಿಕ ... ೧.೫ ಲಕ್ಷ ಬ್ಯಾಂಕ್ ನೌಕರರ ಮುಷ್ಕರ ...ಸಂಘಗಳ ಮುಖಂಡರು ಈ ಹೋರಾಟದ ...ರ್ಭದಲ್ಲಿ ಬೆಂಗಳೂರಿನಲ್ಲಿ ವಿವಿಧ ವಿಮಾ ...ವಿ.ಬಸವರಾಜ್ ಇನ್ನಿತರರು ಸರಕಾರದ,

...ಡದೆ?

ಸಂಪಾಕೀಯ ಬರೆವವರು ಮತ್ತು ಅವರಂತವರು ತಮ್ಮ ಅಜ್ಞಾನ ಪ್ರದರ್ಶಿಸುತ್ತಿದ್ದಾರೋ ಅಥವಾ ಧಣಿಗಳ ದನಿಗಳಾಗಿದ್ದಾರೋ ಎಂಬ ಸಂದೇಹ ಎದ್ದರೆ ಅದು ಸಹಜ.

ವಿಮಾ ನೌಕರರು, ಮತ್ತು ಈಗ ಇಡೀ ಕಾರ್ಮಿಕ ವರ್ಗ ಮಾತ್ರ ಇದು ಒಂದು ದೇಶಪ್ರೇಮಿ ಹೋರಾಟ ಎಂದೇ ಬೀದಿಗಿಳಿದಿದ್ದಾರೆ. ನಿಜ, ಉದ್ಯೋಗ ಭದ್ರತೆಯ ಅಥವಾ ಹೊಸ ಉದ್ಯೋಗಾವಕಾಶಗಳ ಪ್ರಶ್ನೆಯೂ ಇದರಲ್ಲಿ ಅಡಕವಾಗಿದೆ. ಏಕೆಂದರೆ ಉದಾರೀಕರಣ ಉದಾರವಾಗಿರುವುದು, ಮಾಲಕರಿಗೆ, ಕಾರ್ಮಿಕರಿಗಲ್ಲ. ಇದು ಉದ್ಯೋಗಾವಕಾಶ ಬೆಳೆಸಲಿಕ್ಕಲ್ಲ, ಉದ್ಯೋಗರಹಿತ ಬೆಳವಣಿಗೆಗಾಗಿ ಎಂದು ಈಗ ಎಲ್ಲರೂ ಒಪ್ಪುತ್ತಿದ್ದಾರೆ.

ನೌಕರರ ಪ್ರತಿಭಟನೆಯನ್ನು ವಿರೋಧಿಸುವವರಲ್ಲಿ ಕೆಲವರು 'ನೀವು ಸದಾ ನಿಮ್ಮ ಕೆಲಸ, ಸಂಬಳದ ಬಗ್ಗೆಯೇ ಯೋಚಿಸುತ್ತೀರಿ, ಅಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡರೂ ನಿಮಗೆ ಪರಿವೆಯಿಲ್ಲ" ಎಂದು ಮೂದಲಿಸಿದರೆ ಇನ್ನು ಕೆಲವರು ತದ್ವಿರುದ್ಧವಾಗಿ 'ನಿಮಗೇಕೆ ಬೇರೆಯವರ, ದೇಶದ ಉಸಾಬರಿ,

ಪುಟ 8 ಕ್ಕೆ

ವಿಮೆ, ಬ್ಯಾಂಕ್ ಖಾಸಗೀಕರಣ ದೇಶದ ಸ್ವಾತಂತ್ರ್ಯ ಹರಣ

ಜೆ.ಎನ್.ನಾಗರಾಜ್

"ತೊಲಗು ತೊಲಗಾಚೆ ಬಿಳಿದೊಗಲ ಸುಲಿಗೆಗಾರ
ನಾವಲ್ಲ ತೊತ್ತು, ನಿಮಗಲ್ಲ ತುತ್ತು
ನಮ್ಮಾಸೆ ನುಡಿ ವಿಚಾರ
ಹೋ ಎಂಬ ವೀರಮಂತ್ರ ಮಾರ್ಮಲೆದುದಭ್ರದಲ್ಲಿ
ನೆನೆ ಆ ದಿನವ ಓ ಭಾರತ ಬಾಂಧವ
ನೆನೆ ನೆನೆಯೋ ಆ ದಿನವ

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಟ, ಅಧರ ಧೀರತೆ, ಆಶಯಗಳ ಬಗ್ಗೆ ಕನ್ನಡದ ಪ್ರಮುಖ ಕವಿಗಳಲ್ಲೊಬ್ಬರಾದ ಗೋಪಾಲಕೃಷ್ಣ ಅಡಿಗರ ಕವನದ ಸಾಲುಗಳಿವು. ಇಂದಿನ ದಿನಗಳಲ್ಲಿ ಭಾರತದ ಜನತೆಯ ಮನಸ್ಸನ್ನು ಆವರಿಸಬೇಕಾದ ವಿಚಾರಗಳಿವು.

ಇಂದು ಬ್ಯಾಂಕ್ ಮತ್ತು ವಿಮಾ ರಂಗದಲ್ಲಿ ಖಾಸಗಿ ಬಂಡವಾಳಕ್ಕೆ ಅವಕಾಶ ನೀಡುತ್ತೇವೆ, ಖಾಸಗೀಕರಣ ಮಾಡುತ್ತೇವೆ ಎಂದು ಹೇಳುತ್ತಿರುವಾಗ ಅದು ಖಾಸಗೀಕರಣವಲ್ಲ ವಿದೇಶಿಕರ್ಣ-ವಿದೇಶಿ ಬಂಡವಾಳಕ್ಕೆ ದೇಶವನ್ನು ಪ್ರವೇಶಿಸಲು ಮುಕ್ತ ಅವಕಾಶ. ಯಾರನ್ನು 90 ವರ್ಷಗಳ ಕೋಟ್ಯಾಂತರ ಜನ ದೀರ್ಘ ಹೋರಾಟದ ನಂತರ ತೊಲಗಿಸಿದೆವೋ ಅವರಿಗೆ ಮತ್ತೆ ನಮ್ಮನ್ನು ದೋಚಲು ಅವಕಾಶ. ವಿಮೆಯನ್ನು ಬ್ಯಾಂಕ್‌ಗಳನ್ನು ಖಾಸಗೀಕರಿಸುವುದೆಂದರೆ ನಮ್ಮ ದೇಶವನ್ನು ದೋಚಲು ಅವಕಾಶ ನೀಡಿದಂತಾಗುತ್ತದೆಯೇ, ಹೇಗೆ? ನಮ್ಮ ದೇಶಕ್ಕೆ ಹೊಸ ಬಂಡವಾಳ ಹರಿಸಲೆಂದೇ ಅಭಿವೃದ್ಧಿ 'ನಾಗಾಲೋಟ'ದಿಂದ ನಡೆಯಲೆಂದೇ ತೆಗೆದುಕೊಳ್ಳುತ್ತಿರುವ ಈ ಮುಖ್ಯ ಕ್ರಮದ ಬಗ್ಗೆ ನಡೆಯುತ್ತಿರುವ ಅಪಪ್ರಚಾರ ಇದು ಎಂದು ಕೆಲವರು ಸಾಧಿಸುತ್ತಿದ್ದಾರೆ. ಆದರೆ ವಾಸ್ತವ ಏನು?

ದೇಶದ ಅಭಿವೃದ್ಧಿಯಾಗುವುದು ಯಾರಿಗೆ ಬೇಡ? ಅದಕ್ಕೆಂದೇ ಬ್ರಿಟಿಷರ ವಿರುದ್ಧ ಸೆಣಸಿದ್ದು. ಆದರೆ ಬ್ರಿಟಿಶರು ಹೇಳುತ್ತಿದ್ದರು ಭಾರತ ದೇಶವನ್ನು, ಪ್ರಪಂಚದ ಇತರ ದೇಶಗಳನ್ನು ತಾವು ಆಳುವ ಮಹಾಹೊಣೆಯನ್ನು ಹೊತ್ತಿರುವುದೇ ಆ ದೇಶಗಳ ಅಭಿವೃದ್ಧಿಗಳಿಗಾಗಿ ಎಂದು. ಅನಾಗರೀಕ, ಬರ್ಬರತೆಯಲ್ಲಿ ಮುಳುಗಿಹೋಗಿದ್ದ ದೇಶಗಳಿಗೆ ನಾಗರೀಕತೆಯನ್ನು ಕುರಣಿಸಿ ಅವರನ್ನು ಉತ್ತಮ ದಾರಿಗೆ ಹಚ್ಚಲು ಎಂದು. ಈ ಸಿದ್ಧಾಂತಕ್ಕೆ ಒಂದು ಹೆಸರೂ ಇತ್ತು. 'ಬಿಳಿಯ ಮನುಶ್ಯರು ಹೊರಬೇಕಾಗಿರುವ ಹೊರೆ'(White man's burden) ಎಂದು. ಆದರೆ ಭಾರತದ 'ಅನಾಗರೀಕ' ಅಶಿಕ್ಷಿತ ಜನರು, ಶಿಕ್ಷಿತ, ನಾಗರೀಕತೆಯನ್ನು ಕಲಿತ ಭಾರತೀಯರೂ ಒಟ್ಟಾಗಿ ಈ ವಾದವನ್ನು ತಿರಸ್ಕರಿಸಿದರು. ಭಾರತ ಮಾತ್ರವಲ್ಲ, ಇಡೀ ಜಗತ್ತಿನ ಅನಾಗರಿಕ ದೇಶಗಳೆಲ್ಲವೂ ತಿರಸ್ಕರಿಸಿದವು. ಆದರೂ ಬ್ರಿಟಿಶರು ಆಳುವಾಗಲೂ ಸ್ವಾತಂತ್ರ್ಯ ಚಳುವಳಿ ಕಾಡುಕಿಚ್ಚಿನಂತೆ ಹಬ್ಬಿ ಬೆಳೆಯುತ್ತಿರುವಾಗಲೂ ಕೂಡ ಒಂದು ಅತ್ಯಂತ ನಾಗರೀಕ ವಿಭಾಗ ಕೆಲವು ಅಶಿಕ್ಷಿತ ಜನರು ಅವರ ಜೊತೆಗೆ ರಾಜ, ಸಾಮ್ರಾಟರುಗಳು ಬ್ರಿಟಿಶರು ನಮ್ಮ ದೇಶವನ್ನು ಉದ್ಧಾರ ಮಾಡಲೆಂದೆ ಬಂದಿದ್ದಾರೆ, ಉದ್ಧಾರ ಮಾಡುತ್ತಿದ್ದಾರೆ ಈ ಗಲಭೆಕೋರ ಸ್ವಾತಂತ್ರ್ಯ ಚಳುವಳಿಗಾರರು ಅವರ ಕೆಲಸಕ್ಕೆ ಅಡ್ಡಿ ಬರುತ್ತಿದ್ದಾರೆ ಎಂದು ಭಾವಿಸುತ್ತಿದ್ದರು. ಹೇಳುತ್ತಿದ್ದರು. ಬ್ರಿಟಿಶರಿಂದ 'ರಾವ್ ಬಹದ್ದೂರ್', 'ರಾಜಸೇವಾಸಕ್ತ' ಎಂಬ ಬಿರುದುಗಳನ್ನು ಪಡೆಯುತ್ತಿದ್ದರು.

ಭಾರತದ ಸ್ವಾತಂತ್ರ್ಯ ಚಳುವಳಿಯ ಈ ಸಂದರ್ಭವನ್ನ ಇಂದು ಮತ್ತೆ ನೆನಪಿಸಿಕೊಳ್ಳುವುದು ಅಗತ್ಯವಾಗಿದೆ. ಏಕೆಂದರೆ ಮತ್ತೆ ದೇಶದ 'ಅಭಿವೃದ್ಧಿ'ಯ ಹೆಸರಿನಲ್ಲಿ ಏನೆಲ್ಲಾ ನಡೆಯ ತೊಡಗಿದೆ, ಯಾವೆಲ್ಲಾ ವಾದಗಳು ಹುಟ್ಟುತ್ತಿವೆ ಎಂಬುದನ್ನು ಅರ್ಥಮಾಡಿಕೊಳ್ಳಲು ಇದು ಸಹಾಯ ಮಾಡುತ್ತಿದೆ.

ಅಂದಿನ ಹಾಗೆಯೇ ಇಂದು ಕೂಡ ದೇಶದ ಅಭಿವೃದ್ಧಿಗಾಗಿಯೇ ವಿಮೆ, ಬ್ಯಾಂಕ್‌ಗಳ ಖಾಸಗೀಕರಣ ಎನ್ನುವ ವಾದ, ದೇಶದ ಅಭಿವೃದ್ಧಿಗೆ ಸ್ವಾತಂತ್ರ್ಯಕ್ಕೆ, ಸ್ವಾವಲಂಬನೆಗೆ ಈ ಖಾಸಗೀಕರಣ ಮಾರಕ ಎನ್ನುವ ವಾದಗಳನ್ನು ಪರಿಶೀಲಿಸೋಣ. ನಮ್ಮ ಸ್ವಾತಂತ್ರ್ಯ ಚಳುವಳಿಯ ಅರ್ಥವೇನು? ನಮ್ಮನ್ನು ನಾವೇ ಆಳಿಕೊಳ್ಳುತ್ತೇವೆ, ನಮ್ಮ ದೇಶದ ಎಲ್ಲಾ ಸಂಪನ್ಮೂಲಗಳನ್ನು ನಮ್ಮ ದೇಶದ ಅಭಿವೃದ್ಧಿಗಾಗಿಯೇ ಬಳಸುತ್ತೇವೆ ಯಾರೂ ಅದನ್ನು ಕೊಳ್ಳೆ ಹೊಡೆಯಲು ಬಿಡುವುದಿಲ್ಲ ಎನ್ನುವುದು ನಮ್ಮ ಸ್ವಾತಂತ್ರ್ಯದ ಪ್ರಧಾನ ಗುರಿಯಾಗಿತ್ತು.

ಭಾರತದ ಅಭಿವೃದ್ಧಿಗೆ ಭಾರತದ ಎಲ್ಲಾ ಸಂಪನ್ಮೂಲಗಳು ಎನ್ನುವ ಗುರಿಯ ಮೇಲೆ ಇಂದು ಇಷ್ಟೆಲ್ಲಾ ದಿಕ್ಕಿನಿಂದ ಧಾಳಿಯಾಗುತ್ತಿದೆ. ಭಾರತದ ಹಲವು ರೀತಿಯ ಸಂಪನ್ಮೂಲಗಳನ್ನು ಹೇಗೆ ಸೂರೆಗೆ ತೆರೆದಿಡಲಾಗಿದೆ ಎಂಬುದನ್ನು 'ಐಕ್ಯರಂಗ' ಪತ್ರಿಕೆ ನಿರಂತರವಾಗಿ ಪ್ರಕಟಿಸುತ್ತಲೇ ಇದೆ. ಇನ್ನೂ ಹಲವು ಮುಖಗಳನ್ನು ಮುಂದೆ ತೆರೆದಿಡಲಿದೆ. ಇಂದು ಅತ್ಯಂತ ತೀವ್ರದಾಳಿಗೆ ಒಳಗಾಗಿರುವುದು ಭಾರತದ ಹಣ ಸಂಪನ್ಮೂಲಗಳು. ಹಣವೇ, ಬಂಡವಾಳವೇ ದೇಶದ ಅಭಿವೃದ್ಧಿಯ ಜೀವನಾಡಿಯಾದುದರಿಂದ ಹಣ ಸಂಪನ್ಮೂಲಗಳ ದೋಚುವ ಕ್ರಿಯೆ, ಅದಕ್ಕಾಗಿ ವಿಮೆ ಹಾಗೂ ಬ್ಯಾಂಕ್ ರಂಗದ ಖಾಸಗೀಕರಣ ಇಂದು ವಿಶ್ವದ ಎಲ್ಲಾ ಬಂಡವಾಳಶಾಹಿಗಳ ಗುರಿಯಾಗಿದೆ. ಆದ್ದರಿಂದ ಭಾರತದಲ್ಲಿ ಹಣಸಂಪನ್ಮೂಲಗಳು ಭಾರತದ ಅಭಿವೃದ್ಧಿಗಾಗಿ, ಭಾರತದ ಜನತೆಯ ಸಮಗ್ರ ಅಭಿವೃದ್ಧಿಗಾಗಿ ಎಂಬ ಸ್ವಾತಂತ್ರ್ಯದ ಆಶಯವನ್ನಷ್ಟೇ ಇಲ್ಲಿ ಪ್ರಸ್ತಾಪಿಸೋಣ.

ಭಾರತದ ಹಣಸಂಪನ್ಮೂಲಗಳು ಹಣವಂತರ ಖಾಸಗಿ ಆಸ್ತಿಯಾಗಿ ಹೂಡಲ್ಪಡಬಹುದು(ಅವರ ಬಳಿ ಈ ಹಣ ಹೇಗೆ ಶೇಖರವಾಯಿತು ಎನ್ನುವ ಪ್ರಶ್ನೆಗೆ ಇಲ್ಲಿ ಹೋಗುವುದಿಲ್ಲ) ಸಾರ್ವಜನಿಕರಿಂದಲೂ ಹಣ ಸಂಗ್ರಹ ಮಾಡಿ ಹೂಡಬಹುದು ಎನ್ನುವ ಮಿಶ್ರ ಆರ್ಥಿಕತೆಯ ಮಾರ್ಗವನ್ನು ಭಾರತ ಅನುಸರಿಸಿತು. ಹೀಗಾಗಿ ಸಾರ್ವಜನಿಕರ ಹಣ ಸಾರ್ವಜನಿಕ ಉದ್ದೇಶಗಳಿಗೆ ಎಂಬ ವಿಚಾರಕ್ಕೆ ಪ್ರಾಧಾನ್ಯತೆ ಸಿಕ್ಕಿತು. ಭಾರತದ ಜನತೆಯಿಂದ ಹಣವನ್ನು ತೆರಿಗೆ, ಕಂದಾಯಗಳ ಮೂಲಕ ಕೇಂದ್ರ ಸರ್ಕಾರ ರಾಜ್ಯಸರ್ಕಾರಗಳು ಸಂಗ್ರಹಿಸಿ ದೇಶದ ಅಭಿವೃದ್ಧಿಗೆ ವಿನಿಯೋಗವಾಯಿತು. ಸಾಮಾಜಿಕ ಅಗತ್ಯಗಳಾದ ಶಿಕ್ಷಣ, ಆರೋಗ್ಯ, ಕುಡಿಯುವ ನೀರು ಇತ್ಯಾದಿಗಳಿಗಾಗಿ ಆದ ವೆಚ್ಚ ಒಂದೆಡೆ. ರೈಲ್ವೆ, ಅಂಚೆ, ಟೆಲಿಫೋನ್ ಮುಂತಾದ ಸೇವೆಗಳಿಗಾಗಿ ಆದ ವೆಚ್ಚ ಮತ್ತೊಂದೆಡೆ, ದೇಶದ ಒಟ್ಟು ಆರ್ಥಿಕ ಅಭಿವೃದ್ಧಿಗಾಗಿ ನಿರ್ಮಾಣವಾದ ಸಾರ್ವಜನಿಕ ಉದ್ದಿಮೆಗಳ ಸ್ಥಾಪನೆಗಾಗಿ ಹೂಡಿದ ಬಂಡವಾಳ ಮತ್ತೊಂದೆಡೆ. ಇದು ಸಾರ್ವಜನಿಕರಿಂದ ವಸೂಲು ಮಾಡಲಾದ ತೆರಿಗೆಯ ಹಣ ವಿನಿಯೋಗವಾದ ರೀತಿ.

ಹಾಗೆಯೇ ಸಾರ್ವಜನಿಕರ ಹಣ ಮತ್ತೊಂದು ಮಾರ್ಗದಲ್ಲಿ ಸಂಗ್ರಹವಾಯಿತು. ಅದು ಸಾರ್ವಜನಿಕ ಉಳಿತಾಯ. ಜನರು ತಮ್ಮ ಉಳಿತಾಯವನ್ನು ತಮ್ಮ ಜೀವನ, ರಕ್ಷಣೆಗಾಗಿ ಜೀವವಿಮೆಯಲ್ಲಿ, ಆಸ್ತಿ ರಕ್ಷಣೆಗಾಗಿ ಸಾಮಾನ್ಯ ವಿಮೆಯಲ್ಲಿ ತೊಡಗಿಸಿದರು. ಬ್ಯಾಂಕುಗಳಲ್ಲಿ ಕಾದಿಟ್ಟರು. ಸಾರ್ವಜನಿಕವಾದ ಈ ಹಣವನ್ನು ಸ್ವಾತಂತ್ರ್ಯದ ನಂತರವೂ ಖಾಸಗೀ ಬ್ಯಾಂಕ್, ವಿಮಾ ಕಂಪನಿಗಳಲ್ಲಿಯೇ ಇರಲು ಬಿಡಲಾಯಿತು. ಅದರಿಂದ ಈ ಸಂಚಿಕೆಯ ಮತ್ತೊಂದು ಲೇಖನದಲ್ಲಿ ವಿವರಿಸಿದಂತೆ ವಿಮಾ ಕಂಪನಿಗಳ ಖಾಸಗಿ ಮಾಲೀಕರು ವಿಮಾ ಕಂಪನಿಗಳನ್ನು ದಿವಾಳಿಯೆಬ್ಬಿಸಿ ನೂರಾರು ಕೋಟಿ ರೂಗಳನ್ನು ಲೂಟಿ ಹೊಡೆದರು. ಹಾಗೆಯೇ ಅನೇಕ ಖಾಸಗೀ ಬ್ಯಾಂಕುಗಳೂ ದಿವಾಳಿಯಾದವು. ಸಾರ್ವಜನಿಕ ಹಣ ಖಾಸಗೀಯವರ ಸಂಪತ್ತನ್ನು ಉಡಾಯಿಸಿತು. ಇದರ ಬಗ್ಗೆ ದೇಶದಲ್ಲಿ ಹಾಹಾಕಾರವೆದ್ದಮೇಲೆ ಮೊದಲು ವಿಮಾ ಕಂಪನಿಗಳನ್ನು ರಾಷ್ಟ್ರೀಕರಿಸಲಾಯಿತು. ಮುಂದೆ ಬ್ಯಾಂಕ್‌ಗಳನ್ನೂ ರಾಷ್ಟ್ರೀಕರಿಸಲಾಯಿತು.

ಇದರಿಂದ ಸಾರ್ವಜನಿಕರ ಹಣಕ್ಕೆ ರಕ್ಷಣೆ ಸಿಕ್ಕಿದಲ್ಲಿ ಸಾರ್ವಜನಿಕ ಹಣ ಸಾರ್ವಜನಿಕ ಹಿತಾಸಕ್ತಿಗೆ ಬಳಸಲು ಅನುಕೂಲವಾಯಿತು. ಇದರಿಂದ ಸಾರ್ವಜನಿಕ ವಲಯ-ಸರ್ಕಾರದ ನೇರ ಹಿಡಿತದಲ್ಲಿರುವ ಅಭಿವೃದ್ಧಿ ಹಾಗೂ ಸಾರ್ವಜನಿಕ ಉದ್ದಿಮೆಗಳ ಬೆಳವಣಿಗೆಗೆ ಅನುಕೂಲವಾಯಿತು. ಪ್ರಸ್ತುತ ಸಾರ್ವಜನಿಕ ವಿಮಾ ಕಂಪನಿಗಳ ಹಣ ದೇಶದ ಪಂಚವಾರ್ಷಿಕ ಯೋಜನೆಗಳಲ್ಲಿ ತೊಡಗಿತು. ಸಾಮಾಜಿಕ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಬಳಸಲು ಆರಂಭಿಸಲಾಯಿತು. ಸ್ವಾತಂತ್ರ್ಯದ ಗುರಿಯನ್ನು ತಲುಪಲು, ಸಂವಿಧಾನದ ನಿರ್ದೇಶಕ ತತ್ವಗಳನ್ನು ಜಾರಿ ಮಾಡಲು ಬಳಸಲಾಯಿತು. ಹೀಗಾಗಿ ರಾಷ್ಟ್ರೀಕರಣ ದೇಶದ ಸ್ವಾತಂತ್ರ್ಯ ಚಳುವಳಿಯ ಮುಂದುವರಿಕೆಯೇ ಆಯಿತು.

ಬ್ಯಾಂಕ್, ವಿಮಾ ರಂಗಗಳ ರಾಷ್ಟ್ರೀಕರಣವಾದ ತರುವಾಯ ಈ ರಂಗಗಳಲ್ಲಿ ಉಳಿತಾಯವಾದ ಹಣ ಖಾಸಗಿ ಉದ್ದಿಮೆಗಳಲ್ಲಿ ಲಕ್ಷಾಂತರ ಕೋಟಿ ಹಣ ತೊಡಗಿದೆ. ಖಾಸಗಿ ಮಾಲೀಕರ ಸಾಮ್ರಾಜ್ಯ ಎಂದು ಕರೆದುಕೊಳ್ಳುವ ಉದ್ದಿಮೆಗಳಲ್ಲಿಯೂ ಇಂದು ಶೇ 60-80ರವರೆಗೆ ತೊಡಗಿರುವುದು ಸಾರ್ವಜನಿಕ ಹಣವೇ ಎಂಬುದನ್ನು ಮರೆಯಬಾರದು. ಖಾಸಗಿ ಮಾಲೀಕರು ಇಂದು ಕೂಡಾ ಕೈಗಾರಿಕೆಗಳ ಮೂಲಕ, ಅಥವಾ ಕೈಗಾರಿಕೆಗಳನ್ನು ಮುಚ್ಚಿ ಸಾರ್ವಜನಿಕ ಹಣವನ್ನು ದೋಚುತ್ತಿದ್ದಾರೆ. ಹೀಗೆ ಸಾರ್ವಜನಿಕ ಹಣ ಖಾಸಗಿ ಮಾಲೀಕರ ಸ್ವತ್ತಾಗಲೂ ಯಥೇಚ್ಛ ಅವಕಾಶವಿರುವುದು

ಪುಟ 10 ಕ್ಕೆ

ವಾಜಪೇಯಿಯವರ ಮುಖ(ವಾಡ) ನಗುತಲೇ ಇತ್ತು!

ಬಿಜೆಪಿ ಮತ್ತು ಕಾಂಗ್ರೆಸ್‌ನ ನಾಚಿಕೆಗೇಡಿನ ಶಾಮೀಲಿನಿಂದ 'ವಿಮಾ ನಿಯಂತ್ರಣ ಪ್ರಾಧಿಕಾರ ಮತ್ತು ಅಭಿವೃದ್ಧಿ ಮಸೂದೆ'ಗೆ ಡಿಸೆಂಬರ್ 2 ರಂದು ಲೋಕಸಭೆ ಅಂಗೀಕಾರ ನೀಡಿದೆ. ಬಿಜೆಪಿ ಮಂತ್ರಿ ಪ್ರಮೋದ್ ಮಹಾಜನ್ ಇದಕ್ಕಾಗಿ ಕಾಂಗ್ರೆಸ್‌ಗೆ ಕೃತಜ್ಞತೆ ಸಲ್ಲಿಸಿದ್ದಾರೆ. ಆದರೆ ಈ ಪ್ರಕ್ರಿಯೆಯಲ್ಲಿ ಬಿಜೆಪಿ ಮುಖಂಡರ ಸೋಗಲಾಡಿತನ ಮತ್ತು ಸಮಯಸಾಧಕತನ, ಜನಗಳು ಉಣ್ಣಿಸಿದ ಪರಾಭವದಿಂದಲೂ ಪಾಠ ಕಲಿಯಲಾರದ ಕಾಂಗ್ರೆಸ್ ಮುಖಂಡರ ಅಸಮರ್ಥತೆ ಮತ್ತು ಈ ಎರಡೂ ಪಕ್ಷಗಳೂ ದೇಶದ ಆಳುವ ವರ್ಗಗಳ ಪ್ರತಿನಿಧಿಗಳಷ್ಟೇ ಎಂಬ ಅಂಶ ಬಟ್ಟಬಯಲಾಗಿದೆ.


ಇದೇ ಬಿಜೆಪಿ ಮುಖಂಡರು 1996 ರಲ್ಲಿ ಪಿ.ಚಿದಂಬರಂ ಕೇವಲ ಆರೋಗ್ಯ ವಿಮೆ ಮತ್ತು ಪೆನ್ಶನ್ ಫಂಡ್‌ಗಳನ್ನು ಮಾತ್ರ ಖಾಸಗಿಯವರಿಗೆ ತೆರೆಯುವ ಮಸೂದೆ ತಂದಾಗ 'ಸ್ವದೇಶಿ'ಯ ಹೆಸರಲ್ಲಿ ಅದನ್ನು ವಿರೋಧಿಸಿದ್ದರು. ಅದು ಕೇವಲ ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಎಂದು ಈಗ ಸ್ಪಷ್ಟವಾಗಿದೆ. ಆಗ ಬಿಜೆಪಿಯ ಮುಖಂಡರು ಮತ್ತು ಚಿದಂಬರಂ ನಡುವೆ ಗುಪ್ತ ಒಪ್ಪಂದವಾಗಿತ್ತು, ಆದರೆ ಮುರುಳಿಮನೋಹರ ಜೋಶಿ ಮುಂತಾದ ಸ್ವದೇಶಿ ವಾಲಾಗಳಿಂದಾಗಿ ಬಿಜೆಪಿ ಮುಖಂಡ ಜಸ್ವಂತ್ ಸಿಂಗ್ ಖೇದ ವ್ಯಕ್ತಪಡಿಸಿದರು ಎಂದು ಈಗ ಬಯಲಿಗೆ ಬಂದಿದೆ.

ಆದರೆ ಈಗ ವಿದೇಶಿಯರಿಗೆ ಇಡೀ ವಿಮಾ ರಂಗದಲ್ಲಿ ನೇರವಾಗಿ 26% ದಷ್ಟು ಬಂಡವಾಳ ಹೂಡಿಕೆಗೆ, ಪರೋಕ್ಷವಾಗಿ ಅದನ್ನು ಇನ್ನಷ್ಟು ಹೆಚ್ಚಿಸಿಕೊಳ್ಳಲು ಅವಕಾಶ ನೀಡುವ ಮಸೂದೆಯನ್ನು ತಮ್ಮದೇ ಸರಕಾರ ತಂದಾಗ ಈ ಸ್ವದೇಶಿವಾಲಾಗಳು, ಜಾಗರಣ ಮಂಚ್‌ನವರು ದಿವ್ಯಮೌನ ತಾಳಿದ್ದಾರೆ. ಇಲ್ಲ, ತಿಪ್ಪರಲಾಗ ಹಾಕಿ ದೇಶಕ್ಕೆ ಇದು ಒಳ್ಳೆಯದು ಎಂದು ರಾಗ ಬದಲಿಸಿದ್ದಾರೆ. ತಮಾಷೆಯೆಂದರೆ ಈ ಮಂದಿಯೇ 'ವಿದೇಶಿ'ಯೆಂದು ಹೀಗಳೆದ ಸೋನಿಯಾಗಾಂಧಿ ಕೂಡಾ ಅದೇ ರಾಗದಲ್ಲಿ ಇದು ದೇಶಕ್ಕೆ ಒಳ್ಳೆಯದು ಎಂಬ ಕಾರಣಕ್ಕೆ ಇದಕ್ಕೆ ಬೆಂಬಲ ನೀಡಿದ್ದಾಗಿ ಹೇಳಿದ್ದಾರೆ.

ಕಾಂಗ್ರೆಸ್ ಈ ನಿರ್ಣಯ ಕೈಗೊಂಡ ದಿನವೇ ಅದರ 'ಆತ್ಮಪರೀಕ್ಷೆ'ಯ ವರದಿ ಕೂಡಾ ಬಂದಿತ್ತಂತೆ. 11ನೇ ಲೋಕಸಭೆಯಲ್ಲಿ ಬಹುತವಿಲ್ಲದಿದ್ದರೂ 5 ವರ್ಷಗಳ 'ಸ್ಥಿರ'ಸರ್ಕಾರ ನೀಡಿದ ಕಾಂಗ್ರೆಸ್ ಬಲ 12ನೇ ಲೋಕಸಭೆಯಲ್ಲಿ 140 ಸ್ಥಾನಕ್ಕಿಳಿಯಲು, 13ನೇ ಲೋಕಸಭೆಯಲ್ಲಿ 120 ಕ್ಕಿಳಿಯಲು ಕಾರಣವೇನು ಎಂಬ ವಸ್ತುನಿಷ್ಠ ಆತ್ಮಪರೀಕ್ಷಣೆ ಮಾಡುವ ಸಾಮರ್ಥ್ಯ ಬಹುಶಃ ಈಗಲೂ ಈ ಪಕ್ಷದ ಮುಖಂಡರಿಗಿಲ್ಲ. ಇದ್ದಿದ್ದರೆ ಇಂತಹ ನಿರ್ಣಯ ಕೈಗೊಳ್ಳುತ್ತಿರಲಿಲ್ಲ.

ಸೋಗಲಾಡಿತನದ ಭರಾಟೆ ಇಷ್ಟೇ ಅಲ್ಲ. ಎಲ್.ಐ.ಸಿ./ಜಿ.ಐ.ಸಿ. ಗಳನ್ನು ಖಾಸಗೀಕರಿಸುವುದಿಲ್ಲ ಎಂದು ಈಗ 'ಭರವಸೆ' ನೀಡಿರುವ ಹಣಕಾಸು ಮಂತ್ರಿ ಯಶವಂತ ಸಿನ್ಹಾರವರೇ 9 ವರ್ಷಗಳ ಹಿಂದೆ ವಿಮಾ ವಲಯವನ್ನು ತೆರೆಯದಿದ್ದರೆ ಅಮೆರಿಕಾ ಸೂಪರ್ 301 ಪ್ರಯೋಗಿಸುವುದಾಗಿ ಬೆದರಿಸಿದಾಗ ಅದನ್ನು ವಿರೋಧಿಸಿ ನಡೆದ ರಾಷ್ಟ್ರೀಯ ಸಮಾವೇಶದಲ್ಲಿ ವಿಮಾ ವಲಯವನ್ನು ತೆರೆಯಲೇ ಬಾರದು ಎಂದು ಖಡಾಖಂಡಿತವಾಗಿ ಹೇಳಿದ್ದರು. ಇಂತವರ ಮಾತಿಗೆ, ಭರವಸೆಗೆ ಜನ ಎಷ್ಟು ತಾನೇ ಬೆಲೆ ಕೊಡಲು ಸಾಧ್ಯ?

ನವೆಂಬರ್ 29 ರಂದು ಲೋಕಸಭೆಯಲ್ಲಿ ಮಸೂದೆಯನ್ನು ಮಂಡಿಸಿದಾಗ ಎಡಪಕ್ಷದ ಸದಸ್ಯರೊಬ್ಬರು 'ನೀವು ವಿರೋಧ ಪಕ್ಷದ ಮುಖಂಡರಾಗಿದ್ದಾಗ ವಿಮಾ ವಲಯದಲ್ಲಿ ವಿದೇಶಿಯರ ಪ್ರವೇಶವನ್ನು ಬಲವಾಗಿ ವಿರೋಧಿಸಿದ್ದೀರಿ. ಈಗ ಅದು



ರಾಷ್ಟ್ರೀಯ ಹಿತಾಸಕ್ತಿಗಳಿಗೆ ಹೇಗೆ ಸಹಾಯಕವಾಗುತ್ತದೆ ಎಂಬುದನ್ನು ವಿವರಿಸಬಲ್ಲಿರಾ? ವಿರೋಧಿ ಬೆಂಚುಗಳಿಂದ ಆಳುವ ಬೆಂಚುಗಳಿಗೆ ಹೋಗುವಾಗ ನಿಮ್ಮ ಮನ ಪರಿವರ್ತನೆಯಾಗುವಂತದ್ದು ನಡೆದದ್ದಾದರೂ ಏನು ಎಂದು ಹೇಳಬಲ್ಲಿರಾ?' ಎಂದು ಕೇಳಿದಾಗ ವಾಜಪೇಯಿ ಯವರು ತುಟಿಪಿಟಿಕ್ಕೆನ್ನದೆ ನಗುತ್ತಲೇ ಇದ್ದರಂತೆ. ಮೂರು ದಿನಗಳ ನಂತರ ಡಿಸೆಂಬರ್ 2 ರಂದು ಈ ಮಸೂದೆಯ ಮೇಲೆ ಮತದಾನ ಮಾಡುವಾಗ ಮೊದಲು ಮಸೂದೆಯ ವಿರುದ್ಧವಾಗಿ ಸಹಿ ಮಾಡಿದರಂತೆ. ಅಡ್ವಾಣಿ ಹೇಳಿದ ಮೇಲೆಯೇ ಮಸೂದೆಯ ಪರವಾದ ಚೀಟಿಗೆ ಸಹಿ ಹಾಕಿದರಂತೆ. ಇದು ನಾಮಮಾತ್ರ 'ವಿರೋಧ'ದ ಅಭ್ಯಾಸಬಲವೋ ಅಥವಾ ವಿದೇಶಿ ಒತ್ತಡದ ಸಂಕೇತವೋ ತಿಳಿಯದು.

ಈ ಹುಸಿನಗೆಯ ಹಿಂದೆ, ಅಲ್ಲ ಮುಖವಾಡದ ಹಿಂದೆ ನಿಜವಾಗಿ ಏನಿದೆ ಎಂದು ಈಗ ನೌಕರವರ್ಗದ, ಕಾರ್ಮಿಕ ವರ್ಗದ ಎಲ್ಲರಿಗೂ ನಿಚ್ಚಳವಾಗಿ ಕಾಣುತ್ತಿದೆ. 'ಇಲ್ಲ, ನಾವು ಯಾವುದೇ ಒತ್ತಡದಿಂದ ಈ ಕೆಲಸ ಮಾಡುತ್ತಿಲ್ಲ. ದೇಶದ ಹಿತ ದೃಷ್ಟಿಯಿಂದಲೇ ಮಾಡುತ್ತಿದ್ದೇವೆ" ಎಂಬ ಹಣಕಾಸು ಮಂತ್ರಿಗಳ ಅಪರಾಧ ಭಾವನೆಯ ಮಾತುಗಳು ಇನ್ನೇನನ್ನು ತಾನೇ ಬಿಂಬಿಸುತ್ತಿವೆ?

ಯಾರಿಗಾಗಿ ಈ ಮಸೂದೆ?

ಪುಟ 7 ರಿಂದ

ಖಾಸಗೀಯವರು ಬಂದರೆ ನಿಮ್ಮ ಸಂಬಳ ಹೆಚ್ಚುತ್ತದಲ್ಲಾ' ಎಂದೂ ಕೇಳುತ್ತಾರೆ. ಇವರೆಲ್ಲರಿಗೂ ನಾವು ಹೇಳುವುದಿಷ್ಟೆ - ರೈತರು ಆತ್ಮಹತ್ಯೆಗಿಳಿಯುವಂತೆ ಮಾಡಿದ ಆರ್ಥಿಕ ನೀತಿಗಳ ಭಾಗವಾಗಿಯೇ ಈ ಮಸೂದೆಯೂ ಬಂದಿದೆ. ನಮಗೆ ಮತ್ತು ಇಡೀ ದೇಶಕ್ಕೆ ಸಂಚಕಾರ ತಂದಿದೆ. ಆದ್ದರಿಂದಲೇ ನಾವು ಈ ಹೋರಾಟಕ್ಕಿಳಿದಿದ್ದೇವೆ. ಏಕೆಂದರೆ ಆ ರೈತರ ಹಿತಾಸಕ್ತಿ ಮತ್ತು ನಮ್ಮ ಹಿತಾಸಕ್ತಿ ಒಂದೇ.

● *ಸರಿ, ಈ ಮಸೂದೆ ಪಾಸಾದರೆ ಎಲ್.ಐ.ಸಿ./ಜಿ.ಐ.ಸಿ.ಗೆ ಏನೂ ತೊಂದರೆಯಿಲ್ಲ, ಪಾಲಿಸಿದಾರರಿಗೆ ಉತ್ತಮ ಸೇವೆ ದೊರೆಯುತ್ತದೆ, ಹೆಚ್ಚೆಚ್ಚು ಜನರಿಗೆ ವಿಮಾ ರಕ್ಷಣೆ ದೊರೆಯುತ್ತದೆ ಎಲ್ಲಕ್ಕೂ ಮಿಗಿಲಾಗಿ ನಮ್ಮ ಆರ್ಥಿಕ ಮೂಲ ರಚನೆಗಳಿಗೆ ಅಪಾರ ವಿದೇಶಿ ಬಂಡವಾಳ ಹರಿದು ಬರುತ್ತದೆ ಎಂದು ಸರಕಾರ ಹೇಳುತ್ತದಲ್ಲ?*

■ ಇವು ಐ.ಎಂ.ಎಫ್.-ವಿಶ್ವಬ್ಯಾಂಕ್, ಬಹುರಾಷ್ಟ್ರೀಯ ಕಂಪನಿಗಳ ಹಣದಾಹವನ್ನು ತಣಿಸಲು ಕಾತುರರಾಗಿರುವವರು ಜನಗಳನ್ನು ತಪ್ಪುದಾರಿಗೆಳೆಯಲು ಹೇಳುವ ಮಾತುಗಳು, ವಾಸ್ತವ ಸಂಗತಿಗಳಲ್ಲ. ಖಾಸಗಿಯವರ 'ಸೇವೆ' ಹೇಗಿರುತ್ತದೆ ಎಂಬುದಕ್ಕೆ 1956 ರಲ್ಲಿ ರಾಷ್ಟ್ರೀಕರಣದ ಮಸೂದೆಯ ಚರ್ಚೆಯ ವೇಳೆಗೆ ಆಗಿನ ಹಣಕಾಸು ಮಂತ್ರಿಗಳು, ಫಿರೋಜ್ ಗಾಂಧಿ, ಅಶೋಕ ಮೆಹ್ತಾ, ಗುರುಪಾದ ಸ್ವಾಮಿಯವರಂತಹ ಘಟಾನುಘಟಿ ಸಂಸತ್ ಸದಸ್ಯರು ಹೇಳಿದ ಮಾತುಗಳೇ ಸಾಕು. ಪಾಲಿಸಿದಾರರ ದಾವೆಗಳನ್ನು ಎಷ್ಟರಮಟ್ಟಿಗೆ ಇತ್ಯರ್ಥ ಮಾಡಲಾಗುತ್ತದೆ ಎಂಬುದೇ ವಿಮಾ ಕಂಪನಿಗಳ ದಕ್ಷತೆಯ ಸೂಚಕ. ಇದು ಈಗಲೂ ಅಮೆರಿಕಾದಲ್ಲಿ ಕೇವಲ 40%. ಭಾರತದಲ್ಲಿ ಇದು 98%. ಅಂದರೆ ಪ್ರತಿ ನೂರು ಪಾಲಿಸಿದಾರರಲ್ಲಿ 98 ಜನರ ದಾವೆಗಳನ್ನು ಇತ್ಯರ್ಥಮಾಡುವ ಎಲ್.ಐ.ಸಿ. ಯ ಬದಲು ನೂರರಲ್ಲಿ 60 ಪಾಲಿಸಿದಾರರ ಹಣವನ್ನು ನುಂಗಿಹಾಕುವ ವಿದೇಶಿ 'ದಕ್ಷತೆ' ತರಲು ಈ ಮಸೂದೆಯನ್ನು ಒಪ್ಪಿಕೊಳ್ಳಿ ಎಂದ ಹಾಗಾಯ್ತು.

ವಿಮೆಯನ್ನು ವಿಸ್ತರಿಸುವ ತರ್ಕವನ್ನು ನೋಡೋಣ. ರಾಷ್ಟ್ರೀಕರಣವಾಗುವಾಗ ವಿಮೆ ಕೇವಲ ದೊಡ್ಡ ನಗರಗಳಿಗೆ ಸೀಮಿತವಾಗಿತ್ತು. ಈಗ ಎಲ್.ಐ.ಸಿ.ಯ ವ್ಯವಹಾರಗಳಲ್ಲಿ ಅರ್ಧದಷ್ಟು ಗ್ರಾಮೀಣ ಪ್ರದೇಶದಿಂದ ಬರುತ್ತಿದೆ. ನಮ್ಮ ದೇಶದಲ್ಲಿ ವಿಮೆ ಮಾಡಬಹುದಾದ ವಯಸ್ಸಿನ ಅಂದರೆ 15 ರಿಂದ 49 ವಯೋಗುಂಪಿನ ಜನರ ಸಂಖ್ಯೆ ಸುಮಾರು 26 ಕೋಟಿ. ಇವರಲ್ಲಿ 7 ಕೋಟಿ ಮಂದಿ ವೈಯಕ್ತಿಕ ವಿಮೆಯ, ಹಾಗೂ 5 ಕೋಟಿ ಮಂದಿ ಸಾಮೂಹಿಕ ವಿಮೆಯ ವ್ಯಾಪ್ತಿಗೆ ಬಂದಿದ್ದಾರೆ. ಅಂದರೆ ಒಟ್ಟು 12 ಕೋಟಿ ಮಂದಿಗೆ ಅಥವಾ 43% ಮಂದಿಗೆ ವಿಮೆಯನ್ನು ವಿಸ್ತರಿಸಲು ಸಾಧ್ಯವಾಗಿದೆ. ಇದು ಕಮ್ಮಿ ಎಂಬುದೇನೋ ನಿಜ. ಆದರೆ ದೇಶದ ಮೂರನೇ ಒಂದು ಭಾಗ ಅಂದರೆ 30 ಕೋಟಿಗೂ ಹೆಚ್ಚು ಜನಕ್ಕೆ ಎರಡು ಹೊತ್ತು ಕೂಳಿಗೂ ಗತಿಯಿಲ್ಲ, ಕೊಳ್ಳುವ ಸಾಮರ್ಥ್ಯವೇ ಇಲ್ಲ ಎಂದು ಸರಕಾರವೇ ಒಪ್ಪಿಕೊಂಡಿರುವಾಗ ಅವರಿಗೆ ವಿಮೆಯನ್ನು ವಿಸ್ತರಿಸಬೇಕೆಂದರೆ ಹೇಗೆ ಸಾಧ್ಯ? ಇದು ನಮ್ಮ ಸರಕಾರಗಳ ವಿಫಲತೆಯೇ ಹೊರತು ಎಲ್.ಐ.ಸಿ.ಯ ವಿಫಲತೆಯಲ್ಲ. ಖಾಸಗೀಕರಣದಿಂದ ಈ ಸಮಸ್ಯೆ ಪರಿಹಾರವಾಗುವುದಿಲ್ಲ. ಏಕೆಂದರೆ ಲಾಭಕ್ಕಾಗಿಯೇ ಈ ಉದ್ಯಮಕ್ಕೆ ಬರಬೇಕೆಂದಿರುವವರಿಂದ ಇದನ್ನು ನಿರೀಕ್ಷಿಸುವುದು ಕಡು ಮೂರ್ಖರಿಗೆ ಮಾತ್ರ ಸಾಧ್ಯ. ಈ ವಿಷಯದಲ್ಲಿ ಖಾಸಗಿ ದೇಶಿ-ವಿದೇಶಿ ಬ್ಯಾಂಕುಗಳ ಅನುಭವ ನಮ್ಮ ಮುಂದಿದೆ.

ಸ್ಪರ್ಧೆ ಬರುತ್ತದೆ, ದಕ್ಷತೆ ಹೆಚ್ಚುತ್ತದೆ ಎಂಬುದೂ ಇಂತಹುದೇ ಮೂರ್ಖ ತರ್ಕ. ಏಕೆಂದರೆ ಸ್ಪರ್ಧೆ ಬರುವುದು ಲಾಭಕೋರತನದಲ್ಲಿ, ಜನಗಳ ಹಣವನ್ನು ನುಂಗಿ ಹಾಕುವಲ್ಲಿ ಮಾತ್ರ. ವಿದೇಶಿ ವಿಮಾ ರಂಗದಲ್ಲಿಯಾಗಲೀ, ಖಾಸಗೀಕರಣಗೊಂಡ ದೇಶಿ ಬ್ಯಾಂಕಿಂಗ್ ರಂಗದಲ್ಲಿಯಾಗಲೀ ನಾವಿಂದು ಸ್ಪರ್ಧೆ ಕಾಣುತ್ತಿಲ್ಲ. ಸಣ್ಣ ಕಂಪನಿಗಳನ್ನು ದೊಡ್ಡ ಕಂಪನಿಗಳು ನುಂಗಿಹಾಕುವ ದಿವಾಳಿಗಳು, ವಿಲೀನಗಳನ್ನಷ್ಟೇ ಕಾಣುತ್ತಿದ್ದೇವೆ. ಸ್ಪರ್ಧೆ ಕೊಡಲೆಂದು ಇತ್ತೀಚೆಗೆ ಹುಟ್ಟಿಕೊಂಡ ಎರಡು ಘಟಾನುಘಟಿ ಖಾಸಗಿ ಬ್ಯಾಂಕುಗಳು HDFC ಬ್ಯಾಂಕ್ ಮತ್ತು ಟೈಮ್ಸ್ ಬ್ಯಾಂಕ್ ಈಗ ವಿಲೀನಗೊಂಡಿವೆ! ಸ್ಪರ್ಧೆ ಎಲ್ಲಿಗೆ ಹೋಯಿತು?

ವಾಸ್ತವದಲ್ಲಿ ಅಂತರ್ರಾಷ್ಟ್ರೀಯವಾಗಿ ವಿಮಾ ಉದ್ದಿಮೆಯಲ್ಲಿ ಕಾಣುತ್ತಿರುವಂತದು ಸ್ಪರ್ಧೆಯಲ್ಲ, ಗುತ್ತೇದಾರಿಕೆ ಮಾತ್ರ. ಸ್ವತಃ ಅಮೆರಿಕಾದಲ್ಲಿ ಕೂಡಾ ವಿಮಾ ಪ್ರೀಮಿಯಂ ಆದಾಯದ 3% ಮಾತ್ರ ವಿದೇಶಿ ಕಂಪನಿಗಳ ಪಾಲಿಗೆ ಹೋಗಿದೆ. ಇದಕ್ಕೆ ನಮ್ಮ ಹುಸಿ ಸ್ವದೇಶಿವಾದಿಗಳು ಏನು ಹೇಳುತ್ತಾರೆ?

● *ಇರಲಿ. ಈ ಮಸೂದೆ ಪಾಸಾದರೆ ಮಾತ್ರ ಭಾರತದ ಮೂಲರಚನೆಗೆ ಭಾರಿ ಪ್ರಮಾಣದಲ್ಲಿ ವಿದೇಶಿಡಾಲರುಗಳು ಹರಿದು ಬರುತ್ತವೆ ಎಂಬುದೂ ಸುಳ್ಳೇ?*

■ ಕಳೆದ ಎಂಟು ವರ್ಷಗಳ ಉದಾರೀಕರಣದ ಅನುಭವದ ಆಧಾರದಲ್ಲಿ ಹಾಗೂ ಅಂತರ್ರಾಷ್ಟ್ರೀಯ ಅನುಭವದ ಆಧಾರದಲ್ಲಿ ಹೇಳುವುದಾದರೆ ಇದು ಕೂಡಾ ಸರಕಾರದ ನಿಜ ಉದ್ದೇಶವನ್ನು ಮರೆಮಾಚುವ ಇನ್ನೊಂದು ಕುತರ್ಕ. ಮೊದಲನೆಯದಾಗಿ, ಭಾರತದಲ್ಲಿ ಬಂಡವಾಳ ತೊಡಗಿಸಲು ವಿಮಾ ಉದ್ದಿಮೆಯನ್ನು ತೆರೆಯಬೇಕು ಎಂಬ ಶರತ್ತು ಹಾಕಬೇಕಾದರೆ ಇದರ ಹಿಂದೆ ಬಹುರಾಷ್ಟ್ರೀಯ ಕಂಪನಿಗಳ ಹುನ್ನಾರ ಏನೋ ಇದೆ ಎಂಬುದು ಸ್ಪಷ್ಟ. ಇದರಿಂದ ಭಾರತದ ಆರ್ಥಿಕಕ್ಕಿಂತ ಈ ಕಂಪನಿಗಳಿಗೇ ಇದರಿಂದ ಹೆಚ್ಚಿಗೆ ಲಾಭ ಇದೆ ಎಂಬುದು ಸ್ಪಷ್ಟ. ಇಲ್ಲಿ ಸಾರ್ವಜನಿಕ ವಲಯದ ಎಲ್.ಐ.ಸಿ./ಜಿ.ಐ.ಸಿ. ಬಳಿ ಎರಡು ಲಕ್ಷ ಕೋಟಿ ರೂ. ಬಂಡವಾಳವಿದೆ. ವಿಮಾ ಉದ್ದಿಮೆ 18% ದರದಲ್ಲಿ ಬೆಳೆಯುತ್ತಿದೆ. ಅತ್ತ ಅಮೆರಿಕಾದ, ಯುರೋಪಿನ ವಿಮಾ ಉದ್ದಿಮೆ ಬೆಳೆಯುತ್ತಿರುವುದು ಕೇವಲ 3% ದರದಲ್ಲಿ. ಆದ್ದರಿಂದಲೇ ಭಾರತದ ವಿಮಾ ಮಾರುಕಟ್ಟೆಯ ಮೇಲೆ ಈ ಹದ್ದುಗಳ ಕಣ್ಣು.

ಅಂಕೆ- ಸಂಖ್ಯೆಗಳೂ ಸರಕಾರದ ಈ ಪ್ರಚಾರದಲ್ಲಿ ಹುರುಳಿಲ್ಲ ಎಂಬುದನ್ನು ತೋರಿಸುತ್ತವೆ. ವಿಶ್ವಸಂಸ್ಥೆಯ ವಾಣಿಜ್ಯ ಮಂಡಳಿ UNCTAD ನ1999 ರ ವಿಶ್ವ ಬಂಡವಾಳ ಹೂಡಿಕೆ ವರದಿಯ ಪ್ರಕಾರ 1999 ರಲ್ಲಿ ಒಟ್ಟು 644 ಶತಕೋಟಿ ಡಾಲರುಗಳ ವಿದೇಶಿ ಬಂಡವಾಳ ಹೂಡಿಕೆ ನಡೆಯಿತು. ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ 39% ಹೆಚ್ಚು. ಆದರೆ ಇದರಲ್ಲಿ ಮೂರನೇ ಎರಡು ಭಾಗದಷ್ಟು ಅಂದರೆ 460 ಶತಕೋಟಿ ಡಾಲರುಗಳು ಮುಂದುವರೆದ ಪಾಶ್ಚಿಮಾತ್ಯ ದೇಶಗಳಿಗೇ ಹರಿದು ಹೋದವು. ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲೂ ಇದರಲ್ಲಿ ಬಹುಪಾಲು ಹರಿದುಹೋದದ್ದು "ಮೂಡಿಬರುತ್ತಿರುವ ಮಾರುಕಟ್ಟೆ"ಗಳು, 'ಮೊದಲ ಹಂತದ'ದೇಶಗಳು ಎಂದೆನಿಸಿಕೊಂಡ ಚೀಣಾ, ದಕ್ಷಿಣ ಕೊರಿಯಾ, ಬ್ರೆಜಿಲ್, ಥೈಲಾಂಡ್‌ನಂತಹ ದೇಶಗಳಿಗೇ. ಈ ಪಟ್ಟಿಯಲ್ಲಿ ಭಾರತದ ಹೆಸರೇ ಇಲ್ಲ. ಭಾರತದ ಮೂಲರಚನೆಗಳಲ್ಲಿ ಬಂಡವಾಳ ಹೂಡಿಕೆ ಕುರಿತಾದ ವಿಶ್ವ ಬ್ಯಾಂಕ್‌ನ ಒಂದು ಪ್ರಕಟಣೆಯಂತೂ ನಿಜ ಚಿತ್ರವನ್ನು ಇನ್ನೂ ಸ್ಪಷ್ಟವಾಗಿ ಮುಂದಿಟ್ಟಿದೆ. 'ಉದಾರೀಕರಣ- ಖಾಸಗೀಕರಣ'ದ ಈ ಎಂಟು ವರ್ಷಗಳಲ್ಲಿ ವಾಸ್ತವವಾಗಿ ಮೂಲ ರಚನೆಗಳಲ್ಲಿ ಬಂಡವಾಳ ಹೂಡಿಕೆ 5.3% ದಿಂದ 4.6% ಕ್ಕೆ ಇಳಿದಿದೆ. ಇದಕ್ಕೆ ಕಾರಣ ಸಾರ್ವಜನಿಕ ಹೂಡಿಕೆಗಳನ್ನು ನಿರುತ್ಸಾಹಗೊಳಿಸಿ ಖಾಸಗೀ ಹೂಡಿಕೆಗಳನ್ನು ಪ್ರೋತ್ಸಾಹಿಸುವ ಸರಕಾರದ ಕ್ರಮ. ಸಾರ್ವಜನಿಕ ಹೂಡಿಕೆಯನ್ನು 4% ದಿಂದ 3% ಕ್ಕೆ ಇಳಿಸುವಲ್ಲಿ ಸರಕಾರ 'ಯಶಸ್ವಿ' ಯಾಯಿತು. ಆದರೆ ಖಾಸಗೀ ಹೂಡಿಕೆ ಅವಕ್ಕೆ ಏನೆಲ್ಲಾ ಪ್ರೋತ್ಸಾಹ ಕೊಟ್ಟರೂ 1.4% ದಿಂದ 1.6% ಕ್ಕೇ ಏರಿತಷ್ಟೆ. ಇದು ಕೂಡಾ ವಿದ್ಯುತ್ ವಲಯದಲ್ಲಿ 16% ಪ್ರತಿಫಲದ ಗ್ಯಾರಂಟಿ ನೀಡಿದ್ದರಿಂದ ಮಾತ್ರ. ಈ 'ಗ್ಯಾರಂಟಿ'ಯ ದುಷ್ಫಲವನ್ನು ವಿಪರೀತ ವಿದ್ಯುತ್ ದರಗಳ ಮೂಲಕ ಜನಗಳು ತೆರಬೇಕಾಗಿದೆ. 'ಆರ್ಥಿಕ ಸುಧಾರಣೆ'ಗಳ ಶಿಲ್ಪಿಗಳಲ್ಲಿ ಒಬ್ಬರೆನಿಸಿದ ಮೊಂಟೆಕ್‌ಸಿಂಗ್ ಅಹುಲಿವಾಲಿಯಾರಂತವರೂ ಕೂಡಾ ಈಗ ಮೂಲರಚನೆಯಲ್ಲಿ ಸಾರ್ವಜನಿಕ ಹೂಡಿಕೆಯನ್ನು ಹೆಚ್ಚಿಸುವುದಲ್ಲದೆ ಬೇರೆ ದಾರಿ ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಆದರೂ ನಮ್ಮ ಆಳರಸರು ಮಾತ್ರ ಇನ್ನೂ ಅಮೆರಿಕನ್ ವಿಮಾ ಕಂಪನಿಗಳ ಡಾಲರುಗಳ ಮಹಾಪೂರ ಬರುತ್ತದೆ ಎಂದು ದೇಶ ನಂಬಬೇಕು ಎಂದು ಆಶಿಸುತ್ತಾರೆ.

● *ಎಲ್.ಐ.ಸಿ./ಜಿ.ಐ.ಸಿ. ಖಾಸಗೀಕರಣ ಮಾಡುವುದಿಲ್ಲ ವಿದೇಶಿ ವಿಮಾ ಕಂಪನಿಗಳು ಭಾರತದ ವಿಮಾ ಮಾರುಕಟ್ಟೆಯನ್ನು ಸುಲಿಯದಂತೆ ಈ ವಿಧೇಯಕದಲ್ಲಿ ಎಚ್ಚರಿಕೆ ವಹಿಸಲಾಗಿದೆ ಎಂದು ಸರಕಾರ ಆಶ್ವಾಸನೆ ನೀಡಿದೆಯಲ್ಲಾ?*

■ ಮೊದಲನೆಯದಾಗಿ ಇಂತಹ 'ಎಚ್ಚರ', 'ಆಶ್ವಾಸನೆ' ಇತ್ಯಾದಿಗಳು ಬಂದಿರುವುದು 1989 ರಿಂದ ವಿಮಾ ನೌಕರರು ಮತ್ತು ಪ್ರಜ್ಞಾವಂತ ಕಾರ್ಮಿಕ ಚಳುವಳಿಯ ಸತತ ವಿರೋಧದಿಂದಾಗಿ ಎಂಬುದನ್ನು ಗಮನಿಸಬೇಕು. ಮಲ್ಹೋತ್ರಾ ವರದಿ, ನಂತರ ಕಾಂಗ್ರೆಸ್ ರೂಪಿಸಿದ ನಿಲುಮೆಯಿಂದ ಹಿಡಿದು ಬಿಜೆಪಿ ರೂಪಿಸಿದ ಮೊದಲ ಮಸೂದೆಯ ವರೆಗೆ 40% ರವರೆಗೆ ವಿದೇಶಿ ಹೂಡಿಕೆಗೆ ಅವಕಾಶವಿತ್ತು. ಈಗ ಇದನ್ನು 26% ಕ್ಕೆ ಇಳಿಸಲಾಗಿದೆ. ಆದರೆ ಕಳೆದ ಎಂಟು ವರ್ಷಗಳ 'ಸುಧಾರಣೆ'ಗಳ ಅನುಭವವನ್ನು ನಂಬುವುದಾದರೆ ಈ 'ಎಚ್ಚರ ಕೂಡಾ ಜನಗಳನ್ನು ದಾರಿ ತಪ್ಪಿಸುವ ಇನ್ನೊಂದು ತಂತ್ರ. ಮೊದಲನೆಯದಾಗಿ, ಪರಿಸ್ಥಿತಿ ತಣ್ಣಗಾದ ನಂತರ ವಿದೇಶಿ ಹೂಡಿಕೆಯ ಪ್ರಮಾಣವನ್ನು ಏರಿಸಲು ತಿದ್ದುಪಡಿ ತರುವುದಿಲ್ಲ ಎಂಬ ಬಗ್ಗೆ ಗ್ಯಾರಂಟಿ ಇದೆಯೇ? ಎರಡನೆಯದಾಗಿ, ಈ ಮಸೂದೆಯಲ್ಲೇ ಭಾರತೀಯ ಹೂಡಿಕೆದಾರರು ತಮ್ಮ ಹೂಡಿಕೆಯನ್ನು ಹತ್ತು ವರ್ಷಗಳಲ್ಲಿ 26% ಕ್ಕೆ ಇಳಿಸಬೇಕು ಎಂಬ ವಿಚಿತ್ರ ಶರತ್ತು ಇದೆ. ಈ ಇಳಿಕೆಯನ್ನು 10 ವರ್ಷಗಳ ಮೊದಲೇ ಮಾಡಬಾರದು ಎಂಬ ಬಗ್ಗೆಯಾಗಲೀ, ಹೀಗೆ ಇಳಿಸಿದ ಶೇರುಗಳನ್ನು ವಿದೇಶಿ ಕಂಪನಿಗಳು ತಮ್ಮ ದೇಶೀ ಹಸ್ತಕರ ಮೂಲಕ ಖರೀದಿಸಲಾರರು ಎಂಬ ಬಗ್ಗೆಯಾಗಲೀ ಈ ಮಸೂದೆಯಲ್ಲಿ ಏನೂ ಭರವಸೆ ಇಲ್ಲ. ವಾಸ್ತವವಾಗಿ ಇದು ಹೀಗೇ ಆಗುತ್ತದೆ. ಬಹುರಾಷ್ಟ್ರೀಯ ಕಂಪನಿಗಳ ಕಾರ್ಯತಂತ್ರ ತಿಳಿದಿರುವವರನ್ನು ಈ ತರ್ಕದ ಮೂಲಕ ಮೋಸ ಮಾಡಲು ಸಾಧ್ಯವಿಲ್ಲ. ಬ್ಯಾಂಕ್ ವಲಯದಲ್ಲಿನ ಬೆಳವಣಿಗೆಗಳನ್ನು ಗಮನಿಸಿದಾಗ ವಿಮಾ ರಂಗದಲ್ಲಿಯೂ ಇದನ್ನು ಪ್ರಯತ್ನಿಸಿ ಸಾರ್ವಜನಿಕ ವಲಯದಲ್ಲಿನ ಎಲ್.ಐ.ಸಿ/ ಜಿ.ಐ.ಸಿ. ಯ ಖಾಸಗೀಕರಣ ಮಾಡುವುದಿಲ್ಲ ಎಂದರೆ ಖಂಡಿತಾ ನಂಬಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಹಣಕಾಸು ಮಂತ್ರಿಗಳ ಭರವಸೆಯನ್ನು ಬಹುಶಃ ಸ್ವತಃ ಅವರೂ ನಂಬುತ್ತಿಲ್ಲ.

● *ಇಷ್ಟಾದರೂ ವಿಮಾ ಖಾಸಗೀಕರಣಕ್ಕೆ ದೇಶದಲ್ಲಿ ಒಮ್ಮತ ಇದೆ ಎಂದು ಹೇಳಲಾಗುತ್ತಿದೆಯಲ್ಲಾ? ಸಂಸತ್ತಿನ ಬಲಾಬಲವೂ ಇದನ್ನೇ ಸೂಚಿಸುತ್ತಿದೆಯಲ್ಲಾ?*

■ ಇದಂತೂ ಶುದ್ಧ ಸುಳ್ಳು. ನೌಕರರು ಇದನ್ನು ಸಾಧಿಸಿ ತೋರಿಸಿದ್ದಾರೆ. ಆಕ್ಟೋಬರ್ 28 ರಂದು ಲೋಕಸಭಾ ಅಧ್ಯಕ್ಷರಿಗೆ ಸಲ್ಲಿಸಿದ ಅರ್ಜಿಗೆ ಹಾಕಿದ 1,50,54,577 ಸಹಿಗಳೇ ಇದಕ್ಕೆ ಸಾಕ್ಷಿ. ಹೀಗೆ ಸಹಿ ಮಾಡಿದವರಲ್ಲಿ ಹಲವು ನ್ಯಾಯಾಧೀಶರು, ಅರ್ಥಶಾಸ್ತ್ರಜ್ಞರು, ಕಲಾವಿದರೂ ಇದ್ದಾರೆ. ಅಷ್ಟೇ ಏಕೆ ಈಗಿನ ವಾಜಪೇಯಿ ಸರಕಾರದ ಇಬ್ಬರು ಸಂಪುಟ ದರ್ಜೆಯ ಮಂತ್ರಿಗಳ ಹೆಸರೂ ಇದೆ - ರಾಮ್ ವಿಲಾಸ್ ಪಾಸ್ವಾನ್ ಮತ್ತು ಶರದ್ ಯಾದವ್. ಎಡಪಕ್ಷಗಳು ಮತ್ತು ಇತರ ಕಾಂಗ್ರೆಸ್ಸೇತರ ಪಕ್ಷಗಳ ಈಗಿನ ಎಂ.ಪಿ.ಗಳಲ್ಲದೆ ಆಳುವ ಎನ್.ಡಿ .ಎ.ಗೆ ಮತ್ತು ಕಾಂಗ್ರೆಸ್‌ಗೆ ಸೇರಿದ 60 ಕ್ಕೂ ಹೆಚ್ಚು ಎಂ.ಪಿ.ಗಳೂ ಈ ಅರ್ಜಿಗೆ ಸಹಿ ಮಾಡಿದ್ದಾರೆ. 12 ನೇ ಲೋಕಸಭೆಯ ಸ್ಥಾಯಿಸಮಿತಿ ಕೂಡಾ ಹಿಂದಿನ ವಾಜಪೇಯಿ ಸರಕಾರದ ಮಸೂದೆಯನ್ನು ಒಮ್ಮತದಿಂದ ಪಾಸು ಮಾಡಲಿಲ್ಲ. ಬಹುಮತದಿಂದ ಪಾಸು ಮಾಡಿತಷ್ಟೆ. 11ನೇ ಲೋಕಸಭೆಯ ಸುಷ್ಮಾಸ್ವರಾಜ್ ಅಧ್ಯಕ್ಷತೆಯ ಅರ್ಜಿ ಸಮಿತಿಯಂತೂ ವಿಮೆಯನ್ನು ಖಾಸಗಿಯವರಿಗೆ ತೆರೆಯಬಾರದು ಎಂದೇ ಹೇಳಿತ್ತು. ಸರಿ, ಬಿಜೆಪಿ, ಎನ್.ಡಿ.ಎ. ಕಾಂಗ್ರೆಸ್‌ಗಳಲ್ಲಾದರೂ ಒಮ್ಮತವಿದ್ದರೆ ಅವರು ತಮ್ಮ ಸದಸ್ಯರಿಗೆ ವ್ಹಿಪ್ ಹೊರಡಿಸುವ ಅಗತ್ಯವಾದರೂ ಏನಿತ್ತು?

ವಾಸ್ತವ ಸಂಗತಿಯೆಂದರೆ ಈ ಬಗ್ಗೆ ಬಿಜೆಪಿಯೊಳಗೂ ಒಮ್ಮತವಿಲ್ಲ. ಎನ್.ಡಿ.ಎ. ಒಳಗೂ ಒಮ್ಮತವಿಲ್ಲ. ಕಾಂಗ್ರೆಸ್‌ನೊಳಗೂ ಒಮ್ಮತವಿಲ್ಲ. ಜನಗಳಲ್ಲಂತೂ ಇಲ್ಲವೇ ಇಲ್ಲ. ಏಕೆಂದರೆ ಕನಿಷ್ಟ 1.5 ಕೋಟಿ ಜನ ಈ ಮಸೂದೆಗೆ, ಖಾಸಗೀಕರಣ ಕ್ರಮಗಳಿಗೆ ವಿರುದ್ಧವಾಗಿದ್ದಾರೆ. ಸರಕಾರ ಹೇಳುವ ಒಮ್ಮತವೆಂದರೆ ಸಿಐಐ, ಫಿಕಿ, ಅಸೋಚಮ್ ಮುಂತಾದ ದೊಡ್ಡ ಬಂಡವಾಳಗರೊಂದಿಗೆ ಅದು ರೂಪಿಸಿದ ಒಮ್ಮತ, ವಿದೇಶಿ ವಿಮಾ ಕಂಪನಿಗಳೊಂದಿಗೆ, ಐ.ಎಂ.ಎಫ್- ವಿಶ್ವಬ್ಯಾಂಕ್‌ನ ಧಣಿಗಳೊಂದಿಗೆ, ಪೋಖ್ರಾನ್ ಸ್ಫೋಟದ ನಂತರ ಅಮೆರಿಕಾ ಸರಕಾರದೊಂದಿಗೆ ಎಂಟು ಸುತ್ತಿನ ಗುಪ್ತ ಮಾತುಕತೆಗಳಲ್ಲಿ ರೂಪಿಸಿಕೊಂಡ ಒಮ್ಮತ. ಇದನ್ನು ದೇಶದ ಜನಸಾಮಾನ್ಯರು 'ಒಮ್ಮತ' ಎಂದು ಒಪ್ಪಲು ಸಾಧ್ಯವಿಲ್ಲ. ದೇಶದ ಕೋಟ್ಯಾಂತರ ಜನರ ಸಮ್ಮತಿಯಂತೂ ಇದಕ್ಕೆ ಇಲ್ಲ.

ಒಟ್ಟಿನಲ್ಲಿ ಇಷ್ಟನ್ನಂತೂ ಖಂಡಿತವಾಗಿ ಹೇಳಬಹುದು - ಸರಕಾರ ವಿಮಾ ವಲಯವನ್ನು ಖಾಸಗೀಕರಿಸ ಬೇಕೆಂಬ ಸಾಮ್ರಾಜ್ಯಶಾಹಿಗಳ ಒತ್ತಡಕ್ಕೆ ತಲೆಬಾಗಿದೆ. ತನ್ನ ಈ ನಾಚಿಕೆಗೇಡಿ ಶರಣಾಗತಿಯನ್ನು ಮರೆಮಾಚಲು ಅರೆಸುಳ್ಳುಗಳು, ಹಸಿ ಸುಳ್ಳುಗಳನ್ನು ಹರಡಿಸುತ್ತಿದೆ. ದೇಶಪ್ರೇಮಿ ನಾಗರಿಕರು ಹಾಗೂ ದುಡಿಯುವ ಜನಸಮೂಹಗಳಿಗೆ ಇದೀಗ ಹೆಚ್ಚೆಚ್ಚು ಸ್ಪಷ್ಟವಾಗಿ ಅರ್ಥವಾಗಲಾರಂಭಿಸಿದೆ.

ವಿಮಾ ನೌಕರರ ಹೋರಾಟ ಮತ್ತು ಎಡಪಕ್ಷಗಳು

ಐ.ಆರ್.ಡಿ.ಎ. ಮಸೂದೆಯ ಮೇಲೆ ಚರ್ಚೆಗೆ ಉತ್ತರ ಕೊಡುವಾಗ ಹಣಕಾಸು ಮಂತ್ರಿ ಯಶವಂತ ಸಿನ್ಹಾರ ಭಾರಿ ಕೋಪಕ್ಕೆ ಪಾತ್ರರಾದವರು ಎಡಪಕ್ಷಗಳ ಸದಸ್ಯರು. ಇವರು "ಇತಿಹಾಸದ ತಿಪ್ಪೆಗೆ ಎಸೆಯಲ್ಪಡುವರು" "16ನೇ ಶತಮಾನದ ಸಿದ್ಧಾಂತ ಹಿಡಿದುಕೊಂಡು 21 ನೇ ಶತಮಾನಕ್ಕೆ ಹೋಗುವವರು" ಎಂದೆಲ್ಲಾ ಕೂಗಾಡಿದರು. 16ನೇ ಶತಮಾನದಲ್ಲಿ ಮಾರ್ಕ್ಸ್ ಹುಟ್ಟೇ ಇರಲಿಲ್ಲ ಎಂಬುದಾಗಲೀ, ಆ ಮಾರ್ಕ್ಸ್‌ರನ್ನು ಇವರು ಈಗ ಯಾರ ಬಾಲಹಿಡಿಯಲು ಪ್ರಯತ್ನಿಸುತ್ತಿದ್ದರೋ ಆ ಪಾಶ್ಚಿಮಾತ್ಯ ದೇಶಗಳ ಜನರೇ 'ಸಹಸ್ರಮಾನದ ವ್ಯಕ್ತಿ' ಎಂದು ಆರಿಸಿದ್ದು ಬಹುಶಃ ಈತನಿಗೆ ಗೊತ್ತೇ ಇಲ್ಲವೇನೋ. 6ನೇ ಶತಮಾನದ ಸಿದ್ಧಾಂತಗಳ 'ಪರಿವಾರ'ದಲ್ಲಿ ಇರುವವರು 16ನೇ ಶತಮಾನದ ಮಾತನಾಡುತ್ತಿದ್ದಾರೆ ಎಂದು ಒಬ್ಬ ಪತ್ರಕರ್ತರು ಟಿಪ್ಪಣಿ ಮಾಡಿದ್ದಾರೆ. ಆದರೆ ಯಶವಂತ ಸಿನ್ಹಾರ ಕೋಪವಂತೂ ಸ್ವಾಭಾವಿಕ. ಏಕೆಂದರೆ ವಿಮಾ ನೌಕರರ ಹೋರಾಟಕ್ಕೆ, ಸಂಸತ್‌ನ ಒಳಗೂ, ಹೊರಗೂ ಸತತ ಬೆಂಬಲ ನೀಡಿದವರು ಎಡಪಕ್ಷಗಳವರು. ಸಂಯುಕ್ತ ರಂಗದ ಪ್ರಮುಖ ಭಾಗವಾಗಿದ್ದರೂ ಆ ಸರಕಾರದ ಹಣಕಾಸು ಮಂತ್ರಿ ಈ ಮಸೂದೆ ತಂದಾಗ ಅದನ್ನು ಬಲವಾಗಿ ವಿರೋಧಿಸಿ ಹಿಂತೆಗೆದುಕೊಳ್ಳುವಂತೆ ಮಾಡಿದವರು ಎಡಪಕ್ಷಗಳವರು. ವಾಜಪೇಯಿ ಸರಕಾರ ಇದನ್ನು ಮೊದಲು ತಂದಾಗ ಅದು ಸ್ಥಾಯಿ ಸಮಿತಿಗೆ ಹೋಗುವಂತಾ ದದ್ದು, ಅಲ್ಲಿ 'ಒಮ್ಮತ' ಸಾಧ್ಯವಾಗದ್ದು ಎಡಪಕ್ಷಗಳ ಸದಸ್ಯರಿಂದಾಗಿ. 13ನೇ ಲೋಕಸಭೆ ಯಲ್ಲೂ ಈ ಮಸೂದೆಯು ಮೊದಲು 1.5 ಕೋಟಿ ಜನಗಳ ಅರ್ಜಿಯನ್ನು ಚರ್ಚೆಗೆ ತಗೊಳ್ಳಬೇಕು ಎಂದು ಒತ್ತಾಯಿಸಿ ಆಳುವ ಕೂಟದ ಪ್ರಜಾಪ್ರಭುತ್ವ-ವಿರೋಧಿ ಸ್ವರೂಪವನ್ನು ಬಯಲಿಗೆಳೆದವರು ಎಡಪಕ್ಷಗಳ ಸದಸ್ಯರು.

ವಿಮಾ ನೌಕರರ ಹೋರಾಟದಲ್ಲಿ ಕಾಂಗ್ರೆಸ್, ಬಿಜೆಪಿ ಮತ್ತು ಇತರ ಹಲವು ಪಕ್ಷಗಳು ಸಮಯಸಾಧಕತನದ ಪ್ರದರ್ಶನ ಮಾಡಿದ್ದರೆ, ಎಡಪಕ್ಷಗಳು ದುಡಿಯುವ ಜನಗಳ ನಿಜವಾದ ಪ್ರತಿನಿಧಿಗಳು ಎಂದು ಮಧ್ಯಮವರ್ಗಗಳ ನೌಕರರಿಗೂ ಮನದಟ್ಟು ಆಗುವಂತಹ ಪರಿಸ್ಥಿತಿ ನಿರ್ಮಾಣವಾಗಿರುವಾಗ ಯಶವಂತಸಿನ್ಹಾರವರಿಗೆ ಕೋಪ ಬರದಿರುತ್ತದೆಯೇ?

ಸಿಪಿಐ(ಎಂ) ಕೇಂದ್ರ ಸಮಿತಿಯ ವಾರಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ' 'ಭಾರತದ ಮಾರಾಟ' ಎಂದು ಈ ಬಗ್ಗೆ ಬರೆದ ಸಂಪಾದಕೀಯ ಎಡಪಕ್ಷಗಳು ಈ ಮಸೂದೆಯನ್ನು ಏಕೆ ವಿರೋಧಿಸುತ್ತಿವೆ ಎಂದು ವಿವರಿಸುತ್ತಾ 'ಶ್ರೀಯುತ ವಾಜಪೇಯಿಯವರೇ, ಇವೀಗ ನಮ್ಮ ವಿರೋಧಕ್ಕೆ ಕಾರಣಗಳು. ಇವು ನಮ್ಮ ಜನಗಳ, ದೇಶದ ಪರಮ ಹಿತಾಸಕ್ತಿಯ ವಿಷಯಗಳು. ಇಂತಹ ದೇಶಪ್ರೇಮಕ್ಕೆ ನೀವು 'ಸೈದ್ಧಾಂತಿಕ' ಎಂಬ ಲೇಬಲ್ ಹಚ್ಚುವುದಾದರೆ ಹಾಗೆಯೇ ಆಗಲಿ ಬಿಡಿ' ಎಂದಿದೆ. ಲಕ್ಷಾಂತರ ಕಾರ್ಮಿಕರು ಈಗಾಗಲೇ ಇಂತಹ ಕ್ರಮಗಳ ವಿರುದ್ಧ ಮುಷ್ಕರಕ್ಕಿಳಿದಿದ್ದಾರೆ. ಹೊಸ ಹೊಸ ಜನ ವಿಭಾಗಗಳು ದೇಶದ ಆರ್ಥಿಕವನ್ನು ಮತ್ತು ದೇಶವನ್ನು ವಿದೇಶಿ ಹಿತಾಸಕ್ತಿಗಳಿಗೆ ಒತ್ತೆಯಿಡುವ ಇಂತಹ ಕ್ರಮಗಳ ವಿರುದ್ಧ ಹೋರಾಟದತ್ತ ಆಕರ್ಷಿತರಾಗುತ್ತಾರೆ. ವಾಜಪೇಯಿ ನೇತೃತ್ವದ ಸರಕಾರ ಭಾರತವನ್ನು ಮಾರುವುದನ್ನು, ಅದು ಕೂಡಾ ಅಗ್ಗದರದಲ್ಲಿ ಮಾರುವುದನ್ನು ತಡೆಯಲು ಜನ ಒಂದಾಗಿ ಎದ್ದು ನಿಲ್ಲಬೇಕು ಎಂದು ಈ ಸಂಪಾದಕೀಯ ಹೇಳಿದೆ.

ಅರ್ಧ ಗಂಟೆಯಲ್ಲಿ 50 ಐಕ್ಯರಂಗ ಪ್ರತಿಗಳ ಮಾರಾಟ!

ಅರ್ಧಗಂಟೆಯಲ್ಲಿ 50 ಐಕ್ಯರಂಗ ಪ್ರತಿಗಳ ಮಾರಾಟ! ಐಕ್ಯರಂಗ ಮಾರಾಟ ಮಾಡಲು ಮುಜುಗರ ಇರುವವರಿಗೆ ಇದು ಹುಬ್ಬೇರಿಸುವಂತೆ ಮಾಡಬಹುದು. ಆದರೂ ಸತ್ಯ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲೂಕಿನ "ಐಕ್ಯರಂಗ ಬಳಗ" ದವರು ಇದನ್ನು ಸಾಬೀತು ಮಾಡಿದ್ದಾರೆ.



ನವೆಂಬರ್ 24-1999 ಕಾಮ್ರೆಡ್ ಎಂಗಲ್ಸ್‌ರವರ ಜನ್ಮ ದಿನಾಚರಣೆ. ದುಡಿವ ಜನತೆಯೊಂದಿಗಿದ್ದ ಇವರನ್ನು ದುಡಿವ ಜನರ ಪ್ರಾಣಮಿತ್ರ ಐಕ್ಯರಂಗ ಪ್ರಸಾರ ದಿನವನ್ನಾಗಿ ಆಚರಿಸಬೇಕೆಂದು ಸಿಪಿಐ(ಎಂ) ಬಳ್ಳಾರಿ ಜಿಲ್ಲಾ ಸಮಿತಿ ತೀರ್ಮಾನಿಸಿತು. ಹಗರಿಬೊಮ್ಮನಹಳ್ಳಿಯ ಐಕ್ಯರಂಗ ಬಳಗದವರು ಸಭೆಸೇರಿ ನವೆಂಬರ್ 24ರಂದು ತಾಲೂಕಿನ ಪ್ರಮುಖ ಬೀದಿಗಳಲ್ಲಿ ಸಭೆನಡೆಸಿ ಪತ್ರಿಕೆ ಮಾರಾಟ ಮಾಡುವ ತೀರ್ಮಾನ ಮಾಡಿದರು.

ಮೊದಲೆಲ್ಲಾ ಐಕ್ಯರಂಗ ಮಾರಾಟ ಮಾಡುವು ದೆಂದರೆ ಮುಜುಗರದ ಭಾವನೆ. ಬೀದಿಗಳಲ್ಲಿ, ಬಸ್ಸುಗಳಲ್ಲಿ ಮಾರಾಟ ಮಾಡುವ ಅನುಭವವನ್ನು ಬೇರೆ ಜಿಲ್ಲೆಯ ಸಂಗಾತಿಗಳಿಂದ ಹಂಚಿಕೊಂಡಿದ್ದರೂ ಈ ಮುಜುಗರ ಭಾವನೆಯನ್ನು ತೊಡೆದು ಹಾಕುವ ಕೆಲಸವಮಾತ್ರ ಆಗಿರಲಿಲ್ಲ. ಹಗರಿಬೊಮ್ಮನಹಳ್ಳಿಯಲ್ಲಿ ಈ ಹಿಂದೆ ಒಬ್ಬರೇ ಮಾತ್ರ ಪತ್ರಿಕೆ ಹಂಚುವ ಕೆಲಸ ಮಾಡುತ್ತಿದ್ದರು. ಸಂಪೂರ್ಣ ಪತ್ರಿಕೆಯ ಜವಾಬ್ದಾರಿ ಅವರೊಬ್ಬರದೇ ಎನ್ನುವ ರೀತಿಯಲ್ಲಿತ್ತು. ಸಂಗ್ರಹವಾದ ಹಣ ಇತರೆ ಕೆಲಸಗಳಿಗೆ ಬಳಕೆಯಾಗುತ್ತಿತ್ತಲ್ಲದೆ. ಪತ್ರಿಕೆ ಹಂಚಿದಾರಾಯಿತು ಎಂಬ ತಾತ್ಸಾರ ಮನೋಭಾವ ದಿಂದ ಪತ್ರಿಕೆಗಳು ಯಾರಿಗೂ ಹಂಚದೆ ಉಳಿದು ಬಿಡುವ ಪ್ರಸಂಗಗಳು ಇದ್ದವು. ಇದನ್ನು, ಹೇಗಾದರೂ ಮಾಡಿ ತೊಡೆದು ಹಾಕಬೇಕೆಂದು ನಿರ್ಧರಿಸಿ ಆಗ ಜನರ ಐಕ್ಯರಂಗ ಬಳಗವನ್ನು ರಚಿಸಿದೆವು. ಪ್ರತಿ ಮಂಗಳವಾರ ಸಭೆ ಸೇರತೊಡಗಿತು. ಒಬ್ಬರ ಜನಬ್ದಾರಿ ಇದ್ದ ಪತ್ರಿಕೆ ಇಡೀ ಬಳಗದ ಜವಾಬ್ದಾರಿಯಾಯಿತು. ಪ್ರತಿಯೊಬ್ಬರು ಒಂದೊಂದು ವಾರ ಪತ್ರಿಕೆ ಹಂಚುವ ಕೆಲಸ ತೆಗೆದು ಕೊಂಡರು. ತಾತ್ಸಾರಮಾಡುವ, ಇತರೆ ಕೆಲಸಗಳಿಗೆ ಪತ್ರಿಕೆಯ ಹಣ ಬಳಸುವ ಪ್ರಶ್ನೆಯೇ ಇಲ್ಲವಾಯಿತು. ಏಕೆಂದರೆ, ಪ್ರತಿವಾರವೂ ಪತ್ರಿಕೆ ಹಂಚಿದರ ಬಗ್ಗೆ ಹಣಕಾಸಿನ ಬಗ್ಗೆ ಚರ್ಚೆ ನೆಡೆಯುವುದು. ಇದರ ಜೊತೆಗೆ "ಐಕ್ಯರಂಗ ಬಳಗ" "ಐಕ್ಯರಂಗ ಓದುಗರ ಬಳಗ'ವನ್ನು ಮಾಡಿ ಪ್ರತಿವಾರವೂ ಐಕ್ಯರಂಗ ಓದಿರುವುದರ ಬಗ್ಗೆ ಚರ್ಚೆ ನಡೆಸುತ್ತದೆ. ಗೊತ್ತಾಗದ ವಿಷಯವಿದ್ದರೆ ಮತ್ತೊಮ್ಮೆ ಪತ್ರಿಕೆಯಲ್ಲಿ ಬಂದ ಆ ವಿಷಯ ಓದಿ ಚರ್ಚೆ ಮಾಡುವುದರ ಮೂಲಕ ಉತ್ತರವನ್ನು ಕಂಡುಕೊಳ್ಳಲಾಗುತ್ತದೆ. ಪತ್ರಿಕೆಯನ್ನು ತೆಗೆದುಕೊಳ್ಳುವ ಸಂಗಾತಿಗಳು ಸಂಪೂರ್ಣವಾಗಿ ಪತ್ರಿಕೆಯನ್ನು ಓದುವ ಅಭ್ಯಾಸ ಬೆಳೆಸಿಕೊಂಡಿದ್ದಾರೆ.

ಹೀಗೆ ಐಕ್ಯರಂಗ ಬಳಗ ಉತ್ತಮವಾಗಿ ಕೆಲಸ ನಿರ್ವಹಿಸತೊಡಗಿದೆ. ಕಾಮ್ರೆಡ್ ಎಂಗಲ್ಸ್ ದಿನಾಚರಣೆ ಅಂಗವಾಗಿ, ಐಕ್ಯರಂಗ ಪ್ರಸಾರ ದಿನವನ್ನು ಉತ್ತಮವಾಗಿ ಜನತೆಯ ಮಧ್ಯದಲ್ಲಿ ತೆಗೆದುಕೊಂಡು ಹೋಗಬೇಕೆಂದು ನಿರ್ಧರಿಸಿದ ಸಭೆ ಅದಕ್ಕಾಗಿ ನವೆಂಬರ್ 23ರಿಂದಲೇ ಕಾರ್ಯ ಪ್ರವೃತ್ತರಾದರು. ಐಕ್ಯರಂಗಕ್ಕೆ 20 ನೇರ ಚಂದದಾರರನ್ನು ಗುರಿತಿಸಿ ಅವರನ್ನು ಕಂಡು ನಮ್ಮ ಪತ್ರಿಕೆಯ ಬಗ್ಗೆ ತಿಳಿಸಿದೆವು. 20 ಜನರಲ್ಲಿ 10 ಜನರು ಐಕ್ಯರಂಗಕ್ಕೆ ವಾರ್ಷಿಕ ಚಂದಾದಾರರಾದರು. ಸಾಯಂಕಾಲ ನವೆಂಬರ್ 24ರ ಸಭೆಗೆ "ಐಕ್ಯರಂಗ ಓದಿರಿ" "ದುಡಿಯುವ ಜನರ ಪ್ರಾಣಮಿತ್ರ ಐಕ್ಯರಂಗ" "ಎಂಗಲ್ಸ್ ಜನ್ಮದಿನ- ಐಕ್ಯರಂಗ ಪ್ರಸಾರದಿನ" ಘೋಷಣೆಯುಳ್ಳ Play cards ಬರೆದೆವು. ನವೆಂಬರ್ 24 ಸಂಜೆ 4 ಗಂಟೆಗೆ 15 ಸಂಗಾತಿಗಳು Play cardsನ್ನು ಹಿಡಿದುಕೊಂಡು ಹಗರಿಬೊಮ್ಮನ ಹಳ್ಳಿಯ ಪ್ರಮುಖ ಬೀದಿಯಲ್ಲಿ ಬರುತ್ತಿದ್ದರೆ ಯಾವಾಗಲೂ ಬೇಡಿಕೆಯ ಮೇಲೆ ಚಳುವಳಿಯನ್ನು ನಡೆಸುವವರು ಪತ್ರಿಕೆ ಓದಿ ಎಂದು ಚಳುವಳಿ ನಡೆಸುತ್ತಿದ್ದಾರಲ್ಲ ಎಂದುಕೊಂಡ ಜನರು ಆಶ್ಚರ್ಯಚಕಿತರಾಗಿ ನಮ್ಮನ್ನೇ ನೋಡತೊಡಗಿದರು. ಬಸವೇಶ್ವರ ಬಜಾರ್‌ಹತ್ತಿರ ಸಭೆ ಸೇರಿದೆವು. ಸಂಗಾತಿ ಎಸ್. ಜಗನ್ನಾಥ್ ಅವರ ಕ್ರಾಂತಿಗೀತೆಯೊಂದಿಗೆ ಪ್ರಾರಂಭವಾದ ಸಭೆ ಐಕ್ಯರಂಗ ಬಳಗದ ಸಂಚಾಲಕರಾದ ಸಂಗಾತಿ ರಂಗಪ್ಪದಾಸರವರು ಕಾಮ್ರೆಡ್ ಎಂಗಲ್ಸ್ ರವರ ಬಗ್ಗೆ ವಿವರಿಸಿ ಅವರ ಜನ್ಮದಿನವನ್ನು ಐಕ್ಯರಂಗ ಪ್ರಸಾರ ದಿನವನ್ನಾಗಿ ಆಚರಿಸುತ್ತಿದ್ದೇವೆ ಎಂದು ಹೇಳಿದರು. ಮುಂದುವರೆದು ಇಂದಿನ ಪತ್ರಿಕೆಗಳು ಜನಸಾಮಾನ್ಯರ ಧ್ವನಿಯಾಗದೆ ಬಂಡವಾಳದಾರರ ಪತ್ರಿಕೆಯಾಗಿ ಕಾರ್ಯನಿರ್ವಹಿಸುತ್ತಿವೆ. ಕೆಲವೊಂದು ಪತ್ರಿಕೆಗಳು ಜನರನ್ನೂ ದಾರಿತಪ್ಪಿಸುವ ಕೆಲಸ ಮಾಡತೊಡಗಿವೆ. ಯುವಕರಲ್ಲಿ ಕಾಮ ಕ್ರೋಧ ದರೋಡೆಗಳಂತಹ ಮನಸ್ಸನ್ನು ಸೃಷ್ಟಿಸತೊಡಗಿವೆ. ರೈತರ ಆತ್ಮಹತ್ಯೆಯಾಗಲೀ, ರಾಷ್ಟ್ರೀಯ ಐಕ್ಯತೆಯಾಗಲೀ, ಜಾಗತೀಕರಣ, ಉದಾರೀಕರಣ, ಖಾಸಗೀಕರಣ ದಿಂದಾಗುವ ಅಪಾಯಗಳಾಗಲೀ ಇವರಿಗೆ ಪ್ರಮುಖ ವಿಚಾರವಲ್ಲ. ಸೋನಿಯಾರವರ ಸ್ವದೇಶಿ ವಿದೇಶಿಯಂತಹ ಪ್ರಶ್ನೆಗಳೇ ಪ್ರಮುಖ ವಿಷಯವಾಗುವುದು ವಿಪರ್ಯಾಸವಾಗಿದೆ ಎಂದರು. ಆದರೆ ಐಕ್ಯರಂಗ ಸಂಪೂರ್ಣ ಬಿನ್ನವಾಗಿದ್ದು ಜನರ ಚಳುವಳಿಗಳ ಧ್ವನಿಯೊಂದಿಗೆ ಗುರುತಿಸಿಕೊಳ್ಳುವ, ಸಮಾಜದ ಬದಲಾವಣೆಯ ಮಹತ್ತರ ಜವಾಬ್ದಾರಿ ಹೊತ್ತಿರುವ ಪತ್ರಿಕೆ ಎಂದರು. ಸಂಗಾತಿ ಬಿ.ಗಣೇಶ್‌ರವರು ಪತ್ರಿಕೆಯಲ್ಲಿ ಬಂದ ಲೇಖನಗಳ ಬಗ್ಗೆ ವಿವರಿಸಿ ಪತ್ರಿಕೆಕೊಳ್ಳಲು ವಿನಂತಿಸಿದರು. ಸಂಗಾತಿ ಎನ್.ಟಿ.ಲಲಿತ. ಬಿ.ಮಾಳಮ್ಮ ಕೆ. ಹುಲಿಗೆಮ್ಮ ಕೆ. ಗಂಗಾಧರ, ಆರ್.ಎಸ್. ಬಸವರಾಜ ಪತ್ರಿಕೆಯನ್ನು ಜನರ ಬಳಿ ಮಾರಾಟ ಮಾಡಿದರು. ವಿಶೇಷವೇನೆಂದರೆ ಇಬ್ಬರು ಸಂಗಾತಿಗಳು ಸಭೆಯನ್ನುದ್ದೇಶಿಸಿ ಮಾತನಾಡಿದ್ದು 10 ನಿಮಿಷ, ಪತ್ರಿಕೆ ಮಾರಾಟ 5 ನಿಮಿಷ, ಒಟ್ಟು ಪತ್ರಿಕೆ ಮಾರಾಟವಾಗಿದ್ದು 27. ಇದೇರೀತಿಯ ಇನ್ನೊಂದು ಸಭೆ ಬಸ್ ನಿಲ್ದಾಣದ ಬಳಿ. ಇಲ್ಲಿಯೂ ಪತ್ರಿಕೆ ಮಾರಾಟವಾಗಿದ್ದು 23. ನಾವು ಪತ್ರಿಕೆ ಮಾರಾಟ ಮಾಡಲೆಂದೇ 50 ಪ್ರತಿಗಳನ್ನು ತೆಗೆದುಕೊಂಡಿದ್ದೆವು ಇನ್ನೂ ಹೆಚ್ಚು ಪತ್ರಿಕೆಯ ಪ್ರತಿಗಳಿದ್ದರೆ ಚೆನ್ನಾಗಿತ್ತು ಎಂಬುದು ಎಲ್ಲಾ ಸಂಗಾತಿಗಳ ಅಭಿಪ್ರಾಯವಾಗಿತ್ತು. ಐಕ್ಯರಂಗ ಬಳಗದವರು ಕನಿಷ್ಟ 5 ರಿಂದ 6 ಸಭೆಗಳನ್ನು ನಡೆಸುವ ಉದ್ದೇಶವಿತ್ತು. ಕೇವಲ 2 ಸಭೆಗಳಿಗೆ ಅರ್ಧಗಂಟೆಯಲ್ಲಿ ನಮ್ಮ ಪ್ರತಿಗಳು ಮುಗಿದು ಹೋಗಿದ್ದವು. ಸಭೆಯಲ್ಲಿನ ವಿಶೇಷವೇನಂದರೆ ರೈತ ಕೂಲಿಕಾರರೇ ಅತಿ ಹೆಚ್ಚು ಪತ್ರಿಕೆಗಳನ್ನು ಕೊಂಡಿದ್ದು. ನಮ್ಮ 15 ಸಂಗಾತಿಗಳ ಮೊಗದಲ್ಲಿ ಹರ್ಷದ ನಗೆ. ನಾವು ಐಕ್ಯರಂಗ ಪತ್ರಿಕೆಯನ್ನು ಮಾರಾಟ ಮಾಡಬಲ್ಲೆವು ಎಂಬ ಆತ್ಮವಿಶ್ವಾಸದೊಂದಿಗೆ, ದುಡಿಯುವ ಜನ ನಮ್ಮ ಪತ್ರಿಕೆ ಓದುವುದಿಲ್ಲ ಎಂಬ ಅನುಮಾನ ನಮ್ಮ ಸಂಗಾತಿಗಳಿಂದ ದೂರವಾಯಿತು. ನಮ್ಮ ಜೊತೆಯಲ್ಲಿ ಸಂಗಾತಿಗಳಾದ ಕೆ. ವಿರೇಶ್, ಕೆ.ಚೌಡಪ್ಪ, ಕೆ. ರಾಮು, ಪಿ. ವೆಂಕಟೇಶ್, ಕೆ. ನಾಗೇಂದ್ರಪ್ಪ ಹಾಜರಿದ್ದರು.

ವರದಿ - ರಂಗಪ್ಪದಾಸರು.

ಒರಿಸ್ಸಾ ಸಂತಸ್ತರಿಗೆ ವಿದ್ಯಾರ್ಥಿ-ಯುವಜನರಿಂದ ನಿಧಿಸಂಗ್ರಹ

ಹಾನಗಲ್ : ಭೀಕರ ಚಂಡಮಾರುತದಿಂದ ತತ್ತರಿಸಿ, ಅಪಾರ-ಸಾವು-ನೋವುಗಳನ್ನು ಅನುಭವಿಸುತ್ತಿರುವ ಮತ್ತು ಅನಾಥರಾಗಿರುವ ಒರಿಸ್ಸಾ ಸಂತ್ರಸ್ತ ಜನರಿಗೆ ಬೆಂಬಲವಾಗಿ ಹಾನಗಲ್ ನಗರದಲ್ಲಿ ವಿದ್ಯಾರ್ಥಿ-ಯುವಜನರು ಎಸ್.ಎಫ್.ಐ. ಹಾಗೂ ಡಿ.ವೈ.ಎಫ್.ಐ ಸಂಘಟನೆಗಳ ನೇತೃತ್ವದಲ್ಲಿ ಪಾದಯಾತ್ರೆ ನಡೆಸಿ ಸಾರ್ವಜನಿಕರಿಂದ ನಿಧಿಸಂಗ್ರಹಿಸಿದರು.

ತಾಲೂಕಿನ ತಹಸೀಲ್ದಾರ್ ಆರ್.ಕೆ. ಬೊರ್‌ಕರ್‌ರವರು ಆರಂಭದಲ್ಲಿ ನಿಧಿ ಸಂಗ್ರಹ ಡಬ್ಬಿಗೆ ತಮ್ಮ ಕಾಣಿಕೆಯನ್ನು ನೀಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಒರಿಸ್ಸಾದ ಜನತೆಯ ಸಂಕಷ್ಟಕ್ಕೆ ಸ್ಪಂದಿಸುತ್ತಿರುವ ವಿದ್ಯಾರ್ಥಿ ಯುವಜನರ ಕಾರ್ಯವನ್ನೂ ಪ್ರಶಂಸಿದರು. ನಂತರದಲ್ಲಿ, ಅಂಜುಮಾನ್, ವಿರಟನಗರ ಹೈಸ್ಕೂಲಿನ, ಹಾಗೂ ಎನ್.ಸಿ.ಜೆ. ಕಾಲೇಜಿನ ವಿದ್ಯಾರ್ಥಿಗಳು ಮತ್ತು ಯುವಜನರು ನಗರದ ಸರ್ಕಾರಿ ಕಛೇರಿಗಳಿಗೆ, ಮತ್ತು ಪ್ರಮುಖ ಬೀದಿಗಳಲ್ಲಿ ಪಾದಯಾತ್ರೆ ನಡೆಸಿ ಸಾರ್ವಜನಿಕರಿಂದ ಒರಿಸ್ಸಾ ಸಂತ್ರಸ್ತರಿಗೆ ನಿಧಿ ಸಂಗ್ರಹಿಸಿದರು. ರಾಷ್ಟ್ರಾದ್ಯಂತ- ಒರಿಸ್ಸಾ ಸಂತ್ರಸ್ತ ಜನರಿಗೆ ಅಗತ್ಯ-ವಸ್ತುಗಳು ಹಣ, ಬಟ್ಟೆ, ಇತ್ಯಾದಿಗಳನ್ನೂ ಸಂಗ್ರಹಿಸಿ ಕಳಿಸುವಂತೆ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಹಾಗೂ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ಸಂಘಟನೆಗಳು ಕರೆ ನೀಡಿರುವ ಹಿನ್ನಲೆಯಲ್ಲಿ ಈ ಕಾರ್ಯಕ್ರಮವನ್ನು ಸಂಘಟಿಸಲಾಗಿತ್ತು.

ಈ ಕಾರ್ಯಕ್ರಮದ ನೇತೃತ್ವವನ್ನು ಡಿ.ವೈ.ಎಫ್.ಐ ತಾಲೂಕು ಸಂಚಾಲಕ ಸೋಮಶೇಖರ್ ಕೊತಂಬರಿ, ಎಸ್.ಎಫ್.ಐ. ಮುಖಂಡ, ವಿಜಯಕುಮಾರ್ ದೊಡ್ಡಮನಿ, ಪತ್ರಕರ್ತ ಕುಮಾರ್ ಅವದಕಟ್ಟೆ, ವಿದ್ಯಾರ್ಥಿ ಮುಖಂಡರಾದ ರಾಘವೇಂದ್ರ ಬೆಟಗೇರಿ, ಚಿಕ್ಕಣ್ಣನವರ್ ಮತ್ತು ಸುಣಗಾರ್, ಮೊದಲಾದವರು ವಹಿಸಿದ್ದರು.



ಉತ್ತರ ಕನ್ನಡ ಹಂಚು ಕಾರ್ಮಿಕ ಚಳುವಳಿ ನಡೆದು ಬಂದ ದಾರಿ



ಉತ್ತರ ಕನ್ನಡ ಜಿಲ್ಲೆಯಲ್ಲಿ 17 ಹಂಚು ಕಾರ್ಖಾನೆಗಳಿದ್ದು 8 ರಲ್ಲಿ ಸಿಐಟಿಯು ನೇತೃತ್ವದಲ್ಲಿ ಸಂಘ 1994 ರಲ್ಲಿ ರಚನೆಯಾಯಿತು. ಅದಕ್ಕೂ ಮೊದಲು ದಕ್ಷಿಣ ಕನ್ನಡ ಜಿಲ್ಲಾ ಹಂಚು ಕಾರ್ಮಿಕ ಸಂಘದಡಿಯಲ್ಲಿ ಚಟುವಟಿಕೆ ನಡೆಸುತ್ತಿತ್ತು. ಈ ಸಂಘವು ಅಸ್ತಿತ್ವಕ್ಕೆ ಬರಬೇಕಾದರೆ ಅನೇಕ ಸಂಗಾತಿಗಳ ಕೊಡುಗೆ ಇವೆ. ಈ ಸಂಘ ಆರಂಭಿಕ ಹಂತದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಹಂಚು ಕಾರ್ಮಿಕರ ಹೋರಾಟದ ಅನುಭವ ಆಧಾರದಲ್ಲಿ ಮತ್ತು ಜಿಲ್ಲೆಯ ಮುಖಂಡತ್ವದ ಸಹಾಯದಿಂದ ಈ ಜಿಲ್ಲೆಯಲ್ಲಿ ಕಾರ್ಮಿಕ ಸಂಘಟನೆ ಅದರೊಟ್ಟಿಗೆ ಹೋರಾಟಗಳು ಮುಂದುವರಿಸಿದು ಕೆಲವು ಸವಲತ್ತುಗಳು ಪಡೆದ ನಂತರ 1994ರಲ್ಲಿ ಉತ್ತರ ಕನ್ನಡ ಡಿಸ್ಟ್ರಿಕ್ಟ್ ಟೈಲ್ ವರ್ಕರ್ಸ್ ಯೂನಿಯನ್ ಪ್ರತ್ಯೇಕವಾಗಿ ರಚನೆಗೊಂಡು ಅದು ಸಿಐಟಿಯು ಕೇಂದ್ರ ಸಂಘಟನೆಗೆ ಸಂಯೋಜಿಸಲ್ಪಟ್ಟಿತು.

ಅಂದು ಸಂಘದ ಪ್ರಾರಂಭದಲ್ಲಿ 606 ಸದಸ್ಯತ್ವ ಇದ್ದದ್ದು ಇಂದು ಒಂದೂವರೆ ಸಾವಿರಕ್ಕೂ ಮಿಕ್ಕಿ ಸದಸ್ಯತ್ವ ಇದ್ದು ಇನ್ನೂ ಕೆಲವು ಪ್ರದೇಶದ ಸಂಘಟನೆ ವಿಸ್ತರಣೆಗೊಳ್ಳಲಿವೆ.

ಹಂಚು ಕಾರ್ಮಿಕರ ಹೋರಾಟದ ವಿಮರ್ಶೆ: 1990 ರಲ್ಲಿ ಹೊನ್ನಾವರ ತಾಲೂಕಿನ ಮಾವಿನಕುರ್ವಾದಲ್ಲಿ ಶರಾವತಿ ಟೈಲ್ಸ್‌ನಲ್ಲಿ ಅಂದಿನ ಮಾಲಕರಾದ ಮಣಿಪಾಲ ಕುಳಗಳ ವಿರುದ್ಧ 9 ತಿಂಗಳ ಸಮರಶೀಲ ಹೋರಾಟದ ನಂತರ ಶಾರದಾ ಟೈಲ್ಸ್ ಎಂಬ ಹೆಸರಿನಲ್ಲಿ ಕಾರ್ಖಾನೆ ಪುನರಾರಂಭಗೊಂಡು ಕಾರ್ಮಿಕರ ನ್ಯಾಯಯುತ ಹೋರಾಟಕ್ಕೆ ಜಯ ಸಿಕ್ಕಿ ಎಲ್ಲಾ ಸವಲತ್ತು ಪಡೆಯಲು ಸಾಧ್ಯವಾಗಿತ್ತು. ಇಲ್ಲಿಯ ಕಾರ್ಮಿಕರ ರಾಜಕೀಯ ಜ್ಞಾನ ಬೆಳೆಯುತ್ತಿರುವ ಆಧಾರದಲ್ಲಿ ರಾಜಕೀಯವಾಗಿ ಈ ಪ್ರದೇಶದಲ್ಲಿ ಬದಲಾವಣೆ ತರಲು ಸಾಧ್ಯವಾಯಿತು. ಈ ಮೂಲಕ ಮಾವಿನಕುರ್ವಾ ಗ್ರಾಮ ಪಂಚಾಯತ್ ಸಿಪಿಐ(ಎಂ) ತರಲು ಸಾಧ್ಯವಾಯಿತು ಮಾತ್ರವಲ್ಲ ವ್ಯವಸಾಯ ಸೇವಾ ಸಹಕಾರಿ ಸಂಘದಲ್ಲೂ ಎಲ್ಲಾ 11 ಸದಸ್ಯರು ಆಯ್ಕೆಯಾಗಿ ಅದರ ಆಡಳಿತ ಚುಕ್ಕಾಣಿ ಹಿಡಿಯಲು ಸಾಧ್ಯವಾಯಿತು. ಅದೇ ರೀತಿ ಜಿಲ್ಲೆಯ ವಿವಿಧ ಕಾರ್ಖಾನೆಯಲ್ಲಿ ಅನೇಕ ತಿಂಗಳು ಹೋರಾಟ ನಡೆಸಿ ಸಂಘಟನೆ ಯಶಸ್ಸು ಗಳಿಸಿದೆ. ರಾಜ್ಯ ಕೈಗಾರಿಕೆಯಲ್ಲಿ ದೊಡ್ಡ ಹೆಸರು ಪಡೆದ ಆರ್.ಎನ್.ಶೆಟ್ಟಿ ಮಾಲಕತ್ವದ ಮುರ್ಡೇಶ್ವರ ಟೈಲ್ಸ್ ಕಾರ್ಮಿಕರ 7 ತಿಂಗಳ ಹೋರಾಟ ಇತಿಹಾಸ ಪುಟ ಸೇರಿ ಐತಿಹಾಸಿಕ ಚಳುವಳಿ ಎಂದು ಗುರ್ತಿಸಲ್ಪಟ್ಟಿತು. ಮುರ್ಡೇಶ್ವರ ಪ್ರದೇಶದಲ್ಲಿ ಇವರ ವರ್ಚಸ್ಸು ಎಷ್ಟಿತ್ತೆಂದರೆ ಮುರ್ಡೇಶ್ವರ ದೇವರಿಗಿಂತ ಆರ್.ಎನ್.ಶೆಟ್ಟಿಗೆ ಕೈ ಮುಗಿಯುವ ಪರಿಪಾಠವಿದ್ದಿತು. ಅಂತಂಡಾ ಪ್ರದೇಶದಲ್ಲಿ ಪ್ರಥಮ ಬಾರಿಗೆ ಕೆಂಬಾವುಟದಲ್ಲಿ ಬೃಹತ್ ಚಳುವಳಿ ನಡೆಸಿ ಕೊನೆಗೂ ಕಾರ್ಮಿಕ ಚಳುವಳಿಗೆ ತಲೆಬಾಗುವಂತಾಯಿತು. ಈ ಹೋರಾಟದ ಸಂದರ್ಭದಲ್ಲಿ ಅಂದಿನ ಸಿಪಿಐ(ಎಂ) ಶಾಸಕ ಜಿ.ವಿ.ಶ್ರೀರಾಮರೆಡ್ಡಿ ಸಹ ಭಾಗವಹಿಸಿದ್ದರು. ಅದೇ ರೀತಿ ಚಿತ್ರಾಪುರದಲ್ಲಿ 7 ತಿಂಗಳ ಹೋರಾಟ ವೆಂಕ್ಟಾಪುರ ಬಿಟ್ಕೋ ಕಾರ್ಖಾನೆಯಲ್ಲಿ 2 ತಿಂಗಳ ಹೋರಾಟ ನಡೆದಿರುತ್ತದೆ. ಕಾಸರಗೋಡು ಸಹಕಾರಿ ಹಂಚಿನ ಕಾರ್ಖಾನೆಯಲ್ಲೂ ಹೋರಾಟ ನಡೆದಿದೆ. ಅನಂತವಾಡಿ ಪೃಥೀಶ ಟೈಲ್ ಕಾರ್ಮಿಕ ಹೋರಾಟ ರಾಜ್ಯ ಕಾರ್ಮಿಕ ಚಳುವಳಿಯಲ್ಲಿ ಗುರುತಿಸಲ್ಪಟ್ಟಿದ್ದು ಮಾಲಕರ ಪ್ರಚೋದನೆಯಿಂದ ಪೋಲೀಸರು ಏಕಾಏಕಿ ಲಾಠಿಚಾರ್ಜ್, ಅಶ್ರುವಾಯು, ಗಾಳಿಯಲ್ಲಿ ಗುಂಡು ಹಾರಿಸಿ ಚಳುವಳಿ ಮುರಿಯಲು ಪ್ರಯತ್ನಿಸಿದರೂ ಕಾರ್ಮಿಕ ಐಕ್ಯತೆಯಿಂದ ಹೋರಾಟ ಮುಂದುವರಿಸಿ ಈಗಲೂ ಕಾನೂನು ರೀತ್ಯಾ ಹೋರಾಟ ಮುಂದುವರಿಸಿದ್ದು ಈಗಲೂ ಅನೇಕ ಕಾರ್ಮಿಕ ಮುಖಂಡರು ಕ್ರಿಮಿನಲ್ ಮೊಕದ್ದಮೆ ಎದುರಿಸುತ್ತಿದ್ದಾರೆ. ನಮ್ಮ ಹಂಚು ಕಾರ್ಮಿಕ ಚಳುವಳಿಯನ್ನು ಬಂಡವಾಳ ಶಾಹಿ ರಾಜಕೀಯ ಶಕ್ತಿಗಳು ಗುರುತಿಸಿ ಈ ಚಳುವಳಿ ಬೆಳೆದು ರಾಜಕೀಯ ಶಕ್ತಿಯಾಗಿ ಹೊರಹೊಮ್ಮುತ್ತಿದೆ ಎಂದು ಇದನ್ನು ತಡೆಯಲು ವಿಫಲಯತ್ನ ನಡೆಸಿದರು. ಏನೆಲ್ಲಾ ಇದ್ದರೂ ಉತ್ತರ ಕನ್ನಡ ಜಿಲ್ಲೆಯಲ್ಲಿ ಹಂಚು ಕಾರ್ಮಿಕರ ಚಳುವಳಿ ಬಲಿಷ್ಟವಾಗಿ ಬೆಳೆದುಬಂದಿದ್ದು ಇನ್ನಷ್ಟು ವಿಸ್ತರಣೆಗೊಂಡು ಜಿಲ್ಲೆಯ ಪ್ರಮುಖ ಸಂಘಟನಾ ರಾಜಕೀಯ ಶಕ್ತಿಯಾಗಿ ರೂಪಾಂತರಗೊಂಡಿತು. ಈ ನಿಟ್ಟಿನಲ್ಲಿ ಕಾರ್ಮಿಕ ಸಂಘದ 5ನೇ ವಾರ್ಷಿಕೋತ್ಸವ ಸಮಾರಂಭ ನಡೆಯಿತು.

ಕೇಂದ್ರ ಬಿಜೆಪಿ ಸಮಿಶ್ರ ಸರ್ಕಾರದ ಜನವಿರೋಧಿ ನೀತಿಗೆ ಖಂಡನೆ

ಕೇಂದ್ರದಲ್ಲಿ ಪುನಃ ಬಿಜೆಪಿ ನೇತೃತ್ವದ ಸಮಿಶ್ರ ಸರ್ಕಾರ ಅಧಿಕಾರಕ್ಕೆ ಬರುವಾಗಲೇ ಶೇ 40 ರಷ್ಟು ಡೀಸೆಲ್ ಬೆಲೆ ಹೆಚ್ಚಿಸಿ ಅದರಿಂದಾಗಿ ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆಯಾಗುವಂತ ಪರಿಸ್ಥಿತಿ ಬಂದಿದೆ. ಕಾರ್ಮಿಕರು ಆರ್ಥಿಕ ಸವಲತ್ತುಗಳನ್ನು ಪಡೆಯುವ ಬದಲು ಒಂದೊಂದಾಗಿ ಕಳೆದುಕೊಳ್ಳುವ ಪರಿಸ್ಥಿತಿ ಉಂಟಾಗಿ ಕಾರ್ಮಿಕರು ತೀರ ಗಂಬೀರ ಪರಿಸ್ಥಿತಿ ಎದುರಿಸುವ ಸ್ಥಿತಿ ಬಂದಿದೆ. ಈ ಪರಿಸ್ಥಿತಿಯನ್ನು ಒಂದು ಸವಾಲಾಗಿ ಕಾರ್ಮಿಕ ವರ್ಗ ತೆಗೆದುಕೊಂಡು ಮುಂಬರುವ ದಿನದಲ್ಲಿ ಇತರ ಜನಸಾಮಾನ್ಯರ ಸಹಕಾರ ಪಡೆದು ಇಡೀ ದೇಶಾದ್ಯಂತ ಚಳುವಳಿ ಮಾಡುವ ತುರ್ತು ಅವಶ್ಯಕತೆ ಇದೆ ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಕೆ.ಶಂಕರ್ ಕಾರ್ಮಿಕರಿಗೆ ಕರೆ ನೀಡಿದರು. ಅವರು ಉತ್ತರ ಕನ್ನಡ ಜಿಲ್ಲಾ ಹಂಚು ಕಾರ್ಮಿಕರ ಸಂಘದ 5ನೇ ವಾರ್ಷಿಕ ಮಹಾಸಭೆಯ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಿದ್ದರು. ಇನ್ನೋರ್ವ ಮುಖ್ಯ ಅತಿಥಿ ಸಿಐಟಿಯು ರಾಜ್ಯ ಮುಖಂಡರೂ ಆದ ಸಿ.ನಾರಾಯಣ ಮಾತನಾಡಿ ನಮ್ಮ ಸೈದ್ಧಾಂತಿಕ ತಿಳುವಳಿಕೆ ಹೆಚ್ಚಿಸಿಕೊಂಡು ರಾಜಕೀಯ ಪ್ರಜ್ಞೆ, ಬೆಳೆಸಿಕೊಂಡು ನಾಯಕತ್ವ ಗುಣ ಲಕ್ಷಣ ಹೊಂದುತ್ತಾ ಕೆಲವು ಕೋಮುವಾದಿ ಶಕ್ತಿಗಳು ಕಾರ್ಮಿಕರ ಐಕ್ಯತೆ ಒಡೆಯಲು ಕುತಂತ್ರ ನಡೆಸುವುದನ್ನು ಹಿಮ್ಮೆಟ್ಟಿಸಬೇಕಾಗಿದೆ. ವಿದ್ಯಾರ್ಥಿ-ಯುವಜನ ರೈತ ಕೃಷಿ ಕೂಲಿಕಾರರ ನೇತೃತ್ವದ ಹೋರಾಟಗಳಿಗೆ ನಾವು ಮುಂಚೂಣಿಯಲ್ಲಿರಬೇಕೆಂದರು ಡಿವೈಎಫ್ಐ ರಾಜ್ಯಾಧ್ಯಕ್ಷರಾದ ಶಾಂತರಾಂ ನಾಯಕ್.

ಎರಡು ಸಾವಿರಕ್ಕೂ ಹೆಚ್ಚಿನ ಕಾರ್ಮಿಕರು ನಗರದಲ್ಲಿ ಬೃಹತ್ ಮೆರವಣಿಗೆ ನಡೆಸಿ, ಬಹಿರಂಗ ಸಭೆ ನಡೆಸಿದರು. ಇದೇ ವೇಳೆಯಲ್ಲಿ ಕಾರ್ಮಿಕರ ಅನುಕೂಲಕ್ಕಾಗಿ ಕೆಲವು ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು. ಸಮಾರಂಭ ಅಧ್ಯಕ್ಷತೆಯನ್ನು ಸುಭಾಷ ಕೊಪ್ಪಿಕರ ವಹಿಸಿದ್ದರು.

ಖಾಸಗೀಕರಣ .... ಸ್ವಾತಂತ್ರ್ಯ ಹರಣ

ಪುಟ 7 ರಿಂದ

ದೇಶವನ್ನು ದೊಡ್ಡ ಆರ್ಥಿಕ ಬಿಕ್ಕಟ್ಟಿಗೆ ಕಾರಣವಾಯಿತು. ಅಭಿವೃದ್ಧಿ ಕುಂಠಿತವಾಯಿತು. ಎನ್ನುವುದು ಪ್ರತ್ಯೇಕ ವಿಚಾರ. ಆದರೆ ಹೀಗೆ ಸಾರ್ವಜನಿಕ ಹಣ ಸಾರ್ವಜನಿಕರ ಸ್ವತ್ತಾಗಲು ಅವಕಾಶವಾದದ್ದು ಕೋಟಿ ಕೋಟಿ ರೂಗಳ ಆಸ್ತಿ ಮೌಲ್ಯವಿರುವ ಸಾರ್ವಜನಿಕ ಉದ್ದಿಮೆಗಳು ತಲೆಯೆತ್ತಿನಿಂತದ್ದು, ದೇಶದ ಹೆಮ್ಮೆ ಎನಿಸಿದ್ದು, ಕೋಟ್ಯಾಂತರ ಬಡವರಿಗೆ, ದುರ್ಬಲವರ್ಗದವರಿಗೆ ಶಿಕ್ಷಣ, ಆರೋಗ್ಯ ನೀಡುವ ಲಕ್ಷಾಂತರ ಕೋಟಿ ಮೌಲ್ಯದ ಶಾಲೆ, ಆಸ್ಪತ್ರೆ, ರಸ್ತೆ, ಸೇತುವೆ, ಕುಡಿಯುವ ನೀರಿನ ಯೋಜನೆ ಮುಂತಾದ ಸಾರ್ವಜನಿಕ ಆಸ್ತಿ ನಿರ್ಮಾಣವಾದದ್ದು ಖಾಸಗಿ ಬಂಡವಾಳಶಾಹಿಗಳ ಕಣ್ಣು ಕೆಂಪಗಾಗಿಸಿತು. ಈ ಆಸ್ತಿ ತಮ್ಮ ಹಿಡಿತದಲ್ಲಿಲ್ಲವಲ್ಲಾ ಎಂಬ ಹೊಟ್ಟೆಯುರಿ ಒಂದುಕಡೆಯಾದರೆ, ತಾವು ಲಾಭ, ದುರ್ಲಾಭ ಸಂಪಾದಿಸುವ ಮಾರ್ಗಗಳಿಗೆ ಈ ಸಾರ್ವಜನಿಕ ವಲಯ ಒಂದು ದೊಡ್ಡ ಅಡ್ಡಿಯಾಗಿದೆಯಲ್ಲ ಎಂಬ ದುಃಖ (!) ಮತ್ತೊಂದೆಡೆ. ಯೋಜನೆಮಾಡಿ-ಚೆನ್ನಾಗಿ ನಡೆಯುವ ಒಂದು ಸರ್ಕಾರಿ ಶಾಲೆ, ಇಂಜಿನಿಯರಿಂಗ್, ಮೆಡಿಕಲ್ ಕಾಲೇಜು, ನರ್ಸಿಂಗ್ ಬಿ.ಇ.ಡಿ. ಡಿಪ್ಲೊಮಾ ಸಂಸ್ಥೆಯೆಂದರೆ ಎಷ್ಟು ಕ್ಯಾಂಪಿಟೇಷನ್, ಡೋನೇಷನ್ ಹಣದೋಚುವುದು ತಪ್ಪಿಹೋಗುತ್ತದೆ. ಹಾಗೇ ಒಂದು ಚೆನ್ನಾಗಿ ನಡೆಯುವ ಆಸ್ಪತ್ರೆಯಿಂದ ಖಾಸಗಿ ನರ್ಸಿಂಗ್ ಹೋಂ ತೆರೆದು ಹಣ ಮಾಡಬಯಸುವವರಿಗೆ ಎಷ್ಟೊಂದು ನಷ್ಟವುಂಟುಮಾಡುತ್ತದೆ? ಈ ಸಣ್ಣ ಸಂಸ್ಥೆಗಳೇ ಇಷ್ಟು ಹೊಟ್ಟೆ ಉರಿಸಿದರೆ ಇನ್ನು ಬೃಹತ್ ಕೈಗಾರಿಕೆಗಳು ಇನ್ನ ಎಷ್ಟು ಹೊಟ್ಟೆ ಉರಿಸಿರಬಹುದು.

ಇದರಿಂದ ಸಾರ್ವಜನಿಕರ ವಲಯುವನ್ನು ಗುಳುಂಮಾಡುವ ಯೋಚನೆ ಮಾಡಿದ ಈ ಬಂಡವಾಳಗಾರರು ನಿರಂತರವಾಗಿ ಸಾರ್ವಜನಿಕ ವಲಯದ ಮೇಲೆ ಅಪಪ್ರಚಾರದ ಧಾಳಿ ಆರಂಭಿಸಿದರು. ತಮ್ಮ ಹಿಡಿತದಲ್ಲಿರುವ ಪತ್ರಿಕೆ ಹಾಗೂ ಇತರ ಮಾಧ್ಯಮಗಳನ್ನು ಬೆಳಸಿದರು. ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ಇಷ್ಟು ದೊಡ್ಡ ದೇಶವನ್ನು ದೋಚುವುದು ತಪ್ಪಿಹೋಯಿತೆ ಎಂದು ಮರುಗುತ್ತಿದ್ದ, ನಮ್ಮ ಹೆಮ್ಮೆಯ ಸಾರ್ವಜನಿಕ ಉದ್ದಿಮೆಗಳು ಈ ದೇಶದಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಮಾರುಕಟ್ಟೆಯನ್ನು ಕಿತ್ತುಕೊಂಡಿರುವ ಬಗ್ಗೆ ಕರುಬುತ್ತಿದ್ದ ವಿದೇಶಿ ಬಂಡವಾಳಗಾರರು ಇದೇ ಸುವರ್ಣಾವಕಾಶ ವೆಂದು ದೇಶದ ಬಂಡವಾಳಗಾರರ ಜೊತೆಗೂಡಿದರು. ನಮ್ಮ ದೇಶದಲ್ಲಿನ ಸಾರ್ವಜನಿಕ ವಲಯದ ಬೆಳವಣಿಗೆಯನ್ನು ತಡೆಹಿಡಿಯಲು ಅದನ್ನು ತಮ್ಮ ಕೈವಶಮಾಡಿಕೊಳ್ಳಲು ಹಲವು ತಂತ್ರಗಳನ್ನು ರೂಪಿಸಿದರು. ಅದರಲ್ಲಿ ಬಹಳ ಮುಖ್ಯವಾದದ್ದು ಸಾರ್ವಜನಿಕ ವಲಯದ ಜೀವಾಳವಾದ ಸಾರ್ವಜನಿಕ ಹಣ.

ಸಾರ್ವಜನಿಕ ಹಣವೆಂಬುದು ಒಂದು ದೊಡ್ಡಸಾಗರ. ಅದು ಇಂದು ಭಾಗಶಃ ಸಾರ್ವಜನಿಕ ವಲಯಕ್ಕಾಗಿ ಬಳಸಲಾಗುತ್ತಿರುವುದನ್ನು ನಿಲ್ಲಿಸಿದರೆ ಈ ವಲಯದ ಬೆಳವಣಿಗೆ ತಾನಾಗಿಯೇ ನಿಲ್ಲುತ್ತದೆ. ಮಾರುಕಟ್ಟೆಯ ಸ್ಪರ್ಧೆಯಲ್ಲಿ ಸೋಲುತ್ತವೆ. ಅದರ ಸೇವೆಗಳು ಕೆಟ್ಟಹೆಸರನ್ನು ಹೊತ್ತುಕೊಳ್ಳುತ್ತವೆ, ಸಾರ್ವಜನಿಕರಿಂದ ದೂಷಣೆಗೆ ಒಳಗಾಗುತ್ತವೆ. ಇದು ಒಂದು ಕಡೆ ಮತ್ತೊಂದು ಕಡೆ ಈ ಅಪಾರ ಹಣ ಪೂರ್ಣವಾಗಿ ಖಾಸಗಿ ಬಂಡವಾಳಗಾರರು ತಮ್ಮ ಸ್ವತ್ತು, ಲಾಭವನ್ನು ಹೆಚ್ಚಿಸಿಕೊಳ್ಳಲು ಸಿಗುತ್ತದೆ. ಇದು ನಮ್ಮ ದೇಶದ ಖಾಸಗಿ ಬಂಡವಾಳಗಾರರ ಯೋಚನೆಯಾದರೆ, ದೇಶದ ಮಾರುಕಟ್ಟೆಯನ್ನು ಕಬಳಿಸಲು ಸಿದ್ಧರಾಗಿ ನಿಂತಿರುವ ವಿದೇಶಿ ಬಂಡವಾಳಗಾರಿಗೆ ನಮ್ಮ ದೇಶದಲ್ಲಿ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಬೇಕಾದ ಬಂಡವಾಳವನ್ನು ವಿದೇಶದಿಂದ ತರುವುದಕ್ಕೆ ಬದಲಾಗಿ ಇದೇ ದೇಶದಲ್ಲಿಯೇ ಸಂಗ್ರಹಿಸುವ ಯೋಚನೆ. ಹೊರದೇಶಗಳ ಈ ಬ್ಯಾಂಕ್‌ಗಳು ಈಗಾಗಲೇ ಹಲವು ವರ್ಷಗಳಿಂದ ನಮ್ಮ ದೇಶದಲ್ಲಿ ವ್ಯವಹಾರ ನಡೆಸಿವೆ. ಹರ್ಷದ್ ಮೆಹ್ತಾನಂತಹ ಚೋರರಿಗೆ ಉತ್ತೇಜನ ನೀಡಿದ್ದೇ ಈ ಬ್ಯಾಂಕುಗಳು, ಅವರು ಇಲ್ಲಿಯವರೆಗೆ ತಮ್ಮ ದೇಶದ ಬ್ಯಾಂಕ್‌ಗಳಲ್ಲಿ ಸಂಗ್ರಹವಾದ ಠೇವಣಿ ಹಣದಲ್ಲಿ ಎಷ್ಟು ಹಣವನ್ನು ತಂದು ನಮ್ಮ ದೇಶದಲ್ಲಿ ಸಾಲಕೊಟ್ಟಿದ್ದಾರೆ? ಎಷ್ಟು ಹಣವನ್ನು ನಮ್ಮ ದೇಶದ ಸಾಮಾನ್ಯ ಜನತೆಯ ಉದ್ಧಾರಕ್ಕಾಗಿ ಬಳಸಿದ್ದಾರೆ? ನಮ್ಮ ದೇಶದಿಂದ ಲಾಭದ ರೂಪದಲ್ಲಿ ಎಷ್ಟು ಹಣವನ್ನು ತಮ್ಮ ದೇಶಕ್ಕೆ ಒಯ್ದಿದ್ದಾರೆ? ಈ ಲೆಕ್ಕವನ್ನು ಸರ್ಕಾರ ನೀಡಲಿ.

ಅದೇ ರೀತಿ ವಿಮಾಕಂಪನಿಗಳು. ಈಗಾಗಲೇ 12ಕ್ಕಿಂತ ಹೆಚ್ಚು ವಿದೇಶಿ ಕಂಪನಿಗಳು ನಮ್ಮ ದೇಶದ ಕೆಲವು ಬಂಡವಾಳಗಾರರನ್ನು ಹಿಡಿದು ಜಂಟಿ ಒಪ್ಪಂದಗಳನ್ನು ಮಾಡಿಕೊಂಡು ಕಂಪನಿಗಳನ್ನು ಭಾರತದಲ್ಲಿ ನೊಂದಾಯಿಸಿದ್ದಾರೆ. ಸಂಸತ್ತಿನ ಮುಂದಿರುವ ವಿಮಾ ಪ್ರಾಧಿಕಾರ ಕಾನೂನು ಅಂಗೀಕಾರಕ್ಕಾಗಿ ಒತ್ತಡ ಹಾಕುತ್ತಿವೆ. ಅಂಗೀಕಾರವಾದ ಕೂಡಲೇ ರಂಗಕ್ಕಿಳಿಯಲು ಸನ್ನದ್ಧವಾಗಿವೆ. ಈ ಕಂಪನಿಗಳು ವಿಶ್ವದ ಅನೇಕ ದೇಶಗಳಲಲ್ಲಿ ವ್ಯವಹಾರ ಮಾಡುತ್ತಿವೆ. ಈ ದೇಶಗಳಲ್ಲಿ ಎಷ್ಟು ಹಣವನ್ನು ವಿದೇಶದಿಂದ ತಂದು ತೊಡಗಿಸಿವೆ ಎಲ್ಲಿಯಾದರೂ ಆ ಉದಾಹರಣೆ ಉಂಟೆ.

ಹೀಗಾಗಿ ನಮ್ಮ ದೇಶದ ಅಭಿವೃದ್ದಿಗಾಗಿ ವಿಮೆ ಬ್ಯಾಂಕ್ ಖಾಸಗೀಕರಣ ಎಂಬ ಮಾತಿನಲ್ಲಿ ಎಷ್ಟು ಹುರುಳಿದೆ? ಬ್ರಿಟಿಷರು ನಮ್ಮನ್ನು ನಾಗರೀಕರನ್ನಾಗಿ ಮಾಡುವ ಹೊರೆಹೊತ್ತು ಬಂದವರು ಮಾಡಿದ್ದೇನು? ಹೀಗೆ ದೇಶದ ಸಾರ್ವಜನಿಕ ಹಣಕಾಸಿನ ವಲಯವನ್ನು ದೇಶೀ ಖಾಸಗಿ ಸ್ವತ್ತನ್ನು ಹಾಗೂ ವಿದೇಶಿ ಸ್ವತ್ತನ್ನು ಬೆಳೆಸುವುದಕ್ಕಾಗಿ ಅವರು ರೂಪಿಸಿದ ತಂತ್ರಗಳಲ್ಲಿ ಕೆಲವು.

1. ಸರ್ಕಾರಗಳು ಉಪಯೋಗಿಸುವ ಸಾರ್ವಜನಿಕ ಹಣದ ಪಾಲನ್ನು ಕಡಿತಗೊಳಿಸುವುದು. ಇದಕ್ಕಾಗಿ ತೆರಿಗೆಗಳ ಕಡಿತ ಬಂಡವಾಳದಾರರಿಗೆ ಉದಾರ ಕೊಡುಗೆಗಳು, ಬ್ಯಾಂಕ್‌ಗಳ ಠೇವಣಿ ಹಣದ ಸ್ವಲ್ಪ ಭಾಗವನ್ನು ಉಪಯೋಗಿಸುವುದರಲ್ಲಿ ಕಡಿತ.
2. ಸಾರ್ವಜನಿಕ ಉಳಿತಾಯುವನ್ನು ಬ್ಯಾಂಕು, ವಿಮೆಗಳಿಂದ ನೇರ ಬಂಡವಾಳದಾರರಿಗೆ ಸಿಗುವದಾರಿಗೆ ತಿರುಗಿಸುವುದು, ಅದಕ್ಕಾಗಿ ಶೇರು ಮಾರುಕಟ್ಟೆಯ ಅಭಿವೃದ್ಧಿ, ಅದಕ್ಕಾಗಿ ಕಾನೂನುಗಳ ಸಡಿಲಿಕೆ, ತೆರಿಗೆ ವಿನಾಯತಿಗಳು, ಹರ್ಷದ್ ಮೆಹ್ತಾರಂತವರಿಗೆ ಉತ್ತೇಜನ ನೀಡಿ ಬಾಯಲ್ಲಿ ಜೊಲ್ಲು ಸುರಿಯುವಂತೆ ಶೇರು ಬೆಲೆ ಹೆಚ್ಚಿಸಿ ಸಾರ್ವಜನಿಕರನ್ನು ಈ ಕಡೆಗೆ ಸೆಳೆಯುವುದು.
3. ವಿಮೆಯಲ್ಲಿ ಖಾಸಗಿ ವಿದೇಶಿ ಕಂಪನಿಗಳ ಪ್ರವೇಶ.
4. ಬ್ಯಾಂಕ್ ರಂಗದಲ್ಲಿ ವಿದೇಶಿ ಕಂಪನಿಗಳ ವಿಸ್ತರಣೆಗೆ ಅವಕಾಶ, ಸಾರ್ವಜನಿಕ ವಲಯ ಬ್ಯಾಂಕ್‌ಗಳ ಖಾಸಗೀಕರಣ (ಶೇರುಮಾರುಕಟ್ಟೆಯ ಮೂಲಕ) ಜೊತ್ತೆಗೆ, ಅಂಚೆ ಕಛೇರಿ ಮೊದಲಾದುವಗಳ ಮೂಲಕ ಸಣ್ಣ ಉಳಿತಾಯಕ್ಕೆ ಇರುವ ಅನುಕೂಲ, ಪ್ರೋತ್ಸಾಹಗಳನ್ನು ಹಿಂದೆತೆಗೆದುಕೊಳ್ಳುವುದು.

ಈ ಮೂಲಕ 7 ಲಕ್ಷ ಕೋಟಿರೂಗಳ ಬ್ಯಾಂಕ್ ಠೇವಣಿಗಳ ಮೇಲೆ, 2 ಲಕ್ಷ ಕೋಟಿರೂ.ಗಳ ವಿಮಾರಂಗದ ಮೇಲೆ, 96,000 ಕೋಟಿ ರೂಗಳು ಬ್ಯಾಂಕುಗಳಿಂದ ಸರ್ಕಾರಕ್ಕೆ ಸಿಗದಂತೆ ಮಾಡುವ ಮೂಲಕ ಒಟ್ಟು 9 ಲಕ್ಷ ಕೋಟಿರೂಗಳ ದೊಡ್ಡ ಹಣದ ಖಜಾನೆಯನ್ನು ಕೈವಶಮಾಡಿಕೊಳ್ಳಲು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳು ಯತ್ನ ನಡೆಸಿದ್ದಾರೆ. ನಿಧಾನವಾಗಿ ಅವರ ಹಿಡಿತಕ್ಕೆ ಹಣಸಿಕ್ಕಿ ಕೊಂಡರೆ ಅದರ ಲಾಭ ವಿದೇಶಿ ಕಂಪನಿಗಳ ಸ್ವತ್ತು ಲಾಭಗಳನ್ನು ಬೆಳಿಸುವುದಕ್ಕೆ ಹಾಗೂ ಅವರ ಮರ್ಜಿಕಾಯುವ ಕೆಲವು ದೇಶಿ ಶ್ರೀಮಂತರ ಸಂಪತ್ತಿನ ವೃದ್ಧಿಗೆ.

ಇದರಿಂದ ಒಟ್ಟಿನಲ್ಲಿ ಸಾರ್ವಜನಿಕ ಉದ್ದಿಮೆಗಳ ಸಮೇತ ಸಾರ್ವಜನಿಕ ವಲಯದ ನಾಶ, ಅಥವಾ ಕುಗ್ಗಿಸುವುದು ಈ ವಲಯದಿಂದ ಒಟ್ಟಾರೆ ಸಾರ್ವಜನಿಕರಿಗೆ, ಸಮಾಜದ ಕೆಳವರ್ಗಗಳಿಗೆ, ಹಿಂದುಳಿದ ಪ್ರದೇಶಗಳಿಗೆ ಸಿಗುತ್ತಿದ್ದ ಆದ್ಯತೆ ಅನುಕೂಲಗಳ ಕಡಿತ. ಸರ್ಕಾರ ಸ್ಥಾಪಿಸಿದ ಸಾರ್ವಜನಿಕ ಒಡೆತನದ ಉದ್ದಿಮೆ, ಸೇವೆಗಳನ್ನು ಹಿಂದುಳಿದ ಪ್ರದೇಶಗಳಿಗೆ, ಗಿರಿಜನರ ಅಭಿವೃದ್ದಿಗೆ ಬಲವಂತವಾಗಿ ಯಾದರೂ ತೊಡಗಿಸ ಬಹುದು ಜನರ ಒತ್ತಡ ಸರ್ಕಾರದ ಮೇಲೆ, ಸರ್ಕಾರದ ಒತ್ತಡ ಈ ಸಾರ್ವಜನಿಕವಲಯದ ಉದ್ದಿಮೆಯ ಮೇಲೆ. ಹೀಗಾಗಿ ಸಾರ್ವಜನಿಕರ ಹಣದಿಂದ ನಿರ್ಮಾಣವಾದ ಈ ವಲಯ ಅಂಶಿಕವಾಗಿಯಾದರೂ ಪ್ರಜಾಪ್ರಭುತ್ವ ವ್ಯವಸ್ಥೆಯ ಪಂಚವಾರ್ಷಿಕ ಯೋಜನೆಗಳ ಅನುಗುಣವಾಗಿ ಹಣ ತೊಡಗಿಸುತ್ತವೆ.

ಆದರೆ ವಿದೇಶಿ ಕಂಪನಿಗಳು ನಮ್ಮ ದೇಶೀಯ ಬಂಡವಾಳಗಾರರ ಕಂಪನಿಗಳು ಕೇವಲ ಲಾಭ, ದುರ್ಲಾಭ ಮಾತ್ರವೇ ಗುರಿಯಾಗಿರುವವರಿಂದ ಈ ದೃಷ್ಟಿಕೋನವನ್ನು ನಿರೀಕ್ಷಿಸಲು ಸಾಧ್ಯವೇ? ಹಳ್ಳಿಗಾಡಿನಲ್ಲಿ ಗುಡ್ಡಗಾಡಿನಲ್ಲಿ ಖಾಸಗಿ ನರ್ಸಿಂಗ್ ಹೊಂ, ಶಾಲೆಗಳನ್ನು ಖಾಸಗಿಯವರು ನಿರ್ಮಿಸಿದ ರಸ್ತೆ ಸುಂಕ, ಸೇತುವೆ ಸುಂಕ, ವಸೂಲುಮಾಡುವ ರಸ್ತೆ, ಸೇತುವೆಗಳನ್ನು ನಿರೀಕ್ಷಿಸಲು ಸಾಧ್ಯವೆ. ಇತಹ ಕಡೆ ಬೆಂಗಳೂರಿನಲ್ಲಿ 5 ಕಿ.ಮಿ ಮೇಲು ಸೇತುವೆರಸ್ತೆ (ಫ್ಲೈಓವರ್) ಯನ್ನು 96 ಕೋಟಿರೂ ವೆಚ್ಚದಲ್ಲಿ ನಿರ್ಮಿಸಲು ಧಾವಿಸುವ ಲಾರ್ಸೆಸ್ ಮತ್ತು ಟೂಬ್ರೋ (L&T) ಎಂಬ ವಿದೇಶಿ ಕಂಪನಿ ಮಲೆನಾಡಿನ ಸೇತುವೆಯನ್ನು ಕಟ್ಟಲು ಬರುವುದೇ? ಬೆಂಗಳೂರು - ಮೈಸೂರು ಮಹಾ ಹೆದ್ದಾರಿ ನಿರ್ಮಿಸಿ ಅದರಲ್ಲಿ ರಸ್ತೆ ಸುಂಕ ವಸೂಲಿ ಮಾಡಿ, ರಸ್ತೆ ಪಕ್ಕದ ಜಾಗಗಳನ್ನು ಮಾಡಿ ಲಾಭಗಳಿಸಲು ಆತುರಪಡುತ್ತಿರುವ ವಿದೇಶಿ ಕಂಪನಿಗಳು ಗ್ರಾಮೀಣ ರಸ್ತೆಯನ್ನು ನಿರ್ಮಿಸಲು ಬರುತ್ತವೆಯೇ? ಹಾಗೇಯೇ ಹಣಕಾಸುರಂಗದಲ್ಲಿ ಹಳ್ಳಿಗಳಲ್ಲಿ ಬ್ಯಾಂಕ್ ಶಾಖೆಗಳನ್ನು ಇವರು ತೆರೆಯುತ್ತಾರೆಯೇ? ಇಂದು ಜೀವವಿಮೆಯಲ್ಲಿ ಶೇ. 40 ಭಾಗ ಹಳ್ಳಿಗಾಡಿನ ಜನರ ಜೀವರಕ್ಷಣೆಗಾಗಿ ಮುಡಿಪಾದದ್ದು. ಮತ್ತು ಹೆಚ್ಚು ಲಾಭವಿಲ್ಲದ್ದು, ನಷ್ಟವನ್ನೂ ಉಂಟುಮಾಡುವಂತಹದ್ದು.

ಇಂತಹ ಜನರ ಜೀವ ರಕ್ಷಣೆ ಇನ್ನು ಯಾರ ಹೊಣೆ? ಕೃಷಿ ಕೂಲಿಕಾರರ ಸಾವಿಗೆ 2000 ರೂ ನಿಂದ 10,000ರೂ ವರೆಗೆ ಕೊಡುವವರು ಯಾರು? ಈಗ ಜೀವವಿಮೆ ನಿಗಮವಾಗಲಿ, ಬ್ಯಾಂಕ್‌ಗಳಾಗಲೀ ಗ್ರಾಮೀಣ ಪ್ರದೇಶದ ವ್ಯವಹಾರದ ನಷ್ಟವನ್ನು ನಗರ ಪ್ರದೇಶದ ಕೈಗಾರಿಕೆ, ವ್ಯಾಪಾರದ ಸಂಸ್ಥೆಗಳೊಡನೆ ಮಾಡುವ ವ್ಯವಹಾರದಿಂದ ತೂಗಿಸುತ್ತಿದ್ದಾರೆ. ಮುಂದೆ ಈ ಲಾಭದಾಯಕ ವ್ಯವಹಾರವನ್ನು ವಿದೇಶಿ ಕಂಪನಿಗಳು ದೇಶೀಯ ಕಂಪನಿಗಳನ್ನು ಮುಳುಗಿಸಲೆಂದೇ ಪ್ರೀಮಿಯಂ ಅನ್ನು ವಿಪರೀತ ತಗ್ಗಿಸಿ ಕೈವಶಮಾಡಿಕೊಂಡರೆ ವಿಮೆ ಮಾಡಲು ಈ ವಿದೇಶಿ ಕಂಪನಿಗಳು ಮುಂದೆ ಬರುತ್ತವೆಯೇ? ಕೋಟ್ಯಾಂತರ ಬಡಜನರ ಜೀವಗಳಿಗೆ ರಕ್ಷಣೆ ಎಲ್ಲಿ? ನಮ್ಮ ದೇಶದ ಬೆಳೆಗಳ ವಿಮೆ ಬ್ಯಾಂಕ್‌ಗಳ ಖಾಸಗೀಕರಣ ಹೂಗೂ ಅದರ ವಿರುದ್ದ ಹೋರಾಟ ಎಂದರೆ ಅದು ಕೇವಲ ವಿಮೆ, ಬ್ಯಾಂಕುಗಳ ಉದ್ಯೋಗಿಗಳ ಉದ್ಯೋಗದ ರಕ್ಷಣೆಯ ಪ್ರಶ್ನೆ, ಈ ಸಾರ್ವಜನಿಕ ವಲಯದ ಸಂಸ್ಥೆಗಳ ರಕ್ಷಣೆ ಮಾತ್ರವೇ ಅಲ್ಲ. ಅದು ಸುಮಾರು 9 ಲಕ್ಷ ಕೋಟಿ ರೂಗಳ ಮೇಲಿನ ಒಡೆತನದ ಪ್ರಶ್ನೆ. ನಮ್ಮ ದೇಶದ ಈ ಹಣ ನಮ್ಮ ದೇಶದ ಸಂಪತ್ತಿನ ವೃದ್ಧಿಗಾಗಿ ನಮ್ಮ ಸಾರ್ವಜನಿಕ ಹಿತದ ಜನತೆಯ ಸಮಗ್ರಹಿತಕ್ಕಾಗಿ ಬಳಕೆಯಾಗಬೇಕೋ ಅಥವಾ ನಮ್ಮ ದೇಶದಲ್ಲಿ ವಿದೇಶದ ಸಂಪತ್ತಿನ ವೃದ್ಧಿಗೆ, ಆ ಮೂಲಕ ನಮ್ಮ ದೇಶದ ದೋಚುವಿಕೆಗೆ ಹಾಗೂ ನಮ್ಮ ಸ್ವಾತಂತ್ರ್ಯ ಹರಣಕ್ಕೆ ಆಧಾರವಾಗಬೇಕೋ ಎಂಬ ಪ್ರಶ್ನೆ. ಇದು ವಿದೇಶಿ ಬಂಡವಾಳಗಾರರು ಹಾಗೂ ಅವರ ಜೊತೆಗೂಡಿರುವ ನಮ್ಮ ದೇಶದ ಬಂಡವಾಳಗಾರರು ಹಾಗೂ ಈ ದೇಶದ ಸಾಮಾನ್ಯ ಜನತೆಯ ನಡುವಿನ ಸಂಘರ್ಷ-ವರ್ಗಸಂಘರ್ಷ. ನಮ್ಮ ಹಣ ನಮ್ಮ ದೇಶದಲ್ಲಿಯೇ ವಿದೇಶಿ ಕಂಪನಿಗಳ ಸ್ವತ್ತಾದರೆ ನಮ್ಮ ಆಸೆ, ನುಡಿ, ವಿಚಾರಗಳು ವಿದೇಶದ ಮಹಾನ್ ಬಂಡವಾಳಗಾರರ ತುತ್ತಾಗದೇ ಉಳಿಯುವುವೆ? ನಾವಲ್ಲ ತೊತ್ತು ಎಂದು ಹೆಮ್ಮೆಯಿಂದ ಘೋಷಿಸುವ ಸ್ಥೈರ್ಯ ಉಳಿಯುವುದೇ?

ಅಂದು ನಾವು ತೊಲಗು ತೊಲಗಾಚೆ ಬಿಳಿಯದೊಗಲ ಸುಲಿಗೆಗಾರ ಎಂದು ಸಾರಿದ್ದವು. ಆದರೆ ಇಂದು ನಮ್ಮ ದೇಶದ ಆಳುವ ಸರ್ಕಾರಗಳೇ ಅವರನ್ನು ಆಮಂತ್ರಿಸುತ್ತಿರುವಾಗ ತೊಲಗಿಸಬೇಕಾದ್ದು ಯಾರನ್ನು? ವಿದೇಶಿ ಬಂಡವಾಳಗಾರರ ಜೊತೆಗೂಡಿರುವ ಅವರಿಗೆ ದೇಶದ ಕೀಲಿಕೈಗಳನ್ನು ಒಂದೊಂದಾಗಿ ಒಪ್ಪಿಸುತ್ತಿರುವ ನಮ್ಮ ಆಳುವ ವರ್ಗವನ್ನು ಮೊದಲು ತೊಲಗಿಸ ಬೇಕಾಗಿದೆ. ಅದಕ್ಕಾಗಿ ಚುನಾವಣೆಗಳ ಮೂಲಕ ನಮ್ಮ ದೇಶದ ಜನತೆ ಪ್ರಯತ್ನಿಸಿ ನಿರಾಶರಾಗಿದ್ದಾರೆ. ಮತ್ತೆ ಮತ್ತೆ ಸರ್ಕಾರಗಳನ್ನು ತೊಲಗಿಸಿದರೂ ಮತ್ತೆ ಅವೇ ನೀತಿಗಳು ಮತ್ತಷ್ಟು ರಭಸದಿಂದ ಬರುತ್ತಿರುವುದನ್ನು ಕಂಡು ಗೊಂದಲಕ್ಕೊಳಗಾಗಿದ್ದಾರೆ. ಏನಾಗುತ್ತಿದೆ. ಏಕೆ ಎಂದು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಚುನಾವಣೆಗಳಿಂದ ಮಾತ್ರವೇ ಈ ಸ್ವಾತಂತ್ರ್ಯ ಹರಣದ ಕ್ರಿಯೆಯನ್ನು ತಡೆಗಟ್ಟಲು ಸಾಧ್ಯವಿಲ್ಲ ಎಂದು ಅವರಿಗೆ ಮನವರಿಕೆಯಾಗುತ್ತಿದೆ. ಅದನ್ನು ಶೀಘ್ರಗೊಳಿಸಲು ಹಣಕಾಸುರಂಗದ, ಸಾರ್ವಜನಿಕ ವಲಯದ ಉದ್ಯೋಗಿಗಳು, ಕಾರ್ಮಿಕರು ತೀವ್ರ ಪ್ರಯತ್ನ ನಡೆಸಬೇಕು. ಈ ರಂಗದ ಲಕ್ಷಾಂತರ ಜನರ ಜೊತೆಗೆ ದೇಶದ ದುಡಿಯುವ ಜನ, ದೇಶಪ್ರೇಮಿಗಳು ಸೇರಬೇಕು.

ಆಗ ಭಾರತದಲ್ಲಿ ಸ್ವಾತಂತ್ರ್ಯ ನಂತರ ಅನೇಕ ಬಾರಿ ಆದಂತೆ ಮತ್ತೆ ಹೋರಾಟದ ಬೃಹತ್ ಅಲೆಗಳು ಏಳುತ್ತವೆ. ಆ ಹೋರಾಟದ ಅಲೆಗಳು ಮಾತ್ರವೇ ಭಾರತವನ್ನು ಈ ನೀತಿಗಳಿಂದ ರಕ್ಷಿಸುತ್ತವೆ. ಹೀಗೆ ಹಣಕಾಸು ರಂಗದ ರಕ್ಷಣೆ ಭಾರತವನ್ನೂ ರಕ್ಷಿಸುವ ಹೋರಾಟದ ಭಾಗವಾಗಿದೆ.

ವಿಮಾ ನೌಕರರು ಮತ್ತು ಖಾಸಗೀಕರಣ..........

ಪುಟ 6 ರಿಂದ

ಆ ಅವಕಾಶ ಅವರಿಗೆ ದೊರೆಯಲಿಲ್ಲ. ಸಂಯುಕ್ತ ರಂಗ ಸರ್ಕಾರದ ಹಣಕಾಸು ಮಂತ್ರಿ, ಹಿಂದೆ ನರಸಿಂಹ ರಾವ್ ಸರಕಾರದಲ್ಲಿ ವಾಣಿಜ್ಯಮಂತ್ರಿಯಾಗಿದ್ದ ಪಿ.ಚಿದಂಬರಂ ಈ ಪ್ರಯತ್ನವನ್ನು ಮುಂದುವರೆಸಿದಾಗ ಜುಲೈ 10, 1996 ರಂದು ನವದೆಹಲಿಯಲ್ಲಿ ಬೃಹತ್ ಪ್ರತಿಭಟನೆ ನಡೆಯಿತು. ಡಿಸೆಂಬರ್ 9, 1996 ರಂದು ಒಂದು ದಿನದ ಮುಷ್ಕರವೂ ನಡೆಯಿತು. ಆಗಸ್ಟ್ 1997 ರಲ್ಲಿ ಬಿಜೆಪಿಯೊಡನೆ ಗುಪ್ತ ಒಪ್ಪಂದ ಮಾಡಿಕೊಂಡು ಐ.ಆರ್.ಎ. ಮಸೂದೆ ಮಂಡಿಸುವ ಚಿದಂಬರಂ ಪ್ರಯತ್ನ ಎಡಪಕ್ಷಗಳ ಕಡು ವಿರೋಧದಿಂದಾಗಿ ವಿಫಲವಾಯಿತು. ಬಿಜೆಪಿ ಕೂಡಾ 'ಸ್ವದೇಶಿ' ಹೆಸರಲ್ಲಿ ವಿರೋಧಿಸಬೇಕಾಗಿ ಬಂತು. ಆಗ ಪ್ರಧಾನಿಯಾಗಿದ್ದ ಗುಜ್ರಾಲ್ ಮಸೂದೆಯನ್ನು ಹಿಂದಕ್ಕೆ ಪಡೆದಿರುವುದಾಗಿ ಸಾರಿದರು. ದೇಶೀ-ವಿದೇಶಿ ಬಂಡವಾಳಿಗರು ಕಿಡಿಕಾರಿದರು. ವಿಶ್ವನ್ ಅಭಿವೃದ್ಧಿ ಬ್ಯಾಂಕಂತೂ ವಿಮಾ ಖಾಸಗೀಕರಣದ ವಿರೋಧಿಗಳನ್ನು ಅದರಲ್ಲೂ ನೌಕರರ ಸಂಘಟನೆಗಳನ್ನು ಖರೀದಿಸಲು ಸರಕಾರಕ್ಕೆ ಸಾಲ ಒದಗಿಸುವುದಾಗಿಯೂ ಹೇಳಿದರು. ಆದರೆ ನೌಕರರ ಹೋರಾಟ ಇನ್ನಷ್ಟು ತೀವ್ರಗೊಂಡಿತು.

ನಂತರ ಅಧಿಕಾರಕ್ಕೆ ಬಂದ ಬಿಜೆಪಿ ಸರಕಾರ ತನ್ನ ಮುಖವಾಡ ಕಳಚಿ ಖಾಸಗೀಕರಣದ ಪ್ರಯತ್ನ ಆರಂಭಿಸಿದಾಗ ವಿಮಾ ನೌಕರರು ಮತ್ತೆ ಸಕ್ರಿಯರಾದರು. ನವೆಂಬರ್ 7, 1998 ರಂದು ಧರಣಿ, ಹಳ್ಳಿ-ಹಳ್ಳಿಗೆ ವ್ಯಾನ್ ಜಾಥಾಗಳು, ವಿಚಾರ ಸಂಕಿರಣಗಳು, ಪೋಸ್ಟ್ ಕಾರ್ಡ್ ಪ್ರಚಾರ ಮತ್ತೊಮ್ಮೆ ವ್ಯಾಪಕವಾಗಿ ನಡೆದವು. ಬಿಜೆಪಿ ನೇತೃತ್ವದ ಸರಕಾರ ಐ.ಆರ್.ಎ. ಮಸೂದೆಯನ್ನು ಮಂಡಿಸಿದ ಮರುದಿನ ಡಿಸೆಂಬರ್ 16, 1998 ರಂದು ಒಂದು ದಿನದ ಮುಷ್ಕರ ನಡೆಯಿತು. ವಾಜಪೇಯಿ ಸರಕಾರ ನರಸಿಂಹರಾವ್ ಸರಕಾರದೊಡನೆ 'ಒಮ್ಮತ'ದ ಮಾತನಾಡಲಾರಂಭಿಸಿದಾಗ ನಿಜವಾದ ಒಮ್ಮತವನ್ನು ತೋರಲು ಒಂದು ಕೋಟಿ ಸಹಿ ಸಂಗ್ರಹದ ಚಳುವಳಿಯನ್ನು ಆರಂಭಿಸಿದರು. ದೇಶದ ಮೂಲೆ-ಮೂಲೆಯಲ್ಲಿ ವಿಮಾ ನೌಕರರು ಸಂತೆಯಲ್ಲಿ, ಜಾತ್ರೆಯಲ್ಲಿ, ಮದುವೆ ಮುಂತಾದ ಸಮಾರಂಭಗಳಲ್ಲಿ, ಮನೆ-ಮನೆಗೂ ಹೋಗಿ ಸಹಿ ಸಂಗ್ರಹಿಸಿದರು. ಒಂದು ಕೋಟಿಯ ಗುರಿದಾಟಿ ಅದರ ಒಂದೂವರೆ ಪಟ್ಟು ಸಹಿ ಸಂಗ್ರಹಿಸಿದರು. ಅದನ್ನು ಲೋಕಸಭಾಧ್ಯಕ್ಷರಿಗೆ ಸಲ್ಲಿಸಬೇಕೆಂದಿದ್ದಾಗ 12ನೇ ಲೋಕಸಭೆ ವಿಸರ್ಜನೆಯಾಯಿತು. 13ನೇ ಲೋಕಸಭೆ ರಚನೆಯಾದಾಗ ಅಕ್ಟೋಬರ್ 28 ರಂದು ಅದನ್ನು ಸಲ್ಲಿಸಿ ಸರಕಾರದ 'ಒಮ್ಮತ'ದ ನಾಟಕವನ್ನು ಬಯಲಿಗೆಳೆದರು. ಈ ನಡುವೆ ಚುನಾವಣೆಯ ಸಮಯದಲ್ಲಿ, ಎಲ್ಲಾ ಪಕ್ಷಗಳ ಉಮೇದುವಾರರನ್ನು, ಚುನಾವಣೆಯ ನಂತರ ಚುನಾಯಿತ ಸದಸ್ಯರನ್ನು ಭೇಟಿ ಮಾಡಿದರು.

ಅಕ್ಟೋಬರ್ 28 ರಂದು ಯಶವಂತ್ ಸಿನ್ಹಾ ಲೋಕಸಭೆಯಲ್ಲಿ ಐ.ಆರ್.ಡಿ.ಎ. ಮಸೂದೆ ಮಂಡಿಸಿದಾಗ ಮರುದಿನವೇ ದೇಶಾದ್ಯಂತ ಯಶಸ್ವೀ ಮುಷ್ಕರ ನಡೆಯಿತು. ಈ ಮುಷ್ಕರ ವಿಮಾ ಖಾಸಗೀಕರಣ ಹೋರಾಟದ ವ್ಯಾಪ್ತಿಯನ್ನು ಹೆಚ್ಚಿಸಿತು. ಬ್ಯಾಂಕ್ ನೌಕರರ ಸಂಘಗಳು, ಸಾರ್ವಜನಿಕ ವಲಯದ ನೌಕರರ ಸಂಘಗಳು ವಿಮಾ ನೌಕರರ ಹೋರಾಟಕ್ಕೆ ಸಂಪೂರ್ಣ ಬೆಂಬಲ ಸೂಚಿಸಿದ ಪರಿಣಾಮವಾಗಿ ನವೆಂಬರ್ 29 ರಂದು ಬೃಹತ್ 'ಸಂಸತ್ ಚಲೋ' ಹಾಗೂ ದೇಶಾದ್ಯಂತ ಧರಣಿ, ಸಾರ್ವಜನಿಕ ಸಭೆಗಳು ನಡೆದವು. ಈ ಮಸೂದೆಯನ್ನು ಚರ್ಚೆಗೆ ಎತ್ತಿಕೊಂಡಾಗ ಮತ್ತೆ ಡಿಸೆಂಬರ್ 1 ರಂದು ದೇಶವ್ಯಾಪಿ ಮುಷ್ಕರ ನಡೆಸಿದರು. ಸಾಮ್ರಾಜ್ಯಶಾಹಿ ಧಣಿಗಳ ಆಶಯುವನ್ನು ಈಡೇರಿಸಲು ಪಣ ತೊಟ್ಟಂತಿದ್ದ ಆಳುವ ಕೂಟ ಪ್ರಜಾಪ್ರಭುತ್ವದ ರೀತಿ-ನೀತಿಗಳನ್ನು ಬದಿಗೊತ್ತಿ ಕೊನೆಗೂ ಕಾಂಗ್ರೆಸ್ ಶಾಮೀಲಿನಿಂದ ಈ ಮಸೂದೆಯನ್ನು ಪಾಸು ಮಾಡಿಕೊಂಡಿದೆ.


ಮುಂದೇನು? ಈ ಐತಿಹಾಸಿಕ ಹೋರಾಟ ಮುಗಿಯಿತೇ?

ಇಲ್ಲ, ಎನ್ನುತ್ತಾರೆ ವಿಮಾ ನೌಕರರು. ಮತ್ತೆ ಡಿಸೆಂಬರ್ 3 ರಂದು ದೇಶಾದ್ಯಂತ ಪ್ರತಿಭಟನೆ ವ್ಯಕ್ತಪಡಿಸಿದ ಅವರು ಈಗ ಈ ಹೋರಾಟದ ಹೊಸ ಅಧ್ಯಾಯ ಆರಂಭವಾಗುತ್ತಿದೆ ಎನ್ನುತ್ತಾರೆ. ಅದೀಗ ಹೊಸ ಹಂತ ತಲುಪಿದೆ. ತಮ್ಮ ಸತತ ಹೋರಾಟಗಳಿಂದಾಗಿ ಸಾರ್ವಜನಿಕ ವಲಯದ ಎಲ್.ಐ.ಸಿ. ಮತ್ತು ಜಿ.ಐ.ಸಿ.ಯನ್ನು ಲಾಭಕೋರರ ಆಸೆಗಣ್ಣುಗಳಿಂದ ಸದ್ಯಕ್ಕೆ ರಕ್ಷಿಸಿದ್ದೇವೆ, ಇನ್ನು ಮುಂದೆ ಈ ಹೋರಾಟ ಇಡೀ ಕಾರ್ಮಿಕ ವರ್ಗದ ಹೋರಾಟವಾಗುತ್ತದೆ, ನಮ್ಮ ಆಳರಸರ ದೇಶ-ವಿರೋಧಿ, ಜನ-ವಿರೋಧಿ ಆರ್ಥಿಕ ನೀತಿಗಳ ವಿರುದ್ಧ ಬೃಹತ್ ಹೋರಾಟಕ್ಕೆ ನಾಂದಿ ಹಾಕಿದೆ ಎನ್ನುತ್ತಾರೆ ವಿಮಾ ನೌಕರರು.

ಪ್ರತಿಭಟನೆಗಳ ನಡುವೆ ಡಬ್ಲ್ಯೂ.ಟಿ.ಓ. ಸಮ್ಮೇಳನ ಆರಂಭ

ಡಿಸೆಂಬರ್ 1 ರಂದು ಡಬ್ಲ್ಯು.ಟಿ.ಓ. ಮಂತ್ರಿಮಟ್ಟದ ಸಮ್ಮೇಳನದ ಭಾರೀ ಪ್ರತಿಭಟನೆಗಳಿಂದಾಗಿ ಕೆಲವು ಗಂಟೆ ವಿಳಂಬವಾಗಿ ಆರಂಭವಾಯಿತು. ಈ ಸಮ್ಮೇಳನ ನಡೆಯುವ ಸಿಯಾಟ್ಲ್ ನಗರ ರಣರಂಗದಂತಾಗಿದ್ದು, ಅಲ್ಲಿ ತುರ್ತುಪರಿಸ್ಥಿತಿ, ಕರ್ಫ್ಯೂ ಹೇರಲಾಗಿದೆ ಎಂದು ವರದಿಯಾಗಿದೆ.


ಸಮ್ಮೇಳನ ಆರಂಭವಾಗುವ ಹಿಂದಿನ ದಿನವೇ ಪ್ರತಿಭಟನೆಗಳು ನಡೆದಿದ್ದವು. 'ಡಬ್ಲ್ಯು.ಟಿ.ಓ. ತೊಲಗಲಿ-ಇಲ್ಲವೇ ಒದ್ದೋಡಿಸಿ" "ರಕ್ತ ಪಿಪಾಸು ಕಂಪನಿಗಳಿಗೆ ಧಿಕ್ಕಾರ' 'ಸಾಮ್ರಾಜ್ಯಶಾಹಿ ಶೋಷಣೆಗೆ ಧಿಕ್ಕಾರ' ಇತ್ಯಾದಿ ಘೋಷಣೆಗಳು ಕೇಳಿಬಂದವು. ಸುಮಾರು 50 ಸಾವಿರ ಪ್ರತಿಭಟನಾಕಾರರು ಈ ಮತಪ್ರದರ್ಶನದಲ್ಲಿ ಭಾಗವಹಿಸಿದ್ದರು. ಆದರೆ ಅಲ್ಲಿ ನಡೆದ ಹಿಂಸಾತ್ಮಕ ಪ್ರತಿಭಟನೆಯು ಬಹುಪಾಲು ಅಮೆರಿಕದ ಆಳರಸರು ಬೇಕೆಂದೇ ಏರ್ಪಡಿಸಿದ್ದ ಪ್ರತಿಭಟನೆಯಿರಬಹುದು ಎಂಬ ಸಂದೇಹ ಈಗ ವ್ಯಕ್ತಗೊಳ್ಳುತ್ತಿದೆ. ನಿಜವಾದ ಡಬ್ಲ್ಯು.ಟಿ.ಓ-ವಿರೋಧಿ ಮತಪ್ರದರ್ಶಕರು ಅಂದರೆ ಡಬ್ಲ್ಯು.ಟಿ.ಓ. ಬಡ ದೇಶಗಳ ವಿರುದ್ಧ ಅಸ್ತ್ರವೆನ್ನುವವರು ಇರಲಿಲ್ಲವೆಂದಲ್ಲ. ಆದರೆ ಮಾಧ್ಯಮಗಳಲ್ಲಿ ಅವರ ಪ್ರತಿಭಟನೆಗೆ ಪ್ರಚಾರ ಸಿಕ್ಕಿಲ್ಲ. ಪೋಲೀಸರ ದಮನವನ್ನು ಬಹಳವಾಗಿ ಎದುರಿಸಬೇಕಾಗಿ ಬಂದವರು ಅವರೇ. ಪ್ರಚಾರ ಸಿಕ್ಕಿದ್ದು ಅಮೆರಿಕದ ಕಾರ್ಮಿಕ ಸಂಘಟನೆ ಎ.ಎಫ್.ಎಲ್.-ಸಿ.ಐ.ಓ ದ 20000 ಸದಸ್ಯರು ಹಾಗೂ 5000-6000 ಪರಿಸರವಾದಿಗಳ ಪ್ರತಿಭಟನೆಗೆ ಮಾತ್ರ ಎಂದು ಹೇಳಲಾಗಿದೆ. ಎ.ಎಫ್.ಎಲ್. - ಸಿ.ಐ.ಓ. ಸದಸ್ಯರು ಮೂರನೇ ಜಗತ್ತಿನ ಕಮ್ಮಿ ಸಂಬಳದ ಕಾರ್ಮಿಕರ ಉತ್ಪಾದನೆಗಳ ಆಮದನಿಂದಾಗಿ ತಮ್ಮ ಕೈಗಾರಿಕೆಗೆ ಕುತ್ತು ಬಂದಿದೆ ಅದನ್ನು ರಕ್ಷಿಸಬೇಕು ಎಂದು ಒತ್ತಾಯಿಸುತ್ತಿದ್ದಾರೆ, ಪರಿಸರವಾದಿಗಳು ಸ್ವಾಭಾವಿಕ ಅರಣ್ಯಗಳ ಉತ್ಪಾದನೆಗಳ ಆಮದನ್ನು ವಿರೋಧಿಸುತ್ತಿದ್ದರು.



ಡಿಸೆಂಬರ್ 1 ರಂದು ಸಿಯೆಟ್ಲ್ ನಗರದಲ್ಲಿ ಬೃಹತ್ ಡಬ್ಲ್ಯು.ಟಿ.ಓ. ಮೆರವಣಿಗೆ.


ಈ ಪ್ರತಿಭಟನೆಗಳು ನಿಜವಾಗಿಯೂ ಅಂತರ್‍ರಾಷ್ಟ್ರೀಯ ವ್ಯಾಪಾರದಲ್ಲಿ ಬಡದೇಶಗಳಿಗೆ ಆಗುತ್ತಿರುವ ಅನ್ಯಾಯಗಳ ವಿರುದ್ಧವಾಗಿದ್ದವೇ ಅಥವಾ ಶ್ರೀಮಂತ ದೇಶಗಳ ಆಗ್ರಹಗಳತ್ತ ಗಮನ ಸೆಳೆಯಲಿಕ್ಕಾಗಿ ಉದ್ದೇಶ ಪೂರ್ವಕವಾಗಿಯೇ ಏರ್ಪಡಿಸಿದ ಪ್ರದರ್ಶನಗಳೇ ಎಂಬ ಸಂದೇಹ ಅಮೆರಿಕಾದ ಅಧ್ಯಕ್ಷ ಕ್ಲಿಂಟನ್ ಈ ಪ್ರತಿಭಟನಾಕಾರರೊಂದಿಗೆ ಸಹಾನುಭೂತಿ ವ್ಯಕ್ತಪಡಿಸುತ್ತಾ, ಅದನ್ನೇ ಮುಂದಿಟ್ಟಾಗ ಸಹಜವಾಗಿಯೇ ಮೂಡಿದೆ. ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಿದ ರೀತಿಯೂ ಈ ಸಂದೇಹವನ್ನು ಪುಷ್ಟಿಗೊಳಿಸಿದೆ ಎಂದು ಭಾರತದ ನಿಯೋಗದ ಸದಸ್ಯರಾಗಿರುವ ಸಿಪಿಐ(ಎಂ) ರಾಜ್ಯ ಸಭಾ ಸದಸ್ಯ ಬಿಪ್ಲವ್ ದಾಸ್ ಗುಪ್ತಾ ಸಿಯೆಟ್ಲ್‌ನಿಂದ ಐ.ಎನ್.ಎನ್. ಗೆ ಕಳಿಸಿದ ವರದಿಯಲ್ಲಿ ಹೇಳಿದ್ದಾರೆ. ಉದ್ಘಾಟನಾ ಸಮಾರಂಭ ನಡೆಯುವುದಿಲ್ಲ ಎಂದು ಮೊದಲೇ ತಿಳಿದವರಂತೆ ಉದ್ಘಾಟನಾ ಸ್ಥಳದಲ್ಲಿದ್ದವರ ವರ್ತನೆಯಿಂದ ಎದ್ದು ಕಾಣುತ್ತಿತ್ತು. ಉದ್ಘಾಟನೆ 'ಸಮಾವೇಶ ಸಭಾಂಗಣ'ದಲ್ಲಿ ಏರ್ಪಾಡಾಗಿರಲಿಲ್ಲ. ಸಾಮಾನ್ಯವಾಗಿ ಕ್ಯಾಬರೆ ಪ್ರದರ್ಶನ ನಡೆಯುವ ಪ್ಯಾರಮೌಂಟ್ ಸಿನಿಮಾ ಮಂದಿರದಲ್ಲಿ ಏರ್ಪಾಡಾಗಿತ್ತು. ಸಮಾರಂಭ ಹತ್ತು ಗಂಟೆಗೆ ಆರಂಭವಾಗಬೇಕಿತ್ತು. 9 ಗಂಟೆಗೆ ಪ್ರತಿನಿಧಿಗಳು ಅಲ್ಲಿ ಬಂದಾಗಲೂ ಒಂದು ಅಂತರ್‍ರಾಷ್ಟ್ರೀಯ ಸಮ್ಮೇಳನ ನಡೆಯುವ ಕುರುಹುಗಳು ಅಲ್ಲಿರಲಿಲ್ಲ. ಅಲ್ಲಿ ಪ್ರದರ್ಶವಾಗುತ್ತಿರುವ ಕ್ಯಾಬರೆಯ ಪೋಸ್ಟರ್ ಮಾತ್ರ ಇತ್ತು ಎಂದು ಡಾ. ದಾಸ್‌ಗುಪ್ತಾ ವರದಿ ಮಾಡಿದ್ದಾರೆ. 11.30 ವೇಳೆಗಷ್ಟೆ ಉದ್ಘಾಟನಾ ಸಮಾರಂಭ ವಿಳಂಬವಾಗುತ್ತಿದೆ ಎಂದು ಸೂಚನೆ ನೀಡಲಾಯಿತಂತೆ.

ಪ್ರತಿಭಟನಾಕಾರನೋರ್ವನಿಗೆ ಪೋಲಿಸರಿಂದ ಬೂಟಿನೇಟು



> ಸಿಯಾಟ್ಲ್‌ನಲ್ಲಿ ಡಬ್ಲ್ಯು.ಟಿ.ಓ. ಸಮ್ಮೇಳನದಲ್ಲಿ ಭಾಗವಹಿಸುತ್ತಿರುವ ಭಾರತದ ನಿಯೋಗದಲ್ಲಿ 40 ಸದಸ್ಯರಿದ್ದಾರೆ. ಸಿಪಿಐ(ಎಂ) ನಿಂದ ರಾಜ್ಯಸಭೆಯಲ್ಲಿ ಪಕ್ಷದ ಉಪಮುಖಂಡರಾಗಿರುವ ಡಾ. ಬಿಪ್ಲವ್ ದಾಸ್‌ಗುಪ್ತಾ ಇವರಲ್ಲಿ ಒಬ್ಬರು. ಇವರು ಡಬ್ಲ್ಯು.ಟಿ.ಓ. ಚಟುವಟಿಕೆಗಳ ಬಗ್ಗೆ ಆಳವಾದ ಅಧ್ಯಯನ ನಡೆಸಿರುವವರು. ಈ ಬಗ್ಗೆ ಒಂದು ಪುಸ್ತಕವನ್ನು ಬರೆದಿದ್ದಾರೆ.
>
> ಕೇಂದ್ರ ಕೈಗಾರಿಕಾ ಮಂತ್ರಿ ಮುರಸೋಳಿ ಮಾರನ್ ನೇತೃತ್ವದ ಭಾರತದ ನಿಯೋಗದ 40 ಸದಸ್ಯರಲ್ಲಿ ಒಬ್ಬರಾದರೂ ಕಾರ್ಮಿಕ ಸಂಘದ ಪ್ರತಿನಿಧಿ ಇಲ್ಲ. ಈ ಬಗ್ಗೆ ಕಾರ್ಮಿಕ ಸಂಘಗಳ ಬೇಡಿಕೆಗಳಿಗೆ ಕಿವಿಗೊಡದ ಮಾರನ್ ಮುಂದಿನ ನಿಯೋಗಗಳಲ್ಲಿ ಕಾರ್ಮಿಕರ ಪ್ರತಿನಿಧಿಗಳನ್ನು ಸೇರಿಸಲಾಗುವುದು ಎಂದು ಈಗ ಹೇಳಿದ್ದಾರೆ.
>
> ಈ ಬಾರಿಯ ಸಮ್ಮೇಳನದ ಅಜೆಂಡಾದಲ್ಲಿ ಕಾರ್ಮಿಕರನ್ನು ಕುರಿತಾದ ಪ್ರಶ್ನೆಗಳನ್ನು ಸೇರಿಸಿದ್ದು ಭಾರತ ಅದನ್ನು ವಿರೋಧಿಸುತ್ತಿದೆ. ಆದ್ದರಿಂದ ಭಾರತದ ನಿಲುವನ್ನು ಪರಿಣಾಮಕಾರಿಯಾಗಿ ಮಂಡಿಸಲು ಕಾರ್ಮಿಕರ ಪ್ರತಿನಿಧಿಗಳಿರುವುದು ಅತ್ಯಗತ್ಯವಾಗಿತ್ತು. ಆದರೆ ವಾಜಪೇಯಿ ಸರಕಾರ ಈ ಬಗ್ಗೆ ಗಮನ ಹರಿಸಿಲ್ಲ.

ಕ್ಲಿಂಟನ್‌ರ ಭಾಷಣದ ನಂತರ ಶ್ರೀಮಂತ ದೇಶಗಳು 'ಲೇಬರ್ ಸ್ಟಾಂಡರ್ಡ್' ಎಂದರೆ ಕಾರ್ಮಿಕರ ಪರಿಸ್ಥಿತಿ ಪ್ರಮುಖ ಚರ್ಚಾ ವಿಷಯವಾಗುವಂತೆ ಪ್ರಯತ್ನಿಸುತ್ತಿದ್ದಾರೆ. ಸುಮಾರಾಗಿ ಎಲ್ಲಾ ಬಡದೇಶಗಳು ಇದನ್ನು ಅಜೆಂಡಾವಾಗಿಸು ವುದನ್ನು ವಿರೋಧಿಸುತ್ತಿವೆ. ಇದನ್ನು ವ್ಯಾಪಾರದ ಮಾತುಕತೆಗಳಲ್ಲಿ ಒಂದು ವಿಷಯವನ್ನಾಗಿ ಮಾಡಬಾರದು, ಅಂತರ್‍ರಾಷ್ಟ್ರೀಯ ಕಾರ್ಮಿಕ ಸಂಘಟನೆ ಐ.ಎಲ್.ಓ. ಮಾತ್ರವೇ ಅದಕ್ಕೆ ಸೂಕ್ತವೇದಿಕೆ ಎಂದು ಈ ದೇಶಗಳ ಅಭಿಪ್ರಾಯ. ಅಂತರ್‍ರಾಷ್ಟ್ರೀಯ ವ್ಯಾಪಾರದಲ್ಲಿ ಬಡದೇಶಗಳಿಗೆ ಇರುವ ಏಕೈಕ ಅನುಕೂಲವೆಂದರೆ ಅಲ್ಲಿಯ ಕಾರ್ಮಿಕರ ಕಮ್ಮಿ ಕೂಲಿ. ಈ ಅನುಕೂಲವನ್ನೇ ಕಿತ್ತುಕೊಂಡರೆ ಸ್ಪರ್ಧೆಗೆ ಅರ್ಥವೇ ಇಲ್ಲ ಎಂಬುದು ಈ ದೇಶಗಳ ವಾದ. ಜಪಾನಿನ ತಲಾ ಆದಾಯ-ಭಾರತಕ್ಕಿಂತ 100 ಪಟ್ಟು ಹೆಚ್ಚಿರುವಾಗ ಜಪಾನಿನ ಮಟ್ಟದ ವೇತನ ಕೊಡಲು ಭಾರತಕ್ಕೆ ಸಾಧ್ಯವಿಲ್ಲವಲ್ಲ. ವಾಸ್ತವವಾಗಿ ಶ್ರೀಮಂತದೇಶಗಳು ಬಡದೇಶಗಳಲ್ಲಿನ ಕಾರ್ಮಿಕರ ಪರಿಸ್ಥಿತಿ ಸುಧಾರಿಸಲೆಂದು ಹೀಗೆ ಮಾಡುತ್ತಿಲ್ಲ. ತಮ್ಮ ದೇಶಗಳ ಉತ್ಪಾದನೆಗಳಿಗೆ ಈ ದೇಶಗಳಿಂದ ಸ್ಪರ್ಧೆ ಬರದಿರಲಿ ಎಂಬ ಏಕೈಕ ಹುನ್ನಾರವೇ ಅವರ ಈ ವಾದದ ಹಿಂದಿರುವುದು. ತಮ್ಮ ದುರುದ್ದೇಶ ಈಡೇರಿಸಿಕೊಳ್ಳಲು ಶ್ರೀಮಂತ ದೇಶಗಳು ಬಡ ದೇಶಗಳನ್ನು 'ಕಮ್ಮಿ ಅಭಿವೃದ್ಧಿ ಹೊಂದಿದ ದೇಶಗಳು' ಮತ್ತು 'ಅತಿಕಮ್ಮಿ ಅಭಿವೃದ್ಧಿ ಹೊಂದಿದ ದೇಶಗಳು' ಎಂದು ಒಡೆಯಲು ಪ್ರಯತ್ನಿಸುತ್ತಿದ್ದಾರೆ. ಈ ಎರಡನೇ ಗುಂಪಿನಲ್ಲಿ ಸುಮಾರು 40 ದೇಶಗಳಿದ್ದು ಬಾಂಗ್ಲಾದೇಶ್ ಈ ಗುಂಪಿನ ನಾಯಕ. ಡಿಸೆಂಬರ್ 1 ರಂದು ಈ ದೇಶದ ಪ್ರತಿನಿಧಿ ಚೆನ್ನಾಗಿಯೇನೋ ಮಾತಾಡಿದರು. ಆದರೆ ಅಮೆರಿಕಾ ಆ ದೇಶಕ್ಕೆ ಕೆಲವು ರಿಯಾಯ್ತಿಗಳನ್ನು ನೀಡಿ ಅದನ್ನು ಭಾರತ ಮತ್ತು ಬೇರೆ ಮೂರನೇ ಜಗತ್ತಿನ ದೇಶಗಳಿಂದ ದೂರ ಸರಿಸಲು ಪ್ರಯತ್ನಿಸುತ್ತಿದೆ ಎಂದು ವರದಿ ಮಾಡಿರುವ ಡಾ. ದಾಸ್‌ಗುಪ್ತಾ ಕೊನೆಗೆ ಬಡ ದೇಶಗಳು ಯಾವ ನಿಲುವು ತಳೆಯುತ್ತದೆ ಎಂದು ಈಗಲೇ ಹೇಳುವುದು ಕಷ್ಟ ಎಂದು ತಿಳಿಸಿದ್ದಾರೆ. ಕೃಷಿ ರಫ್ತುಗಾರರಾದ ಲ್ಯಾಟಿನ್ ಅಮೆರಿಕನ್ ದೇಶಗಳು ಸಬ್ಸಿಡಿಗಳನ್ನು ಸಂಪೂರ್ಣವಾಗಿ ರದ್ದು ಮಾಡಬೇಕು ಎಂದು ಆಗ್ರಹಿಸುತ್ತಿವೆ. ಅಮೆರಿಕಾ ತನ್ನ ಕೃಷಿ ರಫ್ತನ್ನು ಅಗ್ಗಗೊಳಿಸಲು ಭಾರಿ ಪ್ರಮಾಣದ ಸಬ್ಸಿಡಿ ನೀಡುತ್ತಿದೆ ಎಂಬುದನ್ನಿಲ್ಲಿ ಗಮನಿಸಬೇಕು.



ಇ.ಎಂ.ಎಸ್. ಭವನ ನಿಧಿ

ಹಿಂದಿನ ಮೊತ್ತ	**15,62,986.00**
ಅಂಗನವಾಡಿ ನೌಕರರ ಸಂಘ, ದೇವದುರ್ಗ	100
ಶಿರ್ಸಿ ಘಟಕ, ಉ.ಕ.	500
ಹಿತ್ರೈಷಿ, ವಿರಾಜಪೇಟೆ	2500
ಜಮೀರ್, ವಿರಾಜಪೇಟೆ	600
ಸಿಪಿಐ(ಎಂ) ಐಟಿಸಿ ಶಾಖೆ, ಬೆಂಗಳೂರು	1400
ಸಿದ್ದಲಿಂಗಪ್ಪ, ಮೈಕೋ, ನಾಗನಾಥಪುರ	500
ಐಕ್ಯರಂಗ ಶಾಖೆ	
1.ವಿಶ್ವ ಕುಂದಾಪುರ	250
2.ಚಂದ್ರು ಮೂಲಕ	500
3.ರಾಮು ಮೂಲಕ	230
ವಿ..ಜೆ.ಕೆ.ನಾಯರ್ ಸಂಗ್ರಹ	50,000
ಯಡೂರು ಮಹಾಬಲ	1000
ಸಿ.ಆರ್.ಶಾನಬಾಗ್, ಶಿರ್ಸಿ	1000
ಸೀತಾಲಕ್ಷ್ಮಿ ಮೂಲಕ ಸಂಗ್ರಹ	500
ಎಸ್.ಎಸ್.ಆರ್ ಮೂಲಕ ಸಂಗ್ರಹ	25,000
ಸಿಪಿಐ(ಎಂ) ರಾಯಚೂರು ಜಿಲ್ಲಾ ಸಮಿತಿ ಹಟ್ಟಿ ಗಣಿ ಕಾರ್ಮಿಕರಿಂದ	20,000
ಬಿ.ಇ.ಎಲ್. ಪ್ರಾದೇಶಿಕ ಸಮಿತಿ ಸಂಗ್ರಹ ಹೋಟೆಲ್ ಮಹಾಲಸಾ ದರ್ಶನ್, ಜಾಲಹಳ್ಳಿ	1000
ವರ್ತೂರು ಪ್ರಾದೇಶಿಕ ಸಮಿತಿ	1250
ಬಿ.ಇ.ಎಂ.ಎಲ್. ಎಂಪ್ಲಾಯಿಸ್ ಕ್ರೆಡಿಟ್ ಕೋ.ಆಪ್ ಸೊಸೈಟಿ, ರಾಬರ್ಟ್‌ಸನ್ ಪೇಟೆ, ಕೆ.ಜಿ.ಎಫ್	5000
ಒಟ್ಟು ಮೊತ್ತ	**1774316.50**


ಇ.ಎಂ.ಎಸ್. ಭವನ ನಿಧಿ-80 ಜಿ.ಪ್ರಕಾರ ಆದಾಯ ತೆರಿಗೆ ವಿನಾಯಿತಿ

ಎ.ಕೆ.ಗೋಪಾಲನ್ ಸೋಷಿಯಲ್ ಎಜುಕೇಷನ್ ಟ್ರಸ್ಟ್‌ನ ಪರವಾಗಿ ಇನ್ನು ಮುಂದೆ ನಿರ್ಮಾಣವಾಗಲಿರುವ ಇ.ಎಂ.ಎಸ್. ಭವನಕ್ಕೆ ನೀಡಲಿರುವ ನಿಧಿಗೆ ಇನ್ನು ಮುಂದೆ (22.9.99 ರಿಂದ) ಆದಾಯ ತೆರಿಗೆ ವಿನಾಯತಿ ದೊರಕಲಿದೆ. (ಸೆಕ್ಷನ್ 80 ಜಿ.ಪ್ರಕಾರ) ಆದಾಯ ತೆರಿಗೆ ನೀಡಲಿರುವ ವ್ಯಕ್ತಿ, ಸಂಸ್ಥೆಗಳಿಗೆ ಇದು ಅನುಕೂಲವಾಗಲಿದೆ.

ಆದಾಯ ತೆರಿಗೆ ಇಲಾಖೆ, ಕರ್ನಾಟಕ-2 ತನ್ನ ಆರ್ಡರ್ ನಂ. ಟ್ರಸ್ಟ್ /718/10ಸಿ/772 99-2000CT-II ಮೂಲಕ ಈ ವಿನಾಯಿತಿಯನ್ನು ಘೋಷಿಸಿದೆ. ಇದನ್ನು ಸದುಪಯೋಗ ಪಡಿಸಿಕೊಂಡು ಆದಷ್ಟು ಹೆಚ್ಚಿಗೆ ನಿಧಿ ಸಂಗ್ರಹಿಸಬೇಕಾಗಿ ಕೋರುತ್ತೇವೆ.

ಎಸ್.ಸೂರ್ಯನಾರಾಯಣ ರಾವ್.
ಮ್ಯಾನೇಜಿಂಗ್ ಟ್ರಸ್ಟಿ

ಕಾಂ. ಮಂಜುನಾಥ ಪುಲ್ಕರ : ಒಂದು ಸಂದರ್ಶನ



ಕಾಂ. ಮಂಜುನಾಥ ಪುಲ್ಕರ ಉತ್ತರ ಕನ್ನಡದಲ್ಲಿ ಪಕ್ಷವನ್ನು ಕಟ್ಟಿ ಬೆಳೆಸುವಲ್ಲಿ ಅತ್ಯಂತ ಮುಖ್ಯ ಪಾತ್ರವಹಿಸಿದವರು. 1962 ರಲ್ಲಿ ಪಕ್ಷವನ್ನು ಸೇರಿ, ಅನೇಕ ವರ್ಷಗಳ ಕಾಲ ಪಕ್ಷದ ಜಿಲ್ಲಾ ಕಾರ್ಯದರ್ಶಿಯಾಗಿ, ಈಗ ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಪಕ್ಷದಲ್ಲಿ ತೊಡಗಿಕೊಂಡಿದ್ದಾರೆ. ತಮ್ಮ ಇಳಿವಯಸ್ಸಿನಲ್ಲಿಯೂ ಕೂಡ 10-20 ಕಿ.ಮಿ. ನಡೆದು ಹೋಗಿ ರೈತ ಸಂಘದಂತಹ ಸಾಮೂಹಿಕ ಸಂಘಟನೆಗಳನ್ನು ಕಟ್ಟುವಲ್ಲಿ ಉತ್ಸಾಹಿಗಳಾದ ಪುಲ್ಕರ ಅವರೊಂದಿಗೆ ನಡೆಸಿದ ಮಾತುಕತೆಯು ಉತ್ತರ ಕನ್ನಡ ಜಿಲ್ಲೆಯಲ್ಲಿ ಕಮ್ಯುನಿಸ್ಟ್ ಪಕ್ಷ ಮತ್ತು ಎಡ ಚಿಂತನೆಗಳು ಬೆಳೆದು ಬಂದ ಘಟ್ಟಗಳನ್ನು ಗುರುತಿಸುವಲ್ಲಿ ಮಹತ್ವದ್ದಾಗಿದೆ. ಮಾತುಕತೆಯ ಆಯ್ದ ಭಾಗ ಇದು.

ತಾವು ಮೊದಲು ಸಂಘಟನೆಯಲ್ಲಿ ತೊಡಗಿಸಿಕೊಂಡದ್ದು ಎಲ್ಲಿ?

ಉಡುಪಿಯಲ್ಲಿ ನನಗೆ ಮೊದಲು ಬೀಡಿ ಸಂಘಟನೆಯ ಸಂಪರ್ಕ ಬಂತು. ಕೌಟುಂಬಿಕ ಸಮಸ್ಯೆಯ ಕಾರಣಕ್ಕಾಗಿ ನಾನು ದುಡಿತಕ್ಕೆ ಬೇರೆ ಕಡೆ ಹೋಗಲೇಬೇಕಾಗಿತ್ತು. ಅಲ್ಲಿಯ ದೇವಸ್ಥಾನದಲ್ಲಿ ಊಟ, ನಂತರ ಬೀಡಿ ಕಟ್ಟುವುದು. ಅಲ್ಲಿ ಎಐಟಿಯುಸಿಯ ಪರಿಚಯ ಆಯಿತು. ಬಿಡುವಿನ ವೇಳೆಯಲ್ಲಿ ಸಂಘಟನೆಯ ಕೆಲಸ. ಕೇರಳದಿಂದ ಬಂದ ಕಾಂ. ಕೇಳಪ್ಪನ್ ಮೂಲಕ ಈ ಸಂಘಟನೆಯ ಪರಿಚಯ ಆಯಿತು.

ನೀವು ಉತ್ತರ ಕನ್ನಡಕ್ಕೆ ವಾಪಾಸಾದದ್ದು ಯಾವಾಗ?

ಉಡುಪಿಯಲ್ಲಿ ಬೀಡಿ ಕೆಲಸ ಮಾಡುತ್ತಿದ್ದಾಗ ಮೈಸೂರಿನಲ್ಲಿ ಮಜೂರಿ ಜಾಸ್ತಿ ಎನ್ನುವ ವಿಚಾರ ತಿಳಿಯಿತು. ಉಡುಪಿಯಲ್ಲಿ 1000 ಕ್ಕೆ ಒಂದೂವರೆ ರೂಪಾಯಿ ಇದ್ದರೆ ಮೈಸೂರಿನಲ್ಲಿ ಮೂರು ರೂಪಾಯಿ ಇತ್ತು. ಅಲ್ಲಿ ಹೋಗಿ ಫೀರ ಬೀಡಿಯಲ್ಲಿ ಸೇರಿದೆವು. ಆದರೆ ಅದರ ಮಾಲಿಕ ಅವನಂತೆ ಕೆಲಸಗಾರರೆಲ್ಲರೂ ತಲೆ ಬೋಳಿಸಿಕೊಂಡು ಇರಬೇಕೆಂದು ಹೇಳಿದ. ಅದನ್ನು ಬಿಟ್ಟು ಸಿರ್ಸಿಗೆ ಬಂದು ಬೀಡಿ ಕಟ್ಟಲು ಪ್ರಾರಂಭಿಸಿದೆವು. ಸಿರ್ಸಿಗೆ ಬಂದದ್ದು ಸುಮಾರು 1950 ರಲ್ಲಿ.

ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿದ್ದು ಯಾವಾಗ? ಹೇಗೆ?

ಕೇಳಪ್ಪನ್ ಎನ್ನುವವನು ಉಡುಪಿಯಲ್ಲಿ 'ಗಣಶಕ್ತಿ' ಪತ್ರಿಕೆಯ ಹತ್ತು ಪ್ರತಿ ಮಾರುತ್ತಿದ್ದ. ನಾವು ತೆಗೆದುಕೊಳ್ಳುತ್ತಿದ್ದೆವು. ಸಿರ್ಸಿಗೆ ಬಂದಮೇಲೂ ಈ ಕಾರ್ಯ ಮುಂದುವರಿಯಿತು. ಕೇಳಪ್ಪನ್ ನನಗೆ ಪರಿಚಯ ಆಗುವ ಮೊದಲೇ ಕೇರಳದಲ್ಲಿ ಆತ ಪಕ್ಷದಲ್ಲಿದ್ದ. ಈತನ ಮತ್ತು ಈ ಪತ್ರಿಕೆಯ ಮೂಲಕ ಕಾಂ. ಎನ್.ಎಲ್. ಉಪಾಧ್ಯಾಯರ ಸಂಪರ್ಕ ಬಂತು. ಅವರು ಸಿರ್ಸಿಯಲ್ಲಿ ಒಂದು ಸಭೆ ನಡೆಸಬೇಕೆಂದು ಕೇಳಿದರು. ನಾವು ಬೀಡಿ ಕಟ್ಟುವ 10-12 ಜನ ಗುಂಪು ಸಭೆಯನ್ನು ಏರ್ಪಾಟು ಮಾಡಿದೆವು. ನಾವು ಪತ್ರಿಕೆ ಹಾಕುವ ಮೂಲಕ ಆಗಲೇ ಸೋಷಲಿಸ್ಟ್ ಪಕ್ಷದಲ್ಲಿದ್ದ ಎಂ.ಎಸ್.ಧಾರೇಶ್ವರರ ಪರಿಚಯ ಮಾಡಿಕೊಂಡು ಸಭೆಯ ಬಗ್ಗೆ ಹೇಳಿದೆವು. ಅವರು ಅಧ್ಯಕ್ಷತೆ ವಹಿಸಿಕೊಳ್ಳಲು ಒಪ್ಪಿದರು. ಆ ಸಭೆಯ ಕರಪತ್ರ ಬರೆದು ಕೊಟ್ಟವರು ಧಾರೇಶ್ವರರೇ. 1957 ರಲ್ಲಿ ಈ ದೊಡ್ಡ ಸಭೆ, ಸಿರ್ಸಿಯ ಬಿಡ್ಕಿ ಬೈಲಿನಲ್ಲಿ ನಡೆಯಿತು. ಸುಮಾರು ಏಳೆಂಟು ಸಾವಿರ ಜನ ಈ ಸಭೆಗೆ ಸೇರಿದ್ದರು. ಎನ್.ಎಲ್.ಉಪಾಧ್ಯಾಯರು ಈ ಸಭೆಯಲ್ಲಿ ಮಾತನಾಡಿದರು. ನಾನು ತಿಳಿದಂತೆ ಅದರ ಮರುವರ್ಷವೇ ಧಾರೇಶ್ವರರು ಕಮ್ಯುನಿಸ್ಟ್ ಪಕ್ಷವನ್ನು ಸೇರಿದರು. ಹೀಗೆ 1956 ರಿಂದ ನಮ್ಮ ಅನೇಕ ಹೋರಾಟ, ಸಭೆ ನಡೆಸಿದೆವು. ನಾನು 1962 ರಲ್ಲಿ ಪಕ್ಷದ ಸದಸ್ಯನಾಗಿ ಕೆಲಸ ಮಾಡಲು ತೊಡಗಿದೆ. ಬೀಡಿ ಕಟ್ಟುವ ಕೆಲಸ ಮುಂದುವರಿಯಿತು.

ಮುಂದೆ ನೀವು ಎತ್ತಿಕೊಂಡ ಹೋರಾಟ ಯಾವುದು?

1962-63 ರಲ್ಲಿ ಒಂದು ಸಾವಿರ ಬೀಡಿಗೆ 4 ರೂಪಾಯಿ ಕೊಡಬೇಕೆಂದು ದೊಡ್ಡ ಹೋರಾಟ ನಡೆಸಿದೆವು. ಸ್ಟ್ರೈಕ್ ಮಾಡಿದೆವು. ಆದರೆ ಮಾಲಿಕರು ಬೀಡಿ ಕಟ್ಟುವ ಕೆಲಸವನ್ನೇ ನಿಲ್ಲಿಸಿದರು. ಆಗಲೇ ನಾನು, ಭೀಮ್ಸಿ, ಪಿ.ಜಿ.ಮಶಾಲ್ದಿ, ಎಂ.ಎಸ್.ಧಾರೇಶ್ವರ ಪಕ್ಷದ ಸದಸ್ಯರಾಗಿರುವುದರಿಂದ ಕೆಂಪು ಝಂಡಾದ ಅಡಿಯಲ್ಲಿ ಹೋರಾಟ ಪ್ರಾರಂಭ ಆಯಿತು. ಎಂ.ಎಸ್.ಧಾರೇಶ್ವರರು ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರು. ತಮ್ಮ ವಕೀಲಿ ವೃತ್ತಿಯಿಂದ ಬಂದ ಹಣವನ್ನೆಲ್ಲಾ ಅವರು ಪಕ್ಷಕ್ಕೆ ಹಾಕುತ್ತಿದ್ದರು.

ಜಿಲ್ಲೆಯಲ್ಲಿ ನೀವು ನಡೆಸಿದ ಪ್ರಮುಖ ಹೋರಾಟಗಳಾವುವು?

ಮುಖ್ಯವಾಗಿ ಕಟ್ಟಿಗೆ ಚಳುವಳಿ; ಇದು ನಡೆದದ್ದು 56-57 ರಲ್ಲಿ. ಮೊದಲು ಕಾಡಿನಿಂದ ಕಟ್ಟಿಗೆಯನ್ನು ಎತ್ತಿನ ಗಾಡಿಯಲ್ಲಿ ತಂದು ಮಾರಲು ಅವಕಾಶ ಇತ್ತು. ಒಂದು ಗಾಡಿಗೆ 4 ಆಣೆ ಕೊಟ್ಟು ಪರ್ಮಿಟ್ ತೆಗೆದುಕೊಳ್ಳಬೇಕಾಗಿತ್ತು. ಅದನ್ನು 8 ಆಣೆಗೆ(50 ಪೈಸೆ) ಹೆಚ್ಚಿಸಿದರು. ಇದರ ವಿರುದ್ಧ ದೊಡ್ಡ ಚಳುವಳಿ ನಡೆದು ಎ.ಸಿ.ಕಚೇರಿಯ ಮುಂದೆ 350-400 ಖಾಲಿ ಗಾಡಿಗಳ ದೊಡ್ಡ ಮೆರವಣಿಗೆ ಮತ್ತು ಪ್ರತಿಭಟನೆ ನಡೆಯಿತು. ಹೋರಾಟ ಯಶಸ್ವಿಯಾಯಿತು. ಮತ್ತೆ ಪರ್ಮಿಟ್ ದರವನ್ನು ಇಳಿಸಿದರು.

ನಯಾಪೈಸಾ ಚಳುವಳಿ: ಇದು ಇಡೀ ಜಿಲ್ಲೆಯಲ್ಲಿ - ಯಾಕೆ? ಮುಂಬೈನವರೆಗೂ ದೊಡ್ಡ ಸುದ್ದಿಯಾಯಿತು. ಕೆಂಬಾವುಟದ ಅಡಿಯಲ್ಲಿಯೇ ನಡೆದದ್ದು. ಸಿರ್ಸಿಯ ಹೋಟೆಲುಗಳಲ್ಲಿ ಒಂದು ಚಹಾಕ್ಕೆ 5 ಪೈಸೆ ಇದ್ದುದನ್ನು ಏಕಾಏಕಿ ಆರು ಪೈಸೆಗೆ ಏರಿಸಿದರು. ಜನ ಒಟ್ಟಾದರು. ಧಾರೇಶ್ವರರ ಬಳಿ ಬಂದು ನೇತೃತ್ವ ವಹಿಸಲು ಕೇಳಿದರು. 15 ದಿನ ಹೋರಾಟ ಸತ್ಯಾಗ್ರಹ ನಡೆಯಿತು. ಜೈಲನ್ನು ಕೂಡಾ ಕಾಣಲಾಯಿತು. ಆದರೆ ಹೋರಾಟದ ಫಲವಾಗಿ ಮತ್ತೆ ಚಹಾ ಒಂದಕ್ಕೆ 5 ಪೈಸೆ ಆಯಿತು. ಇದು ನಯಾಪೈಸೆ ಚಳುವಳಿ ಎಂದೇ ಹೆಸರಾಯಿತು. ಇದು ನಡೆದದ್ದು 1962 ಆಗಸ್ಟ್‌ನಲ್ಲಿ.

ಅಕ್ಕಿ ಚಳುವಳಿ: 12 ಆಣೆಗೆ (75 ಪೈಸೆ) ಒಂದು ಕಿ.ಲೋ. ಅಕ್ಕಿ ಇದ್ದದ್ದು ಒಂದುವರೆ ರೂಪಾಯಿ(1.50 ಪೈಸೆ) ಆಯಿತು. ಈ ಬೆಲೆ ಏರಿಕೆಯ ವಿರುದ್ಧ ದೊಡ್ಡ ಚಳುವಳಿ ನಡೆಯಿತು. ಆಗ ರಾಮಕೃಷ್ಣ ಹೆಗಡೆ ಸಚಿವರಾಗಿದ್ದರು. ಅವರು ಸಿರ್ಸಿಗೆ ಬರುವಾಗ 12 ಆಣೆಗೆ ಅಕ್ಕಿ ಕೆ.ಜಿ.ಯನ್ನು ಮಾಡಿಕೊಂಡೇ ಬರಬೇಕೆಂದು ಒತ್ತಾಯಿಸಿದೆವು. ದೊಡ್ಡ ಸಂಖ್ಯೆಯಲ್ಲಿ ಜನರು ಚಳುವಳಿಯಲ್ಲಿ ಭಾಗವಹಿಸಿದರು. ಅಧಿಕಾರಿಗಳಿಂದ ಬೆದರಿಕೆ, ಹೊಡೆತಗಳೆಲ್ಲವೂ ನಡೆದವು. ನಂತರ ರಾಮಕೃಷ್ಣ ಹೆಗಡೆ ಜಿಲ್ಲೆಯ ತನ್ನ ಕಾರ್ಯಕ್ರಮವನ್ನೇ ಮುಂದೂಡಬೇಕಾಯಿತು. ಹೀಗೆ ಅನೇಕ ಹೋರಾಟಗಳು ಕಮ್ಯುನಿಸ್ಟ್ ಪಕ್ಷದ ಅಡಿಯಲ್ಲಿ ನಡೆದವು. ಸಾಮಾನ್ಯವಾಗಿ ಜನಸಾಮಾನ್ಯರನ್ನು ಕಾಡುವ ಸಮಸ್ಯೆಗಳನ್ನೇ ಎತ್ತಿಕೊಳ್ಳುತ್ತಿದ್ದೆವು. ಏನೇ ಸಮಸ್ಯೆ ಬಂದರೂ ಜನರು ನಮ್ಮಲ್ಲಿ ಬರುತ್ತಿದ್ದರು. ಮತ್ತು ನಾವು ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಹಳ್ಳಿಹಳ್ಳಿಗಳಿಂದ ಜನ ಬರುತ್ತಿದ್ದರು.

ಜಿಲ್ಲೆಯ ಉಳಿದ ಭಾಗದಲ್ಲಿ ಪಕ್ಷದ ಕೆಲಸ ಹೇಗೆ ನಡೆದಿತ್ತು?

ನನಗೆ ಅದರ ಸಂಪೂರ್ಣ ನೆನಪು ಇಲ್ಲ. ಮಾಳ್ಸಿಕರ ಒಂದು ಕಡೆ ಸಂಘಟನೆ ಮಾಡುತ್ತಿದ್ದರು. ಶೇಷಗಿರಿರಾವ್ ಪಿಕಳೆ ಅಂಕೋಲಾ, ಕುಮಟಾ ಕಡೆ ರೈತ ಸಂಘ ಕಟ್ಟುತ್ತಿದ್ದರು. 1967 ರ ಸುಮಾರಿಗೆ ಸ್ಥಳೇಕರ್ ಮುಂಬೈಯಿಂದ ನಮ್ಮ ಜಿಲ್ಲೆಗೆ ಬಂದರು. ದಾಂಡೇಲಿಯಲ್ಲಿ ಕಛೇರಿ ಇತ್ತು. ಇದೇ ಸಂದರ್ಭದಲ್ಲಿ ನಾನು ಜಿಲ್ಲಾ ಕಾರ್ಯದರ್ಶಿ ಕೂಡ ಆದೆ.

ಮುಖ್ಯವಾಗಿ ದಾಂಡೇಲಿ ಭಾಗದಲ್ಲಿ ಸಿಐಟಿಯು ಮತ್ತು ಇತರೆಡೆ ರೈತ ಸಂಘ ಕಟ್ಟಿದೆವು. ಸಿರ್ಸಿ ಸುತ್ತಮುತ್ತಲೇ ಸಾವಿರಕ್ಕಿಂತ ಹೆಚ್ಚು ಸದಸ್ಯತ್ವ ಇತ್ತು. ಮೆಣಸಿ, ಕೋಲ್ ಸಿರ್ಸಿ, ಖಂಡಲ್ ಮತ್ತು ಗಟ್ಟದ ಕೆಳಗೆ ಕೂಡ ರೈತ ಸಂಘ ಇತ್ತು. ಹೋರಾಟ ನಡೆದಿದೆ.

ಮೊದಲು ನೀವು ಜೈಲು ಕಂಡಿದ್ದು ಯಾವಾಗ?

ಅಕ್ಕಿ ಚಳುವಳಿಯ ಸಂದರ್ಭದಲ್ಲಿ 45 ಜನರನ್ನು ಅರೆಸ್ಟ್ ಮಾಡಿದರು. ಹೆಂಗಸರನ್ನು ಸೇರಿಸಿದರು. ಸುಮಾರು ಒಂದುವರೆ ತಿಂಗಳು ಜೈಲಿನಲ್ಲಿದ್ದೆವು. ಧಾರೇಶ್ವರರನ್ನು ಗುಬ್ಬಿನಾಯಕ ಜಾಮೀನು ಅರಸಿ ಬಿಡಿಸಿದರು. ಸ್ಟೇಷನ್‌ನಿಂದ ಕೋರ್ಟಿಗೆ ಹೋಗುವಾಗ ಭರ್ಜರಿ ಮೆರವಣಿಗೆಯೊಂದಿಗೆ ಕರೆದುಕೊಂಡು ಹೋದರು. ಚೀನಾ ಯುದ್ಧದಲ್ಲಿ ಮತ್ತೆ ಧಾರೇಶ್ವರರನ್ನು ಬಂಧಿಸಿದರು. ಆಗ ಎಲ್ಲಾ ಜವಾಬ್ದಾರಿ ನನ್ನ ಮೇಲೆ ಬಿತ್ತು. ಈ ಕೇಸಿನಲ್ಲಿ ಎಲ್ಲಾ ಹಣವನ್ನು ಕಳೆದುಕೊಂಡೆವು.

ನಿಮ್ಮ ಮದುವೆ ಆಗಲಿಲ್ಲ ಯಾಕೆ?

ಹಿಂದೆ ಜೈಲಿಗೆ ಹೋದವರಿಗೆ ಹೆಣ್ಣು ಕೊಡುತ್ತಿರಲಿಲ್ಲ. ಯಾಕೆ ಜೈಲಿಗೆ ಹೋಗಿದ್ದರು ಎನ್ನುವುದೆಲ್ಲಾ ಮುಖ್ಯ ಅಲ್ಲ. ಹಾಗಾಗಿ ನಾನು ಜೈಲಿಗೆ ಹೋದವನಾಗಿದ್ದರಿಂದ ಹೆಣ್ಣು ಕೊಡಲು ಹಿಂದೆ-ಮುಂದೆ ನೋಡಿದರು. ನಾನೂ ಹೆಚ್ಚು ತಲೆ ಕೆಡಿಸಿಕೊಳ್ಳಲಿಲ್ಲ.

ಸಂಘಟನೆಗಾಗಿ ಹಣ ಎಲ್ಲಿಂದ ಹೇಗೆ ಸೇರಿಸುತ್ತಿದ್ದಿರಿ?

ಜನರಿಂದಲೇ ಸೇರಿಸುತ್ತಿದ್ದೆವು. ಕರಪತ್ರಗಳನ್ನು ಮಾಡಿ ಹಂಚುತ್ತಿದ್ದೆವು. ಸಭೆ ನಡೆದಾಗ ಜನರನ್ನೆಲ್ಲ ಹಣ ಕೇಳುತ್ತಿದ್ದೆವು. ಆಫೀಸನ್ನು ನಡೆಸಲು ತಿಂಗಳಿಗೆ 50 ರೂಪಾಯಿ ಬೇಕಾಗಿತ್ತು. ಪ್ರತಿ ಅಂಗಡಿಯಿಂದ ದಿನಕ್ಕೆ 10 ಪೈಸೆಯಂತೆ ವಸೂಲಿ ಮಾಡುತ್ತಿದ್ದೆವು. ಮತ್ತು ಅವರು ಪ್ರೀತಿಯಿಂದಕೊಡುತ್ತಿದ್ದರು. ತಿಂಗಳಿಗೆ 7-8 ಸಾವಿರ ಕೂಡ ಸಂಗ್ರಹಿಸಿದ್ದಿದೆ. ಕೆಂಬಾವುಟದ ಸಭೆ ಎಂದರೆ ಜನ ಬರುತ್ತಿದ್ದರು. ಧಾರೇಶ್ವರರ ಕಿಸೆಯಲ್ಲಿ 100 ರೂ ಇದ್ದರೆ ಒಂದು ಸಭೆ, ಒಂದು ಭಾಷಣ ನಡೆಸಿಯೇ ಸಿದ್ಧ. ತಿಂಗಳಿಗೆ ತಿಂಗಳೂ ಸಭೆ ನಡೆದದ್ದಿದೆ. ಸಿರ್ಸಿಯ ಬಿಡಕಿ ಬೈಲಿನಲ್ಲಿ ಸಭೆಗೆ ಕನಿಷ್ಟ 500-600 ಜನ ಸೇರುತ್ತಿದ್ದರು.

ಆಗಲೂ ಪಕ್ಷದ ಸಾಹಿತ್ಯದ ಮಾರಾಟ ನಡೆಯುತ್ತಿತ್ತೆ?

ಹೌದು, ಪಕ್ಷದ ಪತ್ರಿಕೆ ಬರುತ್ತಿತ್ತು. ಸುಮಾರು 25 ಪತ್ರಿಕೆ ಸಿರ್ಸಿಯೊಂದರಲ್ಲೇ ಹೋಗುತ್ತಿತ್ತು. ಕರಪತ್ರವನ್ನು ವ್ಯಾಪಕವಾಗಿ ಪ್ರಕಟಿಸಿ ಹಂಚುತ್ತಿದ್ದೆವು. ರಷ್ಯವು ಪ್ರಕಟಿಸಿದ ಅನೇಕ ಪುಸ್ತಕಗಳನ್ನು ಮಾರಾಟ ಮಾಡುತ್ತಿದ್ದೆವು. ಪಕ್ಷವನ್ನು ಕಟ್ಟುವಲ್ಲಿ ಪತ್ರಿಕೆ, ಸಾಹಿತ್ಯದ ಓದು ಮಹತ್ವದ ಪಾತ್ರ ವಹಿಸುತ್ತದೆ. ಈಗಲೂ ಉತ್ತರ ಕನ್ನಡದಲ್ಲಿ ಪುಸ್ತಕದ ಮಾರಾಟ ಜೋರಾಗಿ ನಡೆಯುತ್ತಿದೆ. ಜನರಿಗೆ ಸುಲಭವಾಗಿ ನಮ್ಮ ನಿಲುವು ತಿಳಿಸುವಲ್ಲಿ ಇದು ಅನುಕೂಲಕಾರಿ ಆಗಿದೆ.

ಸಂದರ್ಶನ: ವಿಠ್ಠಲ ಭಂಡಾರಿ

ನನ್ನದೊಂದು ಪ್ರಶ್ನೆ

ನಾನೊಂದು ಪ್ರಶ್ನೆ ಕೇಳುತ್ತೇನೆ
ಹಿಂದೂ ಮತವಾದಿಗಳಿಗೆ
ಮುಸ್ಲಿಂ, ಕ್ರೈಸ್ತರ ಮೇಲೆ ಏಕೆ
ಕಿಡಿಕಾರುತ್ತೀರಿ?
ನಿಮ್ಮವರೇ ಆದ ಅಸ್ಪೃಶ್ಯರ
ಅಸ್ಪೃಶ್ಯತೆ ಆಚರಿಸುತ್ತಿರುವವರ ಬಗ್ಗೆ
ಸೊಲ್ಲೆತ್ತುವುದಿಲ್ಲ ಏಕೆ?

ಸಾಗರದಾಚಿನ ಇತಿಹಾಸ ನಿಮಗೆ
ಅರ್ಥವಾಗುವುದಿಲ್ಲವೇಕೆ?
ರೋಮನ್ ಸಾಮ್ರಾಜ್ಯದ ಗುಲಾಮಗಿರಿ
ಇಂಗ್ಲೆಂಡಿನ ಜೀತ ಪದ್ಧತಿ
ಯಹೂದಿಗಳ ದಾಸ್ಯ-
ನೀಗ್ರೋಗಳ ಗುಲಾಮಗಿರಿ-
ಆ ನೆಲದಲ್ಲಿ ಮಾಯವಾಗುತ್ತಿರುವುದಕ್ಕೆ
ಕಾರಣಗಳೇನು?

ಹುಡುಕಿರಿ ನೀವು ಅಲ್ಲಿನ ಜನರ
ಮಾನವೀಯತೆಯನ್ನು
ಮಾನವನ ವ್ಯಕ್ತಿತ್ವ - ಮಾನವೀಯತೆಗೆ
ಬಿಡಿ ಕಾಸಿನ ಗೌರವವಿಲ್ಲ ನಿಮ್ಮ ಧರ್ಮಕ್ಕೆ
ಮೇಲು ಕೀಳಿನ ಮನು ನೀತಿಗಳೇ
ನಿಮ್ಮ ಸರ್ವಸ್ವ
ಹೊಲಸೆಬ್ಬಿಸುತ್ತಿವೆ ಈ ನೆಲವನ್ನು-
ನೋಡಿ, ನಾನು ಹೇಳುತ್ತೇನೆ
ನಿಮ್ಮ ಈ ಅಂದಕಾರದ ಭಾವನೆಗಳ
ಕುಂಡದಿಂದ
ಏಳುತ್ತದೆ ಜ್ವಾಲೆ.
ಅದು ಸಾರುತ್ತದೆ...
ಸಮಾನತೆ ಸಹಬಾಳ್ವೆಯನ್ನು
ಆ ದಿನಕ್ಕಾಗಿ ಕಾಯುತ್ತೀರಿ ನೀವು

- ಗೋಪಾಲಕೃಷ್ಣ ಅರಳಹಳ್ಳಿ

Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್.ನಾಗರಾಜ್, ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ಸ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ